ಕರ್ನಾಟಕ ವಿಧಾನ ಸಭೆ

ಹದಿಮೂರನೇ ವಿಧಾನಸಭೆ

ಎರಡನೇ ಅಧಿವೇಶನ

ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ವಿಧೇಯಕ, 2009

(2009ರ ವಿಧಾನಸಭೆಯ ವಿಧೇಯಕ ಸಂಖ್ಯೆ 11)

ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) ಅಧಿನಿಯಮ, 1975ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) ಅಧಿನಿಯಮ, 1975ನ್ನು (1975ರ ಕರ್ನಾಟಕ ಅಧಿನಿಯಮ 23) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತೊಂಬತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ** .- (1) ಈ ಅಧಿನಿಯಮವನ್ನು ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ಅಧಿನಿಯಮ, 2009 ಎಂದು ಕರೆಯತಕ್ಕದ್ದು.

(2) ಇದು 2008ರ ನವೆಂಬರ್ 22ನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. **ಹೊಸ 5ನೇ ಪ್ರಕರಣದ ಸೇರ್ಪಡೆ.**- ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) ಅಧಿನಿಯಮ 1975ರ (1975ರ ಕರ್ನಾಟಕ ಅಧಿನಿಯಮ 23) 4ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :-

"**5 ಕೆಲವೊಂದು ಪ್ರಕರಣಗಳಲ್ಲಿ ಅನುಮತಿ.**- 4ನೇ ಪ್ರಕರಣದಲ್ಲಿ ಏನೇ ಇದ್ದರೂ, ರಾಜ್ಯ ಸರ್ಕಾರವು ನಿರ್ಮಾಣ, ನಿರ್ವಹಣೆ, ವ್ಯವಸ್ಥಾಪನೆ, ಒಳಕೆ ಮತ್ತು ಅಂತಹುದೇ ಇತರ ಉದ್ದೇಶಗಳ ಸಂಬಂಧದಲ್ಲಿ ತಾನು ವಿಧಿಸಬಹುದಾದಂಥ ಷರತ್ತುಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟು,-

(ಎ) ಇಂದಿರಾ ಗಾಂಧಿ ಸಂಗೀತ ಕಾರಂಜಿ ಉದ್ಯಾನವನದಲ್ಲಿ 1223 ಚದರ ಮೀಟರುಗಳನ್ನು ರಸ್ತೆಗಳ ಅಗಲೀಕರಣದ ಉದ್ದೇಶಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ, ಮತ್ತು

(ಬಿ) ಲಾಲ್‌ಬಾಗ್ ಉದ್ಯಾನವನದ ಪಶ್ಚಿಮ ದ್ವಾರದ, ಪಶ್ಚಿಮ ಭಾಗದ ಕಡೆಗಿನ (ಪ್ರಸ್ತುತ ಆರ್.ವಿ. ರಸ್ತೆ ಎಂದು ಕರೆಯಲಾಗುತ್ತಿರುವ) ಕಾಂಪೌಂಡು ಗೋಡೆಯ ಉದ್ದಕ್ಕೂ 1135.18 ಚದರ ಮೀಟರುಗಳನ್ನು ಬೆಂಗಳೂರು ಮೆಟ್ರೋ ರೈಲು ಕಾರ್ಪೋರೇಷನ್ ಲಿಮಿಟೆಡ್‌ಗೆ ಬೆಂಗಳೂರಿನ ಮೆಟ್ರೊ ರೈಲು ಯೋಜನೆಯಲ್ಲಿ ಮೇಲು ನಿರ್ಮಾಣವನ್ನು ನಿರ್ಮಿಸುವ ಉದ್ದೇಶಕ್ಕಾಗಿ,

- ಪರಭಾರೆ ಮಾಡಬಹುದು."

3. **ನಿರಸನ ಮತ್ತು ಉಳಿಸುವಿಕೆಗಳು.**- (1) ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ಅಧ್ಯಾದೇಶ, 2008ನ್ನು (2008ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 4) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸನಗೊಳಿಸಿದ್ದಾಗ್ಯೂ, ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿ ಮಾಡಲಾದ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೂಲಕ ತಿದ್ದುಪಡಿ ಮಾಡಲಾದ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಇಂದಿರಾಗಾಂಧಿ ಸಂಗೀತ ಕಾರಂಜಿ ಉದ್ಯಾನವನದಿಂದ ಒಂದಿಷ್ಟು ಪ್ರದೇಶವನ್ನು ಬೆಂಗಳೂರು ಮಹಾನಗರ ಪಾಲಿಕೆಗೆ ಮತ್ತು ಲಾಲ್‌ಬಾಗಿಗೆ ಸೇರಿದ ಒಂದಿಷ್ಟು ಪ್ರದೇಶವನ್ನು ಬೆಂಗಳೂರು ಮೆಟ್ರೊ ರೈಲು ಕಾರ್ಪೊರೇಶನ್ ಲಿಮಿಟೆಡ್‌ಗೆ ಈ ಕೆಳಕಂಡ ಉದ್ದೇಶಗಳಿಗಾಗಿ ಎಂದರೆ:-

(i) ಬೃಹತ್ ಮಹಾನಗರ ಪಾಲಿಕೆಗೆ ರಸ್ತೆ ಅಗಲೀಕರಣಕ್ಕಾಗಿ ಮತ್ತು

(ii) ಬೆಂಗಳೂರು ಮೆಟ್ರೋ ರೈಲು ಯೋಜನೆಗೆ ಮೇಲು ನಿರ್ಮಾಣವನ್ನು ನಿರ್ಮಿಸುವುದಕ್ಕಾಗಿ.

ಪರಭಾರೆ ಮಾಡುವುದಕ್ಕೆ ಉಪಬಂಧವನ್ನು ಕಲ್ಪಿಸಿ ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) ಅಧಿನಿಯಮ, 1975 ಕ್ಕೆ ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಈ ವಿಷಯವು ತುರ್ತು ಸ್ವರೂಪದ್ದಾಗಿರುವುದರಿಂದ ಮತ್ತು ವಿಧಾನ ಮಂಡಳದ ಎರಡೂ ಸದನಗಳು ಅಧಿವೇಶನದಲ್ಲಿಲ್ಲದ್ದಿದ್ದುದರಿಂದ ಕರ್ನಾಟಕದ ರಾಜ್ಯಪಾಲರು ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ಅಧ್ಯಾದೇಶ 2008 ಅನ್ನು (2008 ರ ಕರ್ನಾಟಕ ಅಧ್ಯಾದೇಶ 4) ಪ್ರಖ್ಯಾಪಿಸಿರುತ್ತಾರೆ.

ಈ ವಿಧೇಯಕವನ್ನು ಸದರಿ ಅಧ್ಯಾದೇಶದ ಬದಲಿಗೆ ತರಲಾಗುತ್ತಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಕ್ರಮದಿಂದ ಯಾವ ಹೆಚ್ಚುವರಿ ವೆಚ್ಚವು ಉಂಟಾಗುವುದಿಲ್ಲ.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಗಳ ನಿಯಮಗಳ 80ನೇ ನಿಯಮದ (1)ನೇ ಉಪನಿಯಮದ ಮೂಲಕ ಅಗತ್ಯಪಡಿಸಲಾದಂತೆ ವಿವರಣಾತ್ಮಕ ಹೇಳಿಕೆ.

ಇಂದಿರಾಗಾಂಧಿ ಸಂಗೀತ ಕಾರಂಜಿ ಉದ್ಯಾನವನದಿಂದ ಒಂದಿಷ್ಟು ಪ್ರದೇಶವನ್ನು ಬೆಂಗಳೂರು ಮಹಾನಗರ ಪಾಲಿಕೆಗೆ ಮತ್ತು ಲಾಲ್‌ಬಾಗಿಗೆ ಸೇರಿದ ಒಂದಿಷ್ಟು ಪ್ರದೇಶವನ್ನು ಬೆಂಗಳೂರು ಮೆಟ್ರೊ ರೈಲು ಕಾರ್ಪೊರೇಶನ್ ಲಿಮಿಟೆಡ್‌ಗೆ ಈ ಕೆಳಕಂಡ ಉದ್ದೇಶಗಳಿಗಾಗಿ ಎಂದರೆ:-

(i) ಬೃಹತ್ ಮಹಾನಗರ ಪಾಲಿಕೆಗೆ ರಸ್ತೆ ಅಗಲೀಕರಣಕ್ಕಾಗಿ ಮತ್ತು

(ii) ಬೆಂಗಳೂರು ಮೆಟ್ರೋ ರೈಲು ಯೋಜನೆಗೆ ಮೇಲು ನಿರ್ಮಾಣವನ್ನು ನಿರ್ಮಿಸುವುದಕ್ಕಾಗಿ.

ಪರಭಾರೆ ಮಾಡುವುದಕ್ಕೆ ಉಪಬಂಧವನ್ನು ಕಲ್ಪಿಸಿ ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) ಅಧಿನಿಯಮ, 1975 ಕ್ಕೆ ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಈ ವಿಷಯವು ತುರ್ತು ಸ್ವರೂಪದ್ದಾಗಿರುವುದರಿಂದ ಮತ್ತು ವಿಧಾನ ಮಂಡಳದ ಎರಡೂ ಸದನಗಳು ಅಧಿವೇಶನದಲ್ಲಿಲ್ಲದ್ದಿದ್ದುದರಿಂದ ಕರ್ನಾಟಕದ ರಾಜ್ಯಪಾಲರು ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ಅಧ್ಯಾದೇಶ 2008 ಅನ್ನು (2008 ರ ಕರ್ನಾಟಕ ಅಧ್ಯಾದೇಶ 4) ಪ್ರಖ್ಯಾಪಿಸಿರುತ್ತಾರೆ.

ಈ ವಿಧೇಯಕವನ್ನು ಸದರಿ ಅಧ್ಯಾದೇಶದ ಬದಲಿಗೆ ತರಲಾಗುತ್ತಿದೆ.

ಉಮೇಶ್ ವಿ. ಕತ್ತಿ
ತೋಟಗಾರಿಕಾ ಸಚಿವರು

ಎಸ್.ಜಿ. ವಾಣೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ.

ಕರ್ನಾಟಕ ವಿಧಾನ ಸಭೆ

ಹದಿಮೂರನೇ ವಿಧಾನಸಭೆ

ಎರಡನೇ ಅಧಿವೇಶನ

ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) ವಿಧೇಯಕ, 2009

(2009ರ ವಿಧಾನಸಭೆಯ ವಿಧೇಯಕ ಸಂಖ್ಯೆ 7)

ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1976ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಕರ್ನಾಟಕ ಪೌರನಿಗಮಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14) ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಏವತ್ತೊಂಬತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) ಅಧಿನಿಯಮ, 2009 ಎಂದು ಕರೆಯತಕ್ಕದ್ದು.

(2) ಇದು ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ಅಧ್ಯಾದೇಶ 2009 (2009ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 1) ಜಾರಿಗೆ ಬಂದ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. **3ನೇ ಪ್ರಕರಣದ ತಿದ್ದುಪಡಿ.**- ಕರ್ನಾಟಕ ಪೌರನಿಗಮಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ), 3ನೇ ಪ್ರಕರಣದಲ್ಲಿ (2)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, "ಬೆಂಗಳೂರು ನಗರಪಾಲಿಕೆ"ಯನ್ನು "ಬೃಹತ್ ಬೆಂಗಳೂರು ಮಹಾನಗರಪಾಲಿಕೆ" ಎಂದು ಕರೆಯತಕ್ಕದ್ದು."

3. **108ಎ ಹೊಸ ಪ್ರಕರಣದ ಸೇರ್ಪಡೆ.**- ಮೂಲ ಅಧಿನಿಯಮದ 108ಎ ಪ್ರಕರಣದ ತರುವಾಯ, ಈ ಮುಂದಿನ ಹೊಸ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:-

"108ಎ. **ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಂಬಂಧದಲ್ಲಿ ಆಸ್ತಿ ತೆರಿಗೆಯ ವಿಧಿಮುಖಿಕೆ ಮತ್ತು ಲೆಕ್ಕಾಚಾರ.**- (1) ಈ ಅಧಿನಿಯಮದಲ್ಲಿ ಇದಕ್ಕೆ ವಿರುದ್ಧವಾಗಿ ಏನೇ ಇದ್ದರೂ, ಈ ಅಧಿನಿಯಮದಡಿಯಲ್ಲಿ ಉಪಬಂಧಿಸಲಾದಂಥ ವಿನಾಯಿತಿಗಳಿಗೆ ಮತ್ತು ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರದೇಶದ ನಗರದೊಳಗೆ ಇರುವ ಎಲ್ಲಾ ಕಟ್ಟಡಗಳಿಗೆ ಅಥವಾ ಜಾಗಗಳಿಗೆ ಅಥವಾ ಅವೆರಡಕ್ಕೂ ಪ್ರತಿವರ್ಷವೂ ಈ ಮುಂದಿನ ರೀತಿಯಲ್ಲಿ ಆಸ್ತಿ ತೆರಿಗೆಯನ್ನು ವಿಧಿಸತಕ್ಕದ್ದು.

(2) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು, 108ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂತೆ ನಿರ್ಣಯವನ್ನು ಹೊರಡಿಸಿ, ಕಟ್ಟಡದ, ಜಾಗದ ಅಥವಾ ಅವೆರಡರ ತೆರಿಗೆ ವಿಧಿಸಬಹುದಾದ ವಾರ್ಷಿಕ ಮೌಲ್ಯದ ಶೇಕಡ 20ಕ್ಕೆ ಕಡಿಮೆಯಿಲ್ಲದ ಮತ್ತು ಶೇಕಡ 25ನ್ನು ಮೀರದ ಶೇಕಡಾವಾರು ದರದಲ್ಲಿ ಆಸ್ತಿ ತೆರಿಗೆಯನ್ನು ವಿಧಿಸತಕ್ಕದ್ದು. ಒಂದು ಕಟ್ಟಡಕ್ಕೆ, ಜಾಗಕ್ಕೆ ಅಥವಾ ಅವೆರಡಕ್ಕೂ ತೆರಿಗೆ ವಿಧಿಸಬಹುದಾದ ವಾರ್ಷಿಕ ಮೌಲ್ಯವನ್ನು ಲೆಕ್ಕಾಚಾರ ಮಾಡಲು ಮೊದಲು ಕಟ್ಟಡದ, ಜಾಗದ ಅಥವಾ ಅವೆರಡರ ಒಟ್ಟು ನಿರ್ಮಿತ ಪ್ರದೇಶವನ್ನು ಸಂದಾಯವಾದ "ಘಟಕ ಪ್ರದೇಶ ಮೌಲ್ಯ" ದಿಂದ ಗುಣಾಕಾರ ಮಾಡಿ ಇಂದ ಗುಣಲಬ್ಧವನ್ನು ಹತ್ತು ತಿಂಗಳುಗಳಿಗೆ ಲೆಕ್ಕ ಹಾಕತಕ್ಕದ್ದು ಮತ್ತು ಕಟ್ಟಡಕ್ಕೆ ಆಗಿರುವ ವಯಸ್ಸಿನ ಆಧಾರದ ಮೇಲೆ ನಿಯಮಿಸಬಹುದಾದಂಥ ದರದಲ್ಲಿ ಸವಕಳಿಯನ್ನು ಅದರಿಂದ ಕಳೆಯತಕ್ಕದ್ದು.

ವಿವರಣೆ: ಈ ಪ್ರಕರಣದ ಉದ್ದೇಶಕ್ಕಾಗಿ, "ಘಟಕ ಪ್ರದೇಶ ಮೌಲ್ಯ" ಎಂದರೆ, ಸಮೂಹ ಮೌಲ್ಯ ನಿರ್ಣಯ ವಿಧಾನ ಅಥವಾ ಸ್ಥಿರಾಸ್ತಿ ಮಾರುಕಟ್ಟೆ ಮಾಹಿತಿ ಅಥವಾ ಇತರ ಸಂಬಂಧಿತ ಮೂಲ ಅಥವಾ ಈ ಮೂಲಗಳ ಸಂಯೋಜನೆಯ ಮೂಲಕ, ಕಟ್ಟಡ ನಿರ್ಮಾಣದ ರೀತಿ, ಜಾಗ ಅಥವಾ ಕಟ್ಟಡವನ್ನು ಉಪಯೋಗಿಸಿರುವ ಸ್ವರೂಪ, ಜಾಗ ಜಾಗದ ವಿಸ್ತೀರ್ಣ, ಕಟ್ಟಡ ನಿರ್ಮಿತ ಪ್ರದೇಶ, ಕಟ್ಟಡದ ವಯಸ್ಸು, ದಸ್ತಾವೇಜುಗಳ ಕಟ್ಟಡದಲ್ಲಿ ವಾಹನಗಳ ನಿಲುಗಡೆಗೆ ಜಾಗ ಮಾಡಿ ನಿಲುಗಡೆ ಅವಕಾಶ ಕಲ್ಪಿಸಿರುವ ಪ್ರದೇಶ ಮತ್ತು ನಿಯಮಿಸಬಹುದಾದಂಥ ಇತರ ಮಾನದಂಡಗಳನ್ನು ಗಮನದಲ್ಲಿಟ್ಟುಕೊಂಡು ತಾನು ಪರ್ಯಾಪ್ತ ಮತ್ತು ಸಮಂಜಸವೆಂದು ಪರಿಗಣಿಸಿ ಅಥವಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ನಿರ್ಧರಿಸಿದ ಸರಾಸರಿ ಮಾರುಕಟ್ಟೆ ದರದ ಆಧಾರದ ಮೇಲೆ. ಪ್ರತಿ ತಿಂಗಳಿಗೆ ಪ್ರತಿ ಚದರಡಿಯಂದ ನಿರೀಕ್ಷಿಸಲಾದ ಆದಾಯದ ಪರಾಸರಿ ದರ. ವಲಯಗಳಾಗಿ ವರ್ಗೀಕರಿಸಿದ ವಿವಿಧ ಪ್ರದೇಶಕ್ಕೆ ಅಥವ ಜಿಲ್ಲೆ, ಜಾಗ ಜಾಗದನ್ನು ಅಥವಾ ಕಟ್ಟಡವನ್ನು ಬಳಸಿದ ವಿವಿಧ ಸ್ವರೂಪಕ್ಕೆ ಮತ್ತು ವಿವಿಧ ವರ್ಗದ ಕಟ್ಟಡಗಳು ಮತ್ತು ಜಾಗ ಜಾಗಗಳಿಗೆ ಪ್ರತ್ಯೇಕ ದರಗಳನ್ನು ನಿಗದಿಪಡಿಸಬಹುದು.

ಪರಂತು, "ಘಟಕ ಪ್ರದೇಶ ಮೌಲ್ಯ" ವನ್ನು ಕುರಿತು ಅದಲಿಂದ ಖಾಲಿತರಾಗಬಹುದಾದ ವ್ಯಕ್ತಿಗಳ ಮಾಹಿತಿಗಾಗಿ ಈ ಬಗ್ಗೆ, ಯಾವುದೇ ಮನವಿಯನ್ನು ಸಲ್ಲಿಸುವುದಕ್ಕೆ ಅಥವಾ ಸಲಹೆಗಳನ್ನು ನೀಡುವುದಕ್ಕೆ ಒಂದು ಅವಕಾಶವನ್ನು ಒದಗಿಸುವುದಕ್ಕಾಗಿ, ಅದನ್ನು ಈ ಹಿಂದೆಯೇ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ್ದ ಹೊರತು, ಅಂಥ ಯಾವ ಘಟಕ ಪ್ರದೇಶ ಮೌಲ್ಯವೂ ಜಾರಿಗೆ ಬರತಕ್ಕದ್ದಲ್ಲ;

ಮತ್ತೂ ಪರಂತು, ಒಂದು ಕಟ್ಟಡಕ್ಕೆ ಹೊಂದಿಕೊಂಡಿರುವ ಮತ್ತು ಅಂಥ ಕಟ್ಟಡವನ್ನು ಕಟ್ಟಿರುವ ಪ್ರದೇಶದ ಮೂರನೇ ಒಂದರಷ್ಟನ್ನು ಮೀರದ ವಿಸ್ತೀರ್ಣದ, ಭೂಮಿಗೆ, ಆಸ್ತಿ ತೆರಿಗೆಯಿಂದ ವಿನಾಯಿತಿ ನೀಡತಕ್ಕದ್ದು;

ಅಷ್ಟೇ ಅಲ್ಲದೆ, ಅಧಿಸೂಚಿಸಬಹುದಾದಂಥ ಪರಿಸ್ಥಿತಿಗಳು ಮತ್ತು ಅಂಥ ಸನ್ನಿವೇಶಗಳಿಗೊಳಪಟ್ಟು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು,-

(ಎ) ಕರ್ನಾಟಕ ಕೊಳಚೆ ಪ್ರದೇಶ ನಿರ್ಮೂಲನಾ ಮಂಡಲಿಯಿಂದ ಅಥವಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರಿಂದ ಕೊಳಚೆ ಪ್ರದೇಶವೆಂದು ಘೋಷಿಸಲ್ಪಟ್ಟಿರುವ ಒಂದು ಪ್ರದೇಶದಲ್ಲಿರುವ 200 ಚದರಡಿಗಿಂತಲೂ ಕಡಿಮೆ ವಿಸ್ತೀರ್ಣದ ಕಟ್ಟಡ ನಿರ್ಮಿತ ಪ್ರದೇಶದ; ಮತ್ತು

(ಜಿ) ನಿವಾಸೇತರ ಕಟ್ಟಡದಲ್ಲಿ ವಾಹನ ನಿಲುಗಡೆ ಪ್ರದೇಶವಾಗಿ ಉಪಯೋಗಿಸುತ್ತಿದ್ದು ಅದರ ಮಾಲೀಕ ಅಥವಾ ಅಧಿಭೋಗದಾರನು ಅದರ ಉಪಯೋಗಕ್ಕಾಗಿ ವಾರ್ಷಿಕ ಮಾಡಿರುವ ಪ್ರದೇಶದ,

(ಸಿ) ಅವರು ಸೂಕ್ತವೆಂದು ಭಾವಿಸಬಹುದಾದಂಥ ಯಾವುದೇ ಇತರ ವರ್ಗಗಳ ಕಟ್ಟಡ ಅಥವಾ ನಿರ್ಮಿತಿಯ,

-ಸಂಬಂಧದಲ್ಲಿ, ವಲಯ ವರ್ಗೀಕರಣವನ್ನು ಗಣನೆಗೆ ತೆಗೆದುಕೊಳ್ಳದೆ, (2)ನೇ ಉಪ ಪ್ರಕರಣದ ಅಡಿಯಲ್ಲಿನ ತೆರಿಗೆಗೆ ಬದಲಾಗಿ ಒಂದು ಇತರಂಟು ದೊತ್ತವನ್ನು ವಾರ್ಷಿಕ ತೆರಿಗೆಯನ್ನಾಗಿ ನಿಗದಿಪಡಿಸಬಹುದು.

(3) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಸರ್ಕಾರಿ ಭೂಮಿಯಲ್ಲಿ ಯಾವುದೇ ಸ್ಥಳೀಯ ನಿಕಾಯದ ಭೂಮಿಯಲ್ಲಿ ಯಾವುದೇ ಶಾಸನಬದ್ಧ ನಿಕಾಯದ ಭೂಮಿಯಲ್ಲಿ ಅಥವಾ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಒಂದು ಸಂಸ್ಥೆಗೆ ಸೇರಿರುವ ಭೂಮಿಯಲ್ಲಿ ಕಾನೂನು ಪಾಲಿಸಿದಾಗಿ ನಿರ್ಮಿಸಿದ ಕಟ್ಟಡವನ್ನು ಹೊರತುಪಡಿಸಿ, ಕಟ್ಟಡದ ಬೈಲಾ ಉಪಬಂಧಗಳನ್ನು ಉಲ್ಲಂಘಿಸಿ ಕಟ್ಟಿರುವ ಕಟ್ಟಡದ ಅಥವಾ ಅನಧಿಕೃತ ಲೇಔಟ್‌ನಲ್ಲಿ ಅಥವಾ ರಸ್ತೆಯ ಭೂಮಿಯಲ್ಲಿ ಕಟ್ಟಿರುವ ಕಟ್ಟಡ ಅಥವಾ ಅಧಿಭೋಗ ಪ್ರಮಾಣ ಪತ್ರ ಅಥವಾ ಮುಕ್ತಾಯ ಪ್ರಮಾಣಪತ್ರವನ್ನು ಪಡೆದುಕೊಳ್ಳದೇ ವಾಸ ಮಾಡುತ್ತಿರುವ ಕಟ್ಟಡವೂ ಸೇರಿದಂತೆ, ಎಲ್ಲಾ ಕಟ್ಟಡಗಳು, ಹಾಲ ಜಾಗಗಳಿಗೆ ಅಥವಾ ಅವೆರಡಕ್ಕೂ ಆಸ್ತಿ ತೆರಿಗೆಯನ್ನು ವಿಧಿಸಬಹುದು ಮತ್ತು ವಸೂಲು ಮಾಡಬಹುದು. ಅಂಥ ಕಟ್ಟಡಗಳಿಂದ ವಸೂಲು ಮಾಡಿದ ಆಸ್ತಿ ತೆರಿಗೆಯ ಲೆಕ್ಕಪತ್ರವನ್ನು ಒಂದು ಪ್ರತ್ಯೇಕ ಲಿಜಸ್ಟರಿನಲ್ಲಿ ಇಟ್ಟುಕೊಂಡು ಬರತಕ್ಕದ್ದು;

ಪರಂತು, ಈ ಪ್ರಕರಣದಡಿಯಲ್ಲಿ ಅಂಥ ಕಟ್ಟಡಗಳ ಸಂಬಂಧದಲ್ಲಿ ಆಸ್ತಿ ತೆರಿಗೆಯನ್ನು ವಿಧಿಸಿ ವಸೂಲು ಮಾಡುವುದು, ಮಾಡಿದ ಯಾವುದೇ ಉಲ್ಲಂಘನೆಯನ್ನು ಸಕ್ರಮಗೊಳಿಸಲು ಯಾವುದೇ ಹಕ್ಕನ್ನಾಗಲಿ, ಅಂಥ ಕಟ್ಟಡಕ್ಕೆ ಹಕ್ಕುಸ್ವಾಮ್ಯ, ಒಡೆತನ ಅಥವಾ ಕಾನೂನಿನ ಸ್ಥಾನವಿನವನ್ನಾಗಲಿ ದೊರಕಿಸಿ ಕೊಡುವುದಿಲ್ಲ. ಅಂಥ ಕಟ್ಟಡಗಳು ಕಾನೂನಿನ ಉಲ್ಲಂಘನೆಗಾಗಿ ರೀ ಅಧಿನಿಯಮದ ಅಥವಾ ಯಾವುದೇ ಇತರ ಕಾನೂನಿನ ಉಪಬಂದಗಳನ್ವಯ ಯಾವುದೇ ಕ್ರಮಕ್ಕೆ ಗುರಿಯಾಗಲು ಯಾವಾಗಲೂ ಬದ್ಧವಾಗಿರತಕ್ಕದ್ದು.

(4) ನಿವಾಸದ ಉದ್ದೇಶಕ್ಕಾಗಿ ಉಪಯೋಗಿಸುತ್ತಿರುವ ಸ್ವಂತ ವಾಸದ ಕಟ್ಟಡದ ಮೇಲೆ ಮತ್ತು ನಗರ ಪಾಲಿಕೆಯ ಶಿಫಾರಸ್ಸಿನ ಮೇಲೆ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂಥ ನಿವಾಸೇತರ ಉದ್ದೇಶಕ್ಕಾಗಿ ಸ್ವಂತಕ್ಕೆ ಬಳಸುತ್ತಿರುವ ಕಟ್ಟಡದ ವರ್ಗದ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ಆಸ್ತಿ ತೆರಿಗೆಯನ್ನು ಶೇಕಡಾ ಐವತ್ತರಷ್ಟು ಕಡಿಮೆ ಮಾಡತಕ್ಕದ್ದು.

(5) 107, 110, 111, 112, 128, 129 ಮತ್ತು 138ನೇ ಪ್ರಕರಣಗಳಲ್ಲಿ ಇರುವ ಉಪಬಂಧಗಳು ಈ ಪ್ರಕರಣದ ಉಪಬಂಧಗಳಿಗೆ ಅನುಸಂಗತವಾಗದೇ ಇರುವಷ್ಟರ ಮಟ್ಟಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಯಥೋಚಿತ ಬದಲಾವಣೆಗಳೊಂದಿಗೆ ಅನ್ವಯವಾಗತಕ್ಕದ್ದು;

ಪರಂತು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಕರನಿರ್ಧರಣೆ ಮಾಡಿದ ಆಸ್ತಿಗಳ ಸಂಬಂಧದಲ್ಲಿ ರಾಜ್ಯ ಸರ್ಕಾರವು ಪ್ರತ್ಯೇಕ ಕಾಯಿದೆಯ ಮೂಲಕ, ನಮೂನೆ ಅಥವಾ ಲಿಜಸ್ಟರನ್ನು ನಿಯಮಿಸಬಹುದು. ಕರನಿರ್ಧರಣೆ ಮಾಡಲಾದ ಬೇರೆ ಬೇರೆ ವರ್ಗದ ಆಸ್ತಿಗೆ ಬೇರೆ ಬೇರೆ ಲಿಜಸ್ಟರುಗಳನ್ನು ನಿಯಮಿಸಬಹುದು.

(6) ಆಸ್ತಿ ತೆರಿಗೆಯನ್ನು ಪಾವತಿಸಲು ಮುಖ್ಯವಾಗಿ ಹೊಣೆಗಾರನಾದ ವ್ಯಕ್ತಿಯು, ತೆರಿಗೆಯನ್ನು ಎರಡು ಸಮನಾದ ಕಂತುಗಳಲ್ಲಿ ಸಂದಾಯ ಮಾಡತಕ್ಕದ್ದು. ಮೊದಲನೆಯ ಕಂತನ್ನು ಪ್ರತಿ ಆರ್ಥಿಕ ವರ್ಷದ ಮೇ 30 ರೊಳಗೆ ಮತ್ತು ಎರಡನೆಯದನ್ನು ಸಪ್ಟೆಂಬರ್ 29ರೊಳಗೆ ಸಂದಾಯ ಮಾಡತಕ್ಕದ್ದು. ಹೀಗಿದ್ದರೂ ಆಸ್ತಿ ತೆರಿಗೆಯನ್ನು ಸಂದಾಯ ಮಾಡಲು ಮುಖ್ಯವಾಗಿ ಹೊಣೆಗಾರನಾದ ಮಾಲೀಕ ಅಥವಾ ಅಧಿಭೋಗದಾರ ಅಥವಾ ವ್ಯಕ್ತಿಯು ಒಂದೇ ಕಂತಿನಲ್ಲಿ ಸಂದಾಯ ಮಾಡುವುದನ್ನೂ ಅಯ್ಕೆ ಮಾಡಿಕೊಳ್ಳಬಹುದು;

ಪರಂತು, 2008-09ನೇ ವರ್ಷಕ್ಕೆ ಮತ್ತು ಅದರ ನಂತರದ ವರ್ಷಗಳಿಗೆ ಸಂಬಂಧಪಟ್ಟಂತೆ ಮೊದಲನೆಯ ಕಂತನ್ನು ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ಅಧಿನಿಯಮ, 2006ರ ಪ್ರಾರಂಭದ ದಿನಾಂಕದಿಂದ ಅವಧಿಯು ದಿನಗಳೊಳಗಾಗಿ ಸಂದಾಯ ಮಾಡತಕ್ಕದ್ದು ಮತ್ತು ಎರಡನೆಯ ಕಂತನ್ನು ಅದರ ನಂತರದ ಮೂವತ್ತು ದಿನಗಳೊಳಗಾಗಿ ಪಾವತಿಸತಕ್ಕದ್ದು;

ಮತ್ತೂ ಪರಂತು, ತೆರಿಗೆಯನ್ನು ಪಾವತಿಸಲು ಹೊಣೆಗಾರನಾದ ಮಾಲೀಕ ಅಥವಾ ಅಧಿಭೋಗದಾರನು 2008-09ನೇ ವರ್ಷದಲ್ಲಿ ಸೇರಿದಂತೆ ಇಡೀ ವರ್ಷಕ್ಕೆ ತೆರಿಗೆಯನ್ನು ಪ್ರತಿ ವರ್ಷದ ಪ್ರಾರಂಭದ ದಿನಾಂಕದಿಂದ ಒಂದು ತಿಂಗಳೊಳಗೆ ಏಪರ ಪತ್ರವನ್ನು ಸಲ್ಲಿಸಿ ತೆರಿಗೆಯನ್ನು ಪಾವತಿಸಿದರೆ, ಆತನು ಸಂದಾಯ ಮಾಡತಕ್ಕ ತೆರಿಗೆಯ ಮೇಲೆ ಶೇಕಡಾ ಏದರ ಲಿಯಾಯಿತಿ ನೀಡತಕ್ಕದ್ದು;

ಅಷ್ಟೇ ಅಲ್ಲದೆ ರಾಜ್ಯ ಸರ್ಕಾರವು ದೌರಾಗಮದ ಶಿಫಾರಸ್ಸಿನ ಮೇಲೆ ಅಧಿಸೂಚನೆಯ ಮೂಲಕ, 2008-09 ಹಾಗೂ 2010-2015ನೇ ಪತ್ರಾಸಿನ ಸಾಲಿಗೆ ಸಂಬಂಧಿಸಿದಂತೆ ದಂಡಪಿಲ್ಲದೆ ಸ್ವತ್ತು ತೆರಿಗೆಯನ್ನು ಸಂದಾಯ ಮಾಡಲು ಮತ್ತು ಶೇಕಡ ರರ ಲಿಯಾಯಿತಿ ಸೌಲಭ್ಯವನ್ನು ಪಡೆಯಲು ಕಾಲಪಲಿಮಿತಿಯನ್ನು ವಿಸ್ತರಣೆ ಮಾಡಬಹುದು.

ಅದೂ ಅಲ್ಲದೆ, ಸಿಯಮಿಸಬಹುದಾದ ಲಿಖಿತಯಲ್ಲಿ ಅನಿರ್ದಿಷ್ಟ ಅವ್ಧಿ ಮಾಡಿ ಪರಿಶೀಲಿಸುವುದಕ್ಕೆ ಒಳಪಟ್ಟು, 2008-09ರ ಅಪಭೀಗಾಲಿ ಮೊದಲಜಾಲಿ ದಾಖಲುಮಾಡಿದ ತೆರಿಗೆ ವಿವರ ಪತ್ರವು ಪ್ರತಿ ಖ್ಯಾತ್ ವರ್ಷಕ್ಕಾಗಿ ಅನ್ವಯಿಸುವ ತೆರಿಗೆ ಸಂದಾಯಕ್ಕೆ ಆಧಾರವಾಗತಕ್ಕದ್ದು.

(7) ಯಾವೊಬ್ಬ ಮಾಲೀಕ ಅಥವಾ ಅಧಿಭೋಗದಾರನು (6)ನೇ ಉಪ ಪ್ರಕರಣದ ಅಡಿಯಲ್ಲಿ ಯಾವುದೇ ವಿವರ ಪತ್ರವನ್ನು ಸಲ್ಲಿಸುವ ಮೊದಲು ಆತನು ನಷ್ಟವಾದುದು ಮತ್ತು ಪೂರ್ಣವಾದುದು ಎಂದು ಘೋಷಿಸಿ ಸಲ್ಲಿಸಿದ ವಿವರ ಪತ್ರದ ಆಧಾರದ ಮೇಲೆ ಲೆಕ್ಕ ಹಾಕಿದ ಆ ವರ್ಷಕ್ಕೆ ಸಂದಾಯ ಮಾಡಬೇಕಾದ ಅರ್ಧ ವರ್ಷಕ್ಕೆ ಸ್ವತ್ತು ತೆರಿಗೆಯನ್ನು ಅಥವಾ ಪೂರ್ಣ ವರ್ಷಕ್ಕೆ ಲೆಕ್ಕ ಹಾಕಿದ ತೆರಿಗೆಯ ಪೊಬಲಗನ್ನು ಮುಂಗಡವಾಗಿ ಸಂದಾಯ ಮಾಡತಕ್ಕದ್ದು.

(8) 82ಎ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ ಏನೇ ಇದ್ದರೂ, ರಾಜ್ಯ ಸರ್ಕಾರವು ಈ ಪ್ರಕರಣದ ಅಡಿಯಲ್ಲಿ ಸ್ವತ್ತು ತೆರಿಗೆಯನ್ನು ಸಂದಾಯ ಮಾಡಲು ಹೊಣೆಗಾರನಾದ ಪ್ರತಿಯೊಬ್ಬ ಮಾಲೀಕ ಅಥವಾ ಅಧಿಭೋಗದಾರನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರಿಗೆ ಅಥವಾ ಈ ಸಂಬಂಧದಲ್ಲಿ ಅವರು ಅಧಿಕೃತಗೊಳಿಸಿದ ಅಧಿಕಾರಿಗೆ ಅಥವಾ ಏಜನ್ಸಿಗೆ ಪ್ರತಿ ವರ್ಷವು ಸಲ್ಲಿಸತಕ್ಕ ವಿವರಪತ್ರದ ನಮೂನೆ ಮತ್ತು ವಿಧಾನವನ್ನು ಸಿಯಮಿಸಬಹುದು

(9) ಯಾವುದೇ ಕಟ್ಟಡ ಅಥವಾ ಖಾಲಿ ಭೂಮಿಯ ಅಥವಾ ಅವೆರಡರ ಮಾಲೀಕ ಅಥವಾ ಅಧಿಭೋಗದಾರನು ವಿವರ ಪತ್ರವನ್ನು ಸಲ್ಲಿಸುವುದಕ್ಕೆ ಅಥವಾ ಈ ಪ್ರಕರಣದ ಅಡಿಯಲ್ಲಿ ಸ್ವತ್ತು ತೆರಿಗೆಯ ನಿರ್ಧರಣೆಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಆಯುಕ್ತರು ಪಟಕ ಪ್ರವೇಶ ಮೌಲ್ಯವನ್ನು ಮತ್ತು ಅದರ ಮೇಲೆ ಸಂದಾಯಮಾಡತಕ್ಕ ತೆರಿಗೆಯನ್ನು ನಿರ್ಧರಿಸಲು ದೂರ್ಗಸೂಚಿಗಳನ್ನು ಕಾಲಕಾಲಕ್ಕೆ ಹೊರಡಿಸತಕ್ಕದ್ದು.

(10) ಸಿಯಮಿಸಲಾದ ವಿಧಾನದಲ್ಲಿ ಸಲ್ಲಿಸಲಾದ ವಿವರ ಪತ್ರಗಳನ್ನು ಅನಿರ್ದಿಷ್ಟವಾಗಿ ಅಥವಾ ಮಾಡಿ ಪರಿಶೀಲನೆ ಮಾಡಲು ಆಯುಕ್ತರು ಅಥವಾ ಅಧಿಕೃತ ಅಧಿಕಾರಿಯು ಕೈಗೆತ್ತಿಕೊಳ್ಳಬಹುದಾದ ಅಥವಾ ಅಧೀನ ಅಧಿಕಾರಿಯನ್ನು ಅಧಿಕೃತಗೊಳಿಸಬಹುದಾದ ವಿವರ ಪತ್ರಗಳ ಸಂದರ್ಭಗಳನ್ನು ಹೊರತುಪಡಿಸಿ, ಮಾಲೀಕ ಅಥವಾ ಅಧಿಭೋಗದಾರನು ಸಲ್ಲಿಸಿದ ಪ್ರತಿಯೊಂದು ವಿವರ ಪತ್ರವನ್ನು ಕರ ನಿರ್ಧರಣೆ ಮಾಡಲಾಗಿದೆ ಎಂದು ಭಾವಿಸತಕ್ಕದ್ದು.

ಪರಂತು, ಆಯುಕ್ತರು ಸ್ಪಷ್ಟೀಕರಣೆಯಿಂದ ಅಗಲ ಅಥವಾ ಅನ್ಯಥಾ, ಮಾಲೀಕ ಅಥವಾ ಅಧಿಭೋಗದಾರನು ತೆರಿಗೆ ತಪ್ಪಿಸಿಕೊಳ್ಳುತ್ತಿದ್ದಾನೆಂದು ನಂಬಲು ಕಾರಣ ಹೊಂದಿದ್ದಾಗ ಅಂಥ ಕಟ್ಟಡವನ್ನು ತಪಾಸಣೆ ಮಾಡಿಸಬಹುದು ಮತ್ತು ತೆರಿಗೆಯನ್ನು ನಿರ್ಧರಿಸಬಹುದು.

(11) ಯಾವುದೇ ಕಟ್ಟಡ ಅಥವಾ ಭೂಮಿಗಳ ಅಥವಾ ಅವೆರಡರ ಸಂಬಂಧದಲ್ಲಿ ಸಲ್ಲಿಸಿದ ವಿವರ ಪತ್ರಗಳನ್ನು ಅನಿರ್ದಿಷ್ಟವಾಗಿ ಅಯ್ಯು ಪರಿಶೀಲಿಸುವ ಅಥವಾ (6)ನೇ ಉಪಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಲಾದಂತೆ ವಿವರ ಪತ್ರವನ್ನು ಸಲ್ಲಿಸದಿರುವ ಪ್ರಕರಣಗಳಲ್ಲಿ ಪರಿಶೀಲಿಸುವ ಉದ್ದೇಶಕ್ಕಾಗಿ ಆಯುಕ್ತರು ಅಥವಾ ಈ ಸಂಬಂಧದಲ್ಲಿ ಅವರು ಅಧಿಕೃತಗೊಳಿಸಿದ ಯಾವೊಬ್ಬ ವ್ಯಕ್ತಿಯು, ಮಾಲೀಕ ಅಥವಾ ಅಧಿಭೋಗದಾರರಿಗೆ ಸೂಚನೆಯನ್ನು ನೀಡಿದ ತರುವಾಯ, ಯಾವುದೇ ಭೂಮಿ ಅಥವಾ ಕಟ್ಟಡವನ್ನು ಪ್ರವೇಶಿಸಬಹುದು, ಪರೀಕ್ಷಿಸಬಹುದು, ಸಮೀಕ್ಷಿಸಬಹುದು ಅಥವಾ ಅಳತೆ ಮಾಡಬಹುದು ಮತ್ತು ಮಾಲೀಕ ಅಥವಾ ಅಧಿಭೋಗದಾರನು ಅಗತ್ಯಪಡಿಸಿದ ಅವಶ್ಯ ಮಾಹಿತಿಯನ್ನು ಒದಗಿಸಲು ಬದ್ಧನಾಗಿರತಕ್ಕದ್ದು. ಹಾಗೂ ಅಂಥ ಪರಿಶೀಲನೆ ಮತ್ತು ಸಂಗ್ರಹಿಸಿದ ಮಾಹಿತಿಯ ಆಧಾರ ಮೇಲೆ ಅವರು (6)ನೇ ಉಪಪ್ರಕರಣಕ್ಕೆ ಒಳಪಟ್ಟು ಸ್ವತ್ತಿನ ತೆರಿಗೆ ನಿರ್ಧರಣೆ ಮಾಡತಕ್ಕದ್ದು. ಹಾಗೂ ಸಂಬಂಧಪಟ್ಟ ಮಾಲೀಕ ಅಥವಾ ಅಧಿಭೋಗದಾರರಿಗೆ ಆದೇಶದ ಒಂದು ಪ್ರತಿಯನ್ನು ಕಳುಹಿಸತಕ್ಕದ್ದು. ಯಾವುದೇ ಕಟ್ಟಡದ ಅಥವಾ ಖಾಲಿ ಭೂಮಿಯ ಒಳಕ್ಕೆ ಅಥವಾ ಅದರ ಮೇಲೆ ಪ್ರವೇಶವನ್ನು ಸೂರ್ಯೋದಯದಿಂದ ಸೂರ್ಯಾಸ್ತದ ಒಳಗೆ ಮಾಡತಕ್ಕದ್ದು.

(12) ಆವರಣವನ್ನು ಪರಿಶೀಲಿಸಲು ಅಧಿಕೃತ ಅಧಿಕಾರಿಯು ಪ್ರವೇಶಿಸುವುದಕ್ಕೆ ಅವಕಾಶ ನೀಡಲು ಅಧಿಭೋಗದಾರನು ನಿರಾಕರಿಸಿದರೆ ಅಧಿಕಾರಿಯು ಅವನಿಗೆ ಸಮಂಜಸ ಅವಕಾಶವನ್ನು ನೀಡಿದ ತರುವಾಯ ಹಾಗೆ ನಿರಾಕರಿಸಿದ್ದನ್ನು ದಾಖಲಿಸತಕ್ಕದ್ದು ಮತ್ತು ತನ್ನ ಉತ್ತಮ ವಿವೇಚನೆಯ ಪ್ರಕಾರ ಸ್ವತ್ತಿನ ಕರ ನಿರ್ಧರಣೆ ಮಾಡತಕ್ಕದ್ದು:

ಪರಂತು, ವಾಸಕ್ಕಾಗಿ ಬಳಸುತ್ತಿರುವ ಕಟ್ಟಡಗಳ ಸಂದರ್ಭದಲ್ಲಿ ಅಲ್ಲಿ ವಾಸಿಸುತ್ತಿರುವವರ ಸಾಮಾಜಿಕ ಮತ್ತು ಧಾರ್ಮಿಕ ಪದ್ಧತಿಗಳಿಗೆ ಕಿಂಚಿತ್ ಗೌರವವನ್ನು ನೀಡತಕ್ಕದ್ದು ಮತ್ತು ಹಾಗೆ ವಾಸಿಸುತ್ತಿರುವವರು ಮಹಿಳೆ ಆಗಿದ್ದಲ್ಲಿ ಅಲೆಯು ಆ ಸ್ವಕಪಿಂದ ನಿರ್ಗಮಿಸಲು ಇಚ್ಛಿಸಿದರೆ ಹಾಗೆ ನಿರ್ಗಮಿಸಬಹುದೆಂದು ತಿಳಿಸಿ ಆಕೆ ಹಾಗೆ ನಿರ್ಗಮಿಸಲು ಸಮಂಜಸ ಅವಕಾಶ ನೀಡಿದ ತರುವಾಯ ಮಾತ್ರವೇ ಪ್ರವೇಶಿಸತಕ್ಕದ್ದು.

(13) ಅನಿರ್ದಿಷ್ಟ ಅವ್ಧಿ ಮಾಡಿ ಪರಿಶೀಲಿಸಿದಾಗ ಕರ ನಿರ್ಧರಣೆ ಆಗಿದೆ ಎಂದು ಭಾವಿಸಲಾದ ಯಾವುದೇ ಸಲ್ಲಿಸಿದ ವಿವರ ಪತ್ರವು ಸರಿಯಿಲ್ಲವೆಂದು ಅಥವಾ ಅದರಲ್ಲಿ ಕಡಿಮೆ ಕರ ನಿರ್ಧರಿಸಲಾಗಿದೆಯೆಂದು ತತ್ವರಣಮಾಮವಾಗಿ ತೆರಿಗೆಯಿಂದ ತಪ್ಪಿಸಿಕೊಳ್ಳಲಾಗಿದೆಯೆಂದು ಅಧಿಕೃತ ಅಧಿಕಾರಿಯು ನಂಬಲು ಕಾರಣಗಳಿದ್ದಲ್ಲಿ,-

(ಎ) ದಾಖಲೆಯಲ್ಲಿ ಲಭ್ಯವಿರುವ ಮಾಹಿತಿಯ ಆಧಾರದ ಮೇಲೆ ಮತ್ತು ವಾಸ್ತವಿಕ ಪರಿಶೀಲನೆಯ ನಂತರ ಈ ಪ್ರಕರಣದ ಅಡಿಯಲ್ಲಿ ಉಪಬಂಧಿಸಲಾದ ವಿಧಾನದಲ್ಲಿ ಆ ಸ್ವತ್ತಿನ ಮರು ಕರ ನಿರ್ಧರಣೆ ಮಾಡಲು ತೊಡಗಬಹುದು.

(ಜ) ಮರು ಕರ ನಿರ್ಧರಣೆ ಮಾಡಿದ ತೆರಿಗೆಯು ವಿವರಪತ್ರದೊಡನೆ ಸಲ್ಲಿಸಲಾದ ತೆರಿಗೆಯ ಶೇಕಡಾ ೮ ಕ್ಕಿಂತಲೂ ಹೆಚ್ಚಾಗಿದ್ದಲ್ಲಿ, ತಪ್ಪಿಸಿಕೊಂಡ ತೆರಿಗೆಯನ್ನು ಹಾಗೆ ತಪ್ಪಿಸಿಕೊಂಡ ತೆರಿಗೆಯ ಎರಡರಷ್ಟಕ್ಕೆ ಸಮನಾದ ಮೊಬಲಗಿಗಿಂತ ಕಡಮೆಯಿಲ್ಲದ ದಂಡದೊಡನೆ ಹಾಗೂ ಸಂದಾಯ ಮಾಡಿದ ಹಾಗೂ ಸಂದಾಯ ಮಾಡಬೇಕಾಗಿದ್ದ ತೆರಿಗೆಗಳ ವ್ಯತ್ಯಾಸದ ಮೊಬಲಗಿನ ಮೇಲೆ ಪಾರ್ಷಿಕ ಶೇಕಡ 24ರಂತೆ ಲೆಕ್ಕಹಾಕಲಾದ ಬಡ್ಡಿಯೊಡನೆ ಸಂದಾಯಿಸತಕ್ಕದ್ದು;

(ಸ) ಆಯುಕ್ತರು ಅಥವಾ ಅಧಿಕೃತ ಅಧಿಕಾರಿಯು ಈ ಪ್ರಕರಣದ ಅಡಿಯಲ್ಲಿ ಹೇಳಲಾದ ವಿಚಾರಣೆ ಪರಿಶೀಲನೆ ಅಥವಾ ಮರುನಿರ್ಧರಣೆಯನ್ನು ಮಾಡಿದ ತರುವಾಯ ಮರು ಕರ ನಿರ್ಧರಣೆಯ ಸೂಚನೆಯನ್ನು ಸ್ವೀಕರಿಸಿದ ಮೂವತ್ತು ದಿನಗಳೊಳಗೆ ಆಕ್ಷೇಪಣೆಗಳನ್ನು ಅದರ ವಿರುದ್ಧ ಸಾರಣ ತೋರಿಸಲು ತೆರಿಗೆದಾರರಿಗೆ ಒಂದು ಅವಕಾಶವನ್ನು ನೀಡಿದ ತರುವಾಯ ಆ ತೆರಿಗೆಯನ್ನು ಸಂದಾಯ ಮಾಡುವಂತೆ ತಗಾದೆ ಮಾಡಿ ಸೂಚನೆಯನ್ನು ನೀಡತಕ್ಕದ್ದು.

(ಹ) ಮಾಲೀಕ ಅಥವಾ ಅಧಿಭೋಗದಾರನು ನಿರ್ಧರಿಸಿದ ಸ್ವತ್ತು ತೆರಿಗೆಯನ್ನು ಮತ್ತು ವಿಧಿಸಿದ ದಂಡವನ್ನು ಒಪ್ಪಿಕೊಳ್ಳಬಹುದು ಅಥವಾ ಈ ಉಪ ಪ್ರಕರಣದ ಅಡಿಯಲ್ಲಿಯ ಸೂಚನೆಯ ಪ್ರತಿಯನ್ನು ಸ್ವೀಕರಿಸಿದ ಮೂವತ್ತು ದಿನಗಳೊಳಗಾಗಿ ಆಯುಕ್ತನಿಗೆ ಅಥವಾ ಅಧಿಕೃತ ಅಧಿಕಾರಿಗೆ ಆಕ್ಷೇಪಣೆಯನ್ನು ಕಳುಹಿಸಬಹುದು;

(ಇ) ಆಯುಕ್ತ ಅಥವಾ ಅಧಿಕೃತ ಅಧಿಕಾರಿಯು ಆಕ್ಷೇಪಣೆಗಳನ್ನು ಪರಿಗಣಿಸತಕ್ಕದ್ದು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಿದ ದಿನಾಂಕದಿಂದ ಆರವತ್ತು ದಿನಗಳ ಅವಧಿಯೊಳಗೆ ಅಂಥ ಕರ ನಿರ್ಧರಣೆಯನ್ನು ದೃಢೀಕರಿಸುವ ಅಥವಾ ಪರಿಷ್ಕರಿಸುವ ಆದೇಶವನ್ನು ಹೊರಡಿಸತಕ್ಕದ್ದು ಮತ್ತು ಆದೇಶದ ಒಂದು ಪ್ರತಿಯನ್ನು ಸಂಬಂಧಪಟ್ಟ ಮಾಲೀಕ ಅಥವಾ ಅಧಿಭೋಗದಾರನಿಗೆ ಕಳುಹಿಸತಕ್ಕದ್ದು.

(14) ಈ ಪ್ರಕರಣದ ಅಡಿಯಲ್ಲಿಯ ಕರ ನಿರ್ಧರಣೆ ಅಥವಾ ಮರು ನಿರ್ಧರಣೆಯನ್ನು ಈ ಮುಂದಿನ ಕಾಲಮಿತಿಗಳ ನಂತರ ಮಾಡತಕ್ಕದ್ದಲ್ಲ, ಎಂದರೆ:-

(i) ಈ ಪ್ರಕರಣದ ಅಡಿಯಲ್ಲಿ ತೆರಿಗೆ ವಿವರ ಪತ್ರವನ್ನು ಸಲ್ಲಿಸಿದ ನಂತರ ಮೂರು ವರ್ಷಗಳು ಕಳೆದಮೇಲೆ;

(ii) ಆಯುಕ್ತನು ಅಥವಾ ಅಧಿಕೃತ ಅಧಿಕಾರಿಯು ಇಷ್ಟಪ್ರಾಯದ ಪ್ರಕಾರ ತೆರಿಗೆ ಮರು ನಿರ್ಧರಣೆ ಮಾಡುವುದನ್ನು ಸಮರ್ಥಿಸಲು ವಾಸ್ತವಾಂಶಗಳು ಸಾಕಷ್ಟು ಇವೆ ಎಂಬುದು ಅವರ ಗಮನಕ್ಕೆ ಬಂದ ತರುವಾಯ ಮೂರು ವರ್ಷಗಳು ಕಳೆದ ಮೇಲೆ ಇದರಲ್ಲಿ ಯಾವುದು ಸಂತರವೋ ಆ ಅವಧಿ.

(15) ಈ ಅಧಿನಿಯಮದ ಅಡಿಯಲ್ಲಿ ಸಂದರ್ಭಾನುಸಾರ ಕರ ನಿರ್ಧರಣೆಗೆ ಅಥವಾ ತೆರಿಗೆ ಮರು ನಿರ್ಧರಣೆಗೆ ನಿರ್ದಿಷ್ಟಪಡಿಸಿದ ಕಾಲಮಿತಿಯನ್ನು ಲೆಕ್ಕ ಹಾಕುವಾಗ ಕರ ನಿರ್ಧರಣೆ ಅಥವಾ ಇತರ ಪ್ರಕರಣೆಗಳ ವಿರುದ್ಧ ಸಲ್ಲಿಸಿದ ಯಾವುದೇ ಅಪೀಲನ ವಿಲೇಗಾಗಿ ಅಪೀಲು ಪ್ರಾಧಿಕಾರ, ನ್ಯಾಯಾಧಿಕರಣ ಅಥವಾ ಸಕ್ಷಮ ನ್ಯಾಯಾಲಯವು ತೆಗೆದುಕೊಂಡ ಅವಧಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

(16) (2) ನೇ ಉಪಪ್ರಕರಣಕ್ಕೆ ಒಳಪಟ್ಟು ಈ ಪ್ರಕರಣದ ಅಡಿಯಲ್ಲಿ ನಿರ್ಧರಿಸಿ ವಿಧಿಸಲಾದ ಸ್ವತ್ತು ತೆರಿಗೆಯು 2008-09 ನೇ ಹಣಕಾಸಿನ ವರ್ಷದಿಂದ ಪ್ರಾರಂಭಿಸಿ ಮೂರು ವರ್ಷಗಳಿಗೆ ಒಂದು ಪಾಲಿ ಶೇಕಡಾ ೫ ರಷ್ಟು ಹೆಚ್ಚಿಸುವ ಮೂಲಕ ಪರಿಷ್ಕರಣೆಗೆ ಗುರಿಯಾಗತಕ್ಕದ್ದು:

ಪರಂತು, ಪೌರನಿರಮವು ಅಂಥ ಸ್ವತ್ತು ತೆರಿಗೆಯನ್ನು ಮೂರು ವರ್ಷಗಳಾಗೊಮ್ಮೆ ಶೇಕಡಾ ೩೦ ರ ವರೆಗೆ ಹೆಚ್ಚಿಸಬಹುದು. ಮತ್ತು ಬೇರೆ ಬೇರೆ ಪ್ರದೇಶಗಳಿಗೆ ಹಾಗೂ ಬೇರೆ ಬೇರೆ ವರ್ಗದ ಕಟ್ಟಡಗಳು ಮತ್ತು ಭೂಮಿಗಳಿಗೆ ಬೇರೆ ಬೇರೆ ದರಗಳನ್ನು ತೆರಿಗೆ ಹೆಚ್ಚಿಸಬಹುದು:

ಪರಂತು, ಮೂರು ವರ್ಷಗಳ ಬ್ಲಾಕ್ ಅವಧಿಯಲ್ಲಿ ಈ ಪ್ರಕರಣದ ಅಡಿಯಲ್ಲಿ ಸ್ವತ್ತು ತೆರಿಗೆಯ ನಿರ್ಧರಣೆ ಮಾಡಲಿರುವುದು ಯಾವುದೇ ಹೊಸ ಸೇರ್ಪಡೆ, ಬಳಕೆಯ ಬದಲಾವಣೆ, ಅಂಥ ಮಾರ್ಪಾಡು ಅಥವಾ ಪರಿವರ್ತನೆ ಮಾಡಿರುವ ಯಾವುದೇ ಕಟ್ಟಡಕ್ಕೆ ಸಂಬಂಧಿಸಿದಂತೆ ಅನ್ವಯವಾಗತಕ್ಕದ್ದಲ್ಲ. ಮಾಲೀಕ ಅಥವಾ ಅಧಿಭೋಗದಾರನು ಅಂಥ ಬದಲಾವಣೆ ಪೂರ್ಣಗೊಂಡ ದಿನಾಂಕ ಅಥವಾ ಅದರ ಅಧಿಭೋಗಕ್ಕೆ ಬಂದ ದಿನಾಂಕ ಇವುಗಳಲ್ಲಿ ಯಾವುದು ಮೊದಲೋ ಆ ದಿನಾಂಕದಿಂದ ಆರು ತಿಂಗಳೊಳಗಾಗಿ ಹಾಗೆ ಬದಲಾವಣೆ ಮಾಡಿರುವುದನ್ನು ಪರಿಷ್ಕೃತ ತೆರಿಗೆ ವಿವರ ಪತ್ರ ಮತ್ತು ತೆರಿಗೆಯೊಡನೆ ವರದಿಯನ್ನು ಮಾಡತಕ್ಕದ್ದು:

ಮತ್ತು ಪರಂತು, ಈ ಪ್ರಕರಣದಲ್ಲಿರುವುದಾವುದೂ ಸ್ವತ್ತು ತೆರಿಗೆಯನ್ನು ಇನ್ನೂ ಮುಂಚಿತವಾಗಿಯೇ ಪರಿಷ್ಕರಿಸುವಂತೆ ನಿರ್ದೇಶನ ನೀಡುವ ರಾಜ್ಯ ಸರ್ಕಾರದ ಅಧಿಕಾರಕ್ಕೆ ಪಾದಕವಾಗುತ್ತದೆ ಎಂದು ಭಾವಿಸತಕ್ಕದ್ದಲ್ಲ.

(17) ಆಯುಕ್ತರು, ವಲಯಗಳ ವರ್ಗೀಕರಣ, ಪಟಿ ಪ್ರದೇಶ ಮೌಲ್ಯ ಮತ್ತು ಸ್ವತ್ತಿನ ವರ್ಗ ಮುಂತಾದವುಗಳ ಬಗ್ಗೆ ಬರುವ ಯಾವುದೇ ಸಂಶಯಗಳನ್ನು ಪರಿಹರಿಸುವ ಅಧಿಕಾರವನ್ನು ಹೊಂದಿರತಕ್ಕದ್ದು. ಈ ಸಂಬಂಧದಲ್ಲಿ ಆಯುಕ್ತರ ತೀರ್ಮಾನವು ಅಂತಿಮವಾಗಿರತಕ್ಕದ್ದು."

4. ನಿರಸನ ಮತ್ತು ಉಪಸ್ಪುಟೀಕರಣಗಳು:- (1) ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ಅಧ್ಯಾದೇಶ, 2008ನ್ನು (2008ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 1) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸನಗೊಳಿಸಿದ್ದಾಗ್ಯೂ, ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿ ಮಾಡಲಾದ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೂಲಕ ತಿದ್ದುಪಡಿ ಮಾಡಲಾದ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ದಿನಾಂಕ 18.1.2007ರಂದು ರಾಜ್ಯ ಸರ್ಕಾರವು ಏಳು ನಗರ ಸಭೆಗಳನ್ನು ಮತ್ತು ಒಂದು ಪುರಸಭೆಯನ್ನು ಹಾಗೂ ಕೆಲವು ಹಳ್ಳಿಗಳನ್ನು ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವಿಲೀನಗೊಳಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ರಚಿಸಿದೆ. ವಿಲೀನದ ಸಮಯದಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯು ಸ್ವಯಂ ಸ್ವತ್ತು ತೆರಿಗೆ ನಿರ್ಧರಣೆಯ ಅಡಿಯಲ್ಲಿ ವಾರ್ಷಿಕ ಬಾಡಿಗೆ ಮೌಲ್ಯದ ಆಧಾರದ ಮೇಲೆ ಸ್ವತ್ತು ತೆರಿಗೆಯನ್ನು ಸಂಗ್ರಹಿಸುತ್ತಿತ್ತು. ಏಳು ನಗರ ಸಭೆಗಳು ಮತ್ತು ಒಂದು ಪುರಸಭೆಯು ಸ್ವತ್ತು ತೆರಿಗೆಯನ್ನು ಕರ್ನಾಟಕ ಪುರಸಭೆಗಳ ಅಧಿನಿಯಮ, 1964ರ ಅಡಿಯಲ್ಲಿ ಬಂಡವಾಳ ಮೌಲ್ಯ ಪದ್ಧತಿಯ ಅಡಿಯಲ್ಲಿ ಸ್ವತ್ತು ತೆರಿಗೆಯನ್ನು ಹಾಗೂ ಕೆಲವು ಹಳ್ಳಿಗಳಲ್ಲಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಅಡಿಯಲ್ಲಿ ಸ್ವತ್ತು ತೆರಿಗೆಯನ್ನು ಸಂಗ್ರಹಿಸಲಾಗುತ್ತಿತ್ತು. ಈಗ ಸದರಿ ವಿಲೀನ ಆಗಿರುವ ಹಿನ್ನೆಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ. ಇದೇ ಪ್ರದೇಶದಲ್ಲಿ ಒಂದೇ ತೆರನಾದ ಸ್ವತ್ತು ತೆರಿಗೆ ನೀತಿಯನ್ನು ತರುವುದು ಅವಶ್ಯವೆಂದು ಅಭಿಪ್ರಾಯ ಪಡಲಾಗಿದೆ.

ಆದ್ದರಿಂದ ಕರ್ನಾಟಕ ಪುರಸಭೆಗಳ ಅಧಿನಿಯಮ, 1964ರಲ್ಲಿ 108ಎ ಹೊಸ ಪ್ರಕರಣವನ್ನು ಸೇರಿಸಿ ಸ್ವತ್ತು ತೆರಿಗೆಯನ್ನು ಘಟಕ ಪ್ರದೇಶ ಮೌಲ್ಯದ ಆಧಾರದ ಮೇಲೆ ಸಂಗ್ರಹಿಸುವುದಕ್ಕಾಗಿ ಉಪಬಂಧ ಕಲ್ಪಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ವಿಷಯವು ತುರ್ತು ಸ್ವರೂಪದ್ದಾಗಿದ್ದರಿಂದ ಮತ್ತು ಕರ್ನಾಟಕ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿಲ್ಲದಿದ್ದುದರಿಂದ ಕರ್ನಾಟಕ ರಾಜ್ಯಪಾಲರು ಕರ್ನಾಟಕ ಪುರಸಭೆಗಳ (ತಿದ್ದುಪಡಿ) ಅಧ್ಯಾದೇಶ, 2008ನ್ನು (2008ರ ಕರ್ನಾಟಕ ಅಧ್ಯಾದೇಶ ಸಂಖ್ಯೆ:1) ಪ್ರಖ್ಯಾಪಿಸಿರುತ್ತಾರೆ.

ಈ ವಿಧೇಯಕವನ್ನು ಸದರಿ ಅಧ್ಯಾದೇಶದ ಬದಲಿಗೆ ತರಲಾಗಿದೆ.

ಆದ್ದರಿಂದ ಈ ವಿಧೇಯಕ.

ಕರ್ನಾಟಕ ವಿಧಾನಸಭೆಯ ಆಡಳಿತ ವಿಧಾನ ಮತ್ತು ನಡವಳಿಕೆಗಳ ನಿಯಮಗಳ ಇಂಸಿ ನಿಯಮದ (1)ನೇ ಉಪನಿಯಮದ ಮೂಲಕ ಅಗತ್ಯಪಡಿಸಲಾದಂತೆ ವಿವರಣಾತ್ಮಕ ಹೇಳಿಕೆ.

ದಿನಾಂಕ 18.1.2007ರಂದು ರಾಜ್ಯ ಸರ್ಕಾರವು ಏಳು ನಗರ ಸಭೆಗಳನ್ನು ಮತ್ತು ಒಂದು ಪುರಸಭೆಯನ್ನು ಹಾಗೂ ಕೆಲವು ಹಳ್ಳಿಗಳನ್ನು ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವಿಲೀನಗೊಳಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ರಚಿಸಿದೆ. ವಿಲೀನದ ಸಮಯದಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯು ಸ್ವಯಂ ಸ್ವತ್ತು ತೆರಿಗೆ ನಿರ್ಧರಣೆಯ ಅಡಿಯಲ್ಲಿ ವಾರ್ಷಿಕ ಬಾಡಿಗೆ ಮೌಲ್ಯದ ಆಧಾರದ ಮೇಲೆ ಸ್ವತ್ತು ತೆರಿಗೆಯನ್ನು ಸಂಗ್ರಹಿಸುತ್ತಿತ್ತು. ಏಳು ನಗರ ಸಭೆಗಳು ಮತ್ತು ಒಂದು ಪುರಸಭೆಯು ಸ್ವತ್ತು ತೆರಿಗೆಯನ್ನು ಕರ್ನಾಟಕ ಪುರಸಭೆಗಳ ಅಧಿನಿಯಮ, 1964ರ ಅಡಿಯಲ್ಲಿ ಬಂಡವಾಳ ಮೌಲ್ಯ ಪದ್ಧತಿಯ ಅಡಿಯಲ್ಲಿ ಸ್ವತ್ತು ತೆರಿಗೆಯನ್ನು ಹಾಗೂ ಕೆಲವು ಹಳ್ಳಿಗಳಲ್ಲಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಅಡಿಯಲ್ಲಿ ಸ್ವತ್ತು ತೆರಿಗೆಯನ್ನು ಸಂಗ್ರಹಿಸಲಾಗುತ್ತಿತ್ತು. ಈಗ ಸದರಿ ವಿಲೀನ ಆಗಿರುವ ಹಿನ್ನೆಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಇದೇ ಪ್ರದೇಶದಲ್ಲಿ ಒಂದೇ ತೆರನಾದ ಸ್ವತ್ತು ತೆರಿಗೆ ನೀತಿಯನ್ನು ತರುವುದು ಅವಶ್ಯವೆಂದು ಅಭಿಪ್ರಾಯ ಪಡಲಾಗಿದೆ.

ಆದ್ದರಿಂದ ಕರ್ನಾಟಕ ಪುರಸಭೆಗಳ ಅಧಿನಿಯಮ, 1964ರಲ್ಲಿ 108ಎ ಹೊಸ ಪ್ರಕರಣವನ್ನು ಸೇರಿಸಿ ಸ್ವತ್ತು ತೆರಿಗೆಯನ್ನು ಘಟಕ ಪ್ರದೇಶ ಮೌಲ್ಯದ ಆಧಾರದ ಮೇಲೆ ಸಂಗ್ರಹಿಸುವುದಕ್ಕಾಗಿ ಉಪಬಂಧ ಕಲ್ಪಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ವಿಷಯವು ತುರ್ತು ಸ್ವರೂಪದ್ದಾಗಿದ್ದರಿಂದ ಮತ್ತು ಕರ್ನಾಟಕ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿಲ್ಲದಿದ್ದುದರಿಂದ ಕರ್ನಾಟಕ ರಾಜ್ಯಪಾಲರು ಕರ್ನಾಟಕ ಪುರಸಭೆಗಳ (ತಿದ್ದುಪಡಿ) ಅಧ್ಯಾದೇಶ, 2008ನ್ನು (2008ರ ಕರ್ನಾಟಕ ಅಧ್ಯಾದೇಶ ಸಂಖ್ಯೆ:1) ಪ್ರಖ್ಯಾಪಿಸಿರುತ್ತಾರೆ.

ಈ ವಿಧೇಯಕವನ್ನು ಸದರಿ ಅಧ್ಯಾದೇಶದ ಬದಲಿಗೆ ತರಲಾಗಿದೆ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಪ್ರತ್ಯಾಯೋಜಿತ ಶಾಸನ ರಚನಾಧಿಕಾರ ಜ್ಞಾಪನ ಪತ್ರ

ಖಂಡ 3: 3ನೇ ಖಂಡದ ಮೂಲಕ ಸೇರಿಸಲು ಉದ್ದೇಶಿಸಿದ 108ಎ ಪ್ರಕರಣವು ಬೃಹತ್ ಬೆಂಗಳೂರು ನಗರ ಪಾಲಿಕೆಯ ಸಂಬಂಧದಲ್ಲಿ ಈ ಮುಂದಿನ ವಿಷಯಗಳಿಗೆ ಸಂಬಂಧಪಟ್ಟಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ:-

(i) ಬೆಂಗಳೂರು ನಗರ ಪಾಲಿಕೆಯು ಸ್ಥತ್ತು ತೆರಿಗೆಯ ನಿರ್ಧರಣೆಯ ಸಂಬಂಧದಲ್ಲಿ ನಮೂನೆ ಅಥವಾ ರಿಜಿಸ್ಟರ್ ಇವುಗಳ ಬಗ್ಗೆ ಪ್ರತ್ಯೇಕ ವಿಧಾನ.

(ii) ಮಾಲೀಕರು ಸಲ್ಲಿಸಬೇಕಾದ ವಿವರಣಾ ಪಟ್ಟಿಕೆಯ ನಮೂನೆ ಮತ್ತು ವಿಧಾನ ಹಾಗೂ ಸಂದಾಯ ಮಾಡಬೇಕಾದ ಹೊಣೆಗಾರಿಕೆ.

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ಪಾಡಿಕೆಯ ಸ್ವರೂಪದ್ದಾಗಿದೆ.

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿಗಳು

ಎಸ್.ಜಿ. ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

ಕರ್ನಾಟಕ ವಿಧಾನ ಸಭೆ

ಹದಿಮೂರನೇ ವಿಧಾನಸಭೆ

ಎರಡನೇ ಅಧಿವೇಶನ

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ವಿಧೇಯಕ, 2009

(೨೦೦೯ರ ವಿಧಾನಸಭೆಯ ವಿಧೇಯಕ ಸಂಖ್ಯೆ ೦೭)

ಕರ್ನಾಟಕ ರಾಜ್ಯದಲ್ಲಿ 'ಕಾನೂನಿನ ಕ್ಷೇತ್ರದ' ಅಧ್ಯಯನ ಮತ್ತು ಸಂಶೋಧನೆಗಾಗಿ ಮುಡಿಪಾದ ಒಂದು ಕಾನೂನು ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಮತ್ತು ನಿಗಮಿತಗೊಳಿಸಲು ಒಂದು ವಿಧೇಯಕ.

ಕರ್ನಾಟಕ ರಾಜ್ಯದಲ್ಲಿ, ಕಾನೂನಿನ ವ್ಯವಸ್ಥಿತ ಶಿಕ್ಷಣ, ಬೋಧನೆ, ತರಬೇತಿಗಳ ಮೂಲಕ ಕಾನೂನಿನ ಅಧ್ಯಯನ ಮತ್ತು ಸಂಶೋಧನ ನಡೆಸುವುದಕ್ಕೆ ಮತ್ತು ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳಲ್ಲಿ ಕಾನೂನಿನ ಬಗ್ಗೆ ಅರ್ಥಪೂರ್ಣ ಕಾಳಜಿಯನ್ನು ಮೈಗೂಡಿಸುವುದಕ್ಕೆ ಮುಡಿಪಾದ ವಿಶ್ವವಿದ್ಯಾಲಯವೊಂದನ್ನು ಸ್ಥಾಪಿಸುವುದು ಮತ್ತು ನಿಗಮಿತಗೊಳಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತೊಂಬತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂಡಿನಂತೆ ಅಧಿನಿಯಮಿತವಾಗಲಿ:–

ಅಧ್ಯಾಯ – I

ಪ್ರಾರಂಭಿಕ

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು *ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಅಧಿನಿಯಮ, 2009* ಎಂದು ಕರೆಯತಕ್ಕದ್ದು.

(2) ಇದು, 2009ರ ಜನವರಿ 1ನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. ಪರಿಭಾಷೆಗಳು.– ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಪ್ರಶಿಕ್ಷಣ ಪರಿಷತ್ತು (ಅಕೆಡೆಮಿಕ್ ಕೌನ್ಸಿಲ್)" ಎಂದರೆ, 33ನೇ ಪ್ರಕರಣದಡಿಯಲ್ಲಿ ಸ್ಥಾಪಿಸಲಾದ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್ತು ;

(ಬಿ) "ಸಂಯೋಜಿತ ಕಾಲೇಜು" ಎಂದರೆ, ವಿಶ್ವವಿದ್ಯಾಲಯ ಪ್ರದೇಶದೊಳಗೆ ಇರುವ ಮತ್ತು ನಿಯಮಿಸಲಾದ ಶಾಸನಗಳ ಅನುಸಾರ ವಿಶ್ವವಿದ್ಯಾಲಯಕ್ಕೆ ಸಂಯೋಜಿತವಾದ ಒಂದು ಕಾಲೇಜು ಅಥವಾ ಸಂಸ್ಥೆ ಮತ್ತು ಇದರಲ್ಲಿ ಈ ಅಧ್ಯಾದೇಶದ ಅಡಿಯಲ್ಲಿ ವಿಶ್ವವಿದ್ಯಾಲಯಕ್ಕೆ ಸಂಯೋಜಿತವಾಗಿವೆ ಎಂದು ಭಾವಿಸಲಾದ ಕಾನೂನು ಶಿಕ್ಷಣವನ್ನು ನೀಡುವ ಎಲ್ಲ ಕಾಲೇಜುಗಳು ಮತ್ತು ಸಂಸ್ಥೆಗಳು ಒಳಗೊಳ್ಳುತ್ತವೆ;

(ಸಿ) "ವಿಚಾರಣಾ ಆಯೋಗ" ಎಂದರೆ, 8ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ವಿಚಾರಣಾ ಆಯೋಗ;

(ಡಿ) "ಕಾಲೇಜು" ಎಂದರೆ, ರಾಜ್ಯ ಸರ್ಕಾರವು ಮಾನ್ಯತೆ ನೀಡಿದ ಮತ್ತು ವಿಶ್ವವಿದ್ಯಾಲಯಕ್ಕೆ ಸಂಯೋಜಿತವಾದ ಮತ್ತು ವಿಶ್ವವಿದ್ಯಾಲಯದ ಪದವಿಗಳು, ಡಿಪ್ಲೋಮಾಗಳು ಅಥವಾ ಇತರ ವಿದ್ಯಾಪ್ರಶಸ್ತಿಗಳನ್ನು ದೊರಕಿಸಿಕೊಡುವ ಪರೀಕ್ಷೆಗಳ ಪ್ರವೇಶಕ್ಕೆ ಬೇಕಾದ ಕಾನೂನಿನ ಯಾವುದೇ ವ್ಯಾಸಂಗಕ್ರಮ ಮತ್ತು ತರಬೇತಿಯನ್ನು ಒದಗಿಸುವ ಒಂದು ಕಾಲೇಜು ಅಥವಾ ಒಂದು ಸಂಸ್ಥೆ;

(ಇ) "ವಿಭಾಗ", "ಅಧ್ಯಯನಗಳ ವಿಭಾಗ", "ಸ್ನಾತಕೋತ್ತರ ಪದವಿ ವಿಭಾಗ" ಮತ್ತು "ಅಧ್ಯಯನಗಳ ಸ್ನಾತಕೋತ್ತರ ಪದವಿ ವಿಭಾಗ" ಎಂದರೆ, ಈ ಅಧಿನಿಯಮದ ಅಡಿಯಲ್ಲಿನ ವಿಶ್ವವಿದ್ಯಾಲಯವು ಸ್ಥಾಪಿಸಿ ನಿರ್ವಹಿಸುತ್ತಿರುವ ವಿಶ್ವವಿದ್ಯಾಲಯದಲ್ಲಿನ ಅನುಕ್ರಮವಾಗಿ ವಿಭಾಗ, ಅಧ್ಯಯನಗಳ ವಿಭಾಗ, ಸ್ನಾತಕೋತ್ತರ ಪದವಿ ವಿಭಾಗ ಮತ್ತು ಅಧ್ಯಯನಗಳ ಸ್ನಾತಕೋತ್ತರ ಪದವಿ ವಿಭಾಗ;

(ಎಫ್) "ಸರ್ಕಾರ" ಎಂದರೆ, ರಾಜ್ಯ ಸರ್ಕಾರ;

(ಜಿ) "ವಿದ್ಯಾರ್ಥಿನಿಲಯ" ಎಂದರೆ, ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ವಿಶ್ವವಿದ್ಯಾಲಯವು ನಿರ್ವಹಿಸುತ್ತಿರುವ ಅಥವಾ ಅದರಿಂದ ಮನ್ನಣೆ ಪಡೆದ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗಾಗಿ ಇರುವ ವಾಸಸ್ಥಳ ಘಟಕ;

(ಎಚ್) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಶಾಸನಗಳು, ಪರ್ಯಾದೇಶಗಳು, ಅಥವಾ ವಿನಿಯಮಗಳ ಮೂಲಕ ನಿಯಮಿಸಲಾದುದು;

(ಐ) "ಪ್ರಾಚಾರ್ಯ (ಪ್ರಿನ್ಸಿಪಾಲ್)" ಎಂದರೆ, ಕಾಲೇಜಿನ ಅಥವಾ ಸಂಸ್ಥೆಯ ಮುಖ್ಯಸ್ಥ;

(ಜೆ) "ಶಾಸನಗಳು", "ಪರ್ಯಾದೇಶಗಳು", "ವಿನಿಯಮಗಳು" ಎಂದರೆ, ಅನುಕ್ರಮವಾಗಿ ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಶಾಸನಗಳು, ಪರ್ಯಾದೇಶಗಳು, ವಿನಿಯಮಗಳು;

(ಕೆ) "ಪ್ರಶಾಸನ ಸಭೆ (ಸಿಂಡಿಕೇಟ್)" ಎಂದರೆ, 29ನೇ ಪ್ರಕರಣದಡಿಯಲ್ಲಿ ಸ್ಥಾಪಿಸಲಾದ ವಿಶ್ವವಿದ್ಯಾಲಯದ ಪ್ರಶಾಸನ ಸಭೆ;

(ಎಲ್) "ಅಧ್ಯಾಪಕರು" ಎಂಬುದರಲ್ಲಿ, ಸಂದರ್ಭಾನುಸಾರ ವಿಶ್ವವಿದ್ಯಾಲಯದಲ್ಲಿ, ಕಾಲೇಜಿನಲ್ಲಿ, ಅಥವಾ ಇತರ ಸಂಸ್ಥೆಯಲ್ಲಿ ಶಿಕ್ಷಣವನ್ನು ನೀಡುತ್ತಿರುವ ಈ ಅಧಿನಿಯಮದ ಅಡಿಯಲ್ಲಿನ ವಿಶೇಷಾಧಿಕಾರಗಳ ಸೌಲಭ್ಯ ಪಡೆದಂಥ ಪ್ರಾಧ್ಯಾಪಕರು, ಪ್ರವಾಚಕರು, ಪೂರ್ಣಕಾಲಿಕ ಅಥವಾ ಅರೆಕಾಲಿಕ ಉಪನ್ಯಾಸಕರು, ಹಿರಿಯ ಶ್ರೇಣಿ ಉಪನ್ಯಾಸಕರು, ಆಯ್ಕೆ ಶ್ರೇಣಿ ಉಪನ್ಯಾಸಕರು ಇವರು ಒಳಗೊಂಡಿರುತ್ತಾರೆ;

(ಎಂ) "ವಿಶ್ವವಿದ್ಯಾಲಯ" ಎಂದರೆ, 3ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿಸಿ ನಿಗಮಿತಗೊಳಿಸಲಾದ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ;

(ಎನ್) "ವಿಶ್ವವಿದ್ಯಾಲಯ ಪ್ರದೇಶ" ಎಂದರೆ, ವಿಶ್ವವಿದ್ಯಾಲಯದ ಅಧಿಕಾರ ವ್ಯಾಪ್ತಿಯೊಳಗಿನ ಪ್ರದೇಶ;

(ಓ) "ವಿಶ್ವವಿದ್ಯಾಲಯ ಕಾಲೇಜು" ಎಂದರೆ, ವಿಶ್ವವಿದ್ಯಾಲಯವು ಸ್ಥಾಪಿಸಿರುವ, ನಿರ್ವಹಿಸುತ್ತಿರುವ ಮತ್ತು ಅದಕ್ಕೆ ಸಂಯೋಜಿತವಾಗಿರುವ ಒಂದು ಕಾಲೇಜು;

ಅಧ್ಯಾಯ – II

ವಿಶ್ವವಿದ್ಯಾಲಯ

3. ವಿಶ್ವವಿದ್ಯಾಲಯದ ಸ್ಥಾಪನೆ ಮತ್ತು ನಿಗಮನ.– (1) 4ನೇ ಪ್ರಕರಣದಲ್ಲಿ ಹೇಳಿದ ಧ್ಯೇಯೋದ್ದೇಶಗಳನ್ನು ಸಾಧಿಸುವುದಕ್ಕಾಗಿ "ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ" ಎಂಬ ಹೆಸರಿನ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸತಕ್ಕದ್ದು.

(2) ವಿಶ್ವವಿದ್ಯಾಲಯವು ಶಾಶ್ವತ ಉತ್ತರಾಧಿಕಾರ ಹಾಗೂ ಸಾಮಾನ್ಯ ಮೊಹರನ್ನು ಹೊಂದಿರುವ ಚರ ಹಾಗೂ ಸ್ಥಿರ ಸ್ವತ್ತುಗಳೆರಡನ್ನೂ ಆರ್ಜಿಸುವ, ಧಾರಣ ಮಾಡುವ ಮತ್ತು ವಿಲೆ ಮಾಡುವ ಅಧಿಕಾರ ಹೊಂದಿರತಕ್ಕ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಅದು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೊಳಗಾಗತಕ್ಕದ್ದು.

(3) ವಿಶ್ವವಿದ್ಯಾಲಯದ ಕೇಂದ್ರ ಕಾರ್ಯಸ್ಥಾನವು ಹುಬ್ಬಳ್ಳಿಯ ರಾಯಪುರ ಗ್ರಾಮದಲ್ಲಿರತಕ್ಕದ್ದು ಮತ್ತು ಅದು ಸೂಕ್ತವೆಂದು ಮತ್ತು ಸಮುಚಿತವೆಂದು ಭಾವಿಸಬಹುದಾದಂತಹ ರಾಜ್ಯದೊಳಗಿನ ಇತರ ಸ್ಥಳಗಳಲ್ಲಿ ಸರ್ಕಾರದ ಪೂರ್ವಾನುಮತಿಯೊಂದಿಗೆ ಪ್ರಾದೇಶಿಕ ಕೇಂದ್ರಗಳನ್ನು ಸ್ಥಾಪಿಸಿರತಕ್ಕದ್ದು.

(4) ವಿಶ್ವವಿದ್ಯಾಲಯವು ಬೋಧಿಸುವ ಮತ್ತು ಸಂಯೋಜನೆ ಮಾಡಿಕೊಳ್ಳುವ ವಿಶ್ವವಿದ್ಯಾಲಯವಾಗಿರತಕ್ಕದ್ದು.

4. ಧ್ಯೇಯೋದ್ದೇಶಗಳು.– (1) ವಿಶ್ವವಿದ್ಯಾಲಯದ ಧ್ಯೇಯೋದ್ದೇಶಗಳು ವಾಡಿಕೆಯ ಶಿಕ್ಷಣದ ಜೊತೆಗೆ ಈ ಮುಂದಿನವುಗಳಿಗೂ ವಿಸ್ತರಿಸತಕ್ಕದ್ದು:–

(ಎ) ಕಾನೂನಿನ ಒಳಾಂಶ, ಛಂದರ್ಭ, ಅರ್ಥ ಮತ್ತು ಉದ್ದೇಶದ ಬಗ್ಗೆ ಸಾರ್ವತ್ರಿಕ ಅರಿವನ್ನು ಮೂಡಿಸುವುದು;

(ಬಿ) ಕರಡು ಶಾಸನಗಳ ರಚನೆ, ಶಾಸನಗಳ ವ್ಯಾಖ್ಯಾನ, ಹಸ್ತಾಂತರಣ ಪತ್ರರಚನೆ ಮತ್ತು ನ್ಯಾಯಿಕ ಪ್ರಕ್ರಿಯೆಗಳಂಥ ಕಾನೂನಿನ ಆನ್ವಯಿಕ ಶಾಖೆಗಳನ್ನು ಪ್ರಾರಂಭಿಸುವುದು;

(ಸಿ) ತನಿಖೆಯ ವಿಧಿವಿಧಾನಗಳ ಬಗ್ಗೆ ಮತ್ತು ವಿಶ್ಲೇಷಕ ಸಾಕ್ಷ್ಯ ಮಂಡನೆ ಮತ್ತು ಸ್ವಸಂಪೂರ್ಣ ಪುರಾವೆ ನಿರೂಪಣೆ ಬಗ್ಗೆ ನ್ಯಾಯ ವೃತ್ತಿಗರಿಗೆ ತರಬೇತಿ ನೀಡುವುದು;

(ಡಿ) ವಿವಾದಗಳ ಇತ್ಯರ್ಥದ ಪರ್ಯಾಯ ವಿಧಾನಗಳಿಗೆ ಉತ್ತೇಜನ ನೀಡುವುದು;

(ಇ) ಕಾನೂನು ಸೇವಾ ಕೇಂದ್ರ, ನ್ಯಾಯ ಪಂಚಾಯತಿಗಳನ್ನು ಸ್ಥಾಪಿಸುವ ಮೂಲಕ ಕಾನೂನಿನ ಚೈತನ್ಯಶೀಲತೆಯನ್ನು ಸರಿಚಯಿಸುವುದು ಮತ್ತು ವ್ಯಾಜ್ಯ ಮುಕ್ತ ಸಮಾಜ ವ್ಯವಸ್ಥೆಯನ್ನು ಉತ್ತೇಜಿಸುವುದು;

(ಎಫ್) ನ್ಯಾಯಾಂಗ ಕಾರ್ಯದರ್ಶಿಗಳಿಗೆ, ಸದೃಶ ಕಾನೂನು ಸಲಹೆಗಾರರಿಗೆ, ತೀರ್ಪು ರಚನಾಕಾರರಿಗೆ, ಕಾನೂನು-ಸಹಾಯಕರಿಗೆ, ನ್ಯಾಯವಾದಿಗಳ ಗುಮಾಸ್ತರಿಗೆ, ಕಕ್ಷಿದಾರರಿಗೆ ಸೇವೆ ಒದಗಿಸುವವರಿಗೆ ಮತ್ತು ನ್ಯಾಯಿಕ ಸೇವೆಗಳನ್ನು ಒದಗಿಸುವವರಿಗೆ ಸದೃಶ ನ್ಯಾಯಿಕ ವ್ಯಾಸಂಗ ಕ್ರಮಗಳನ್ನು ಪ್ರಾರಂಭಿಸುವುದು.

(2) ವಿಶ್ವವಿದ್ಯಾಲಯವು, ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಪ್ರಶಾಸನ ಸಭೆ ಮತ್ತು ಪ್ರಶಿಕ್ಷಣ ಪರಿಷತ್ತಿನ ಮೂಲಕ ಮೇಲೆ ಹೇಳಿದ ಧ್ಯೇಯೋದ್ದೇಶಗಳನ್ನು ಈಡೇರಿಸತಕ್ಕದ್ದು.

5. **ವಿಶ್ವವಿದ್ಯಾಲಯದ ಅಧಿಕಾರಗಳು ಮತ್ತು ಪ್ರಕಾರ್ಯಗಳು.**– ಈ ಅಧಿನಿಯಮದ ಉಪಬಂಧಗಳು ಮತ್ತು ಶಾಸನಗಳು, ವಿನಿಯಮಗಳು ಹಾಗೂ ಪರ್ಯಾದೇಶಗಳ ಮೂಲಕ ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ವಿಶ್ವವಿದ್ಯಾಲಯವು ಈ ಕೆಳಕಂಡ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ: –

(i) ವಿಶ್ವವಿದ್ಯಾಲಯವು ಯುಕ್ತವೆಂದು ಭಾವಿಸಬಹುದಾದಂಥ ಕಾನೂನಿಗೆ ಸಂಬಂಧಪಟ್ಟ ಜ್ಞಾನ ವಿಭಾಗಗಳಲ್ಲಿ ಶಿಕ್ಷಣ ಮತ್ತು ತರಬೇತಿ ನೀಡುವುದು;

(ii) ವಿಶ್ವವಿದ್ಯಾಲಯದ ಮತ್ತು ಕಾನೂನಿನ ಕ್ಷೇತ್ರದಲ್ಲಿ ಸಂಶೋಧನೆ, ಕಾನೂನು ಶಿಕ್ಷಣ ಅಥವಾ ಜ್ಞಾನ ವರ್ಧನೆಯ ಕೇಂದ್ರಗಳ ಆಡಳಿತ ನಿರ್ವಹಣೆ ಹಾಗೂ ವ್ಯವಸ್ಥಾಪನೆ;

(iii) ಕಾನೂನು ಶಿಕ್ಷಣದಲ್ಲಿ ಸಂಶೋಧನೆ ಮತ್ತು ಜ್ಞಾನ ವರ್ಧನೆ ಅಥವಾ ಜ್ಞಾನ ಪ್ರಸಾರಕ್ಕಾಗಿ ಸೌಕರ್ಯ ಕಲ್ಪಿಸುವುದು;

(iv) ಹೊರ ಉಪನ್ಯಾಸಕರಿಂದ ಬೋಧನೆ ಮತ್ತು ವಿಸ್ತರಣಾ ಸೇವೆಗಳನ್ನು ವ್ಯವಸ್ಥೆಗೊಳಿಸುವುದು ಮತ್ತು ಕೈಗೊಳ್ಳುವುದು;

(v) ಪದವಿಗಳು, ಬಿರುದುಗಳು, ಡಿಪ್ಲೋಮಾಗಳು ಮತ್ತಿತರ ವಿದ್ಯಾ ಪ್ರಶಸ್ತಿಗಳನ್ನು ಆರಂಭಿಸುವುದು;

(vi) ಡಿಪ್ಲೊಮಾ ಅಥವಾ ಪ್ರಮಾಣ ಪತ್ರ ನೀಡಲು ಮತ್ತು ಪದವಿ ಮತ್ತಿತರ ವಿದ್ಯಾ ಪ್ರಶಸ್ತಿಗಳನ್ನು ಪ್ರದಾನ ಮಾಡಲು ಪರೀಕ್ಷೆಗಳನ್ನು ನಡೆಸುವುದು ಮತ್ತು ಯುಕ್ತ ಮತ್ತು ಸಾಕಷ್ಟು ಕಾರಣಗಳಿಗಾಗಿ ಅಂಥ ಡಿಪ್ಲೊಮಾಗಳು, ಪ್ರಮಾಣಪತ್ರಗಳು ಅಥವಾ ಇತರ ವಿದ್ಯಾ ಪ್ರಶಸ್ತಿಗಳನ್ನು ಹಿಂತೆಗೆದುಕೊಳ್ಳುವುದು;

(vii) ಶಾಸನಗಳಲ್ಲಿ ಹೇಳಲಾದ ರೀತಿಯಲ್ಲಿ ಕಾನೂನು ಕ್ಷೇತ್ರದಲ್ಲಿ ಉತ್ಕೃಷ್ಟ ಪರಿಣತಿಯುಳ್ಳ ವ್ಯಕ್ತಿಗಳಿಗೆ ಗೌರವ ಪದವಿಗಳನ್ನು ಅಥವಾ ಇತರ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು;

(viii) ವಿಶ್ವವಿದ್ಯಾಲಯಕ್ಕೆ ಕಾಲೇಜುಗಳನ್ನು, ಸಂಸ್ಥೆಗಳನ್ನು ಸಂಯೋಜಿಸುವುದು ಮತ್ತು ಅಂಥ ಸಂಯೋಜನೆಯನ್ನು ಹಿಂದಕ್ಕೆ ಪಡೆಯುವುದು;

(ix) ಫೀಜುಗಳು ಮತ್ತು ಇತರ ವೆಚ್ಚಗಳನ್ನು ಕೇಳುವುದು ಮತ್ತು ಸ್ವೀಕರಿಸುವುದು;

(x) ಹೊಸ ಕಾಲೇಜುಗಳ ಅಥವಾ ಸಂಸ್ಥೆಗಳ ಸಂಯೋಜನೆಗೆ ಮತ್ತು ಹೊಸ ವ್ಯಾಸಂಗಕ್ರಮಗಳನ್ನು ಪ್ರಾರಂಭಿಸುವುದಕ್ಕೆ ಹಾಗೂ ಪ್ರವೇಶಾವಕಾಶ ಹೆಚ್ಚಿಸುವುದಕ್ಕೆ ಸಂದಾಯ ಮಾಡಬೇಕಾದ ಶುಲ್ಕ ಮತ್ತು ಇತರ ವೆಚ್ಚಗಳನ್ನು ನಿರ್ಧರಿಸುವುದು;

(xi) ವಿಶ್ವವಿದ್ಯಾಲಯದ ಅಭಿಪ್ರಾಯದಲ್ಲಿ, ತನ್ನ ಧ್ಯೇಯೋದ್ದೇಶಗಳನ್ನು ಸಾಧಿಸಲು ಅವಶ್ಯವೆಂದು ವಿಶ್ವವಿದ್ಯಾಲಯವು ಅಭಿಪ್ರಾಯಪಡುವಂತಹ ವಿಶೇಷ ಕೇಂದ್ರಗಳು, ವಿಶಿಷ್ಟ ವಿಷಯ ಅಧ್ಯಯನ ಕೇಂದ್ರಗಳು ಅಥವಾ ಸಂಶೋಧನೆ ಹಾಗೂ ಬೋಧನೆಗಾಗಿ ಇತರ ಕೇಂದ್ರಗಳನ್ನು ಸ್ಥಾಪಿಸುವುದು;

(xii) ವಿದ್ಯಾರ್ಥಿಗಳ ವಸತಿಗಾಗಿ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸುವುದು, ನಿರ್ವಹಿಸುವುದು ಮತ್ತು ಆಡಳಿತ ನಡೆಸುವುದು;

(xiii) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಶಿಸ್ತನ್ನು ಕಾಪಾಡುವಂಥ ನಿಯಂತ್ರಣವನ್ನು ಜಾರಿಗೆ ತರುವುದು ಮತ್ತು ಅವರ ಆರೋಗ್ಯ ವೃದ್ಧಿಗಾಗಿ ಏರ್ಪಾಟುಗಳನ್ನು ಮಾಡುವುದು;

(xiv) ರಾಜ್ಯಸರ್ಕಾರದ ಪೂರ್ವಾನುಮೋದನೆ ಪಡೆದು ಶೈಕ್ಷಣಿಕ, ತಾಂತ್ರಿಕ, ಆಡಳಿತ, ಲಿಪಿಕ ಮತ್ತು ಇತರ ಹುದ್ದೆಗಳನ್ನು ಸೃಜಿಸುವುದು ಮತ್ತು ಅವುಗಳಿಗೆ ನೇಮಕಾತಿಗಳನ್ನು ಮಾಡುವುದು;

(xv) ವಿಶ್ವವಿದ್ಯಾಲಯದ ಉದ್ಯೋಗಿಗಳ ಎಲ್ಲಾ ಪ್ರವರ್ಗದವರಲ್ಲಿ ಶಿಸ್ತನ್ನು ನಿಯಂತ್ರಿಸಿ ಜಾರಿಗೊಳಿಸುವುದು ಮತ್ತು ಅಂಥ ಉದ್ಯೋಗಿಗಳ ಉದ್ಯೋಗ ನಿಬಂಧನೆಗಳು ಮತ್ತು ಸೇವಾ ಷರತ್ತುಗಳನ್ನು ವಿಧಿಸುವುದು;

(xvi) ರಾಜ್ಯದ ಮೀಸಲಾತಿ ನೀತಿಗೊಳಪಟ್ಟು ರಾಜ್ಯಸರ್ಕಾರದ ಪೂರ್ವ ಸಹಮತಿಯೊಂದಿಗೆ ವಿಶ್ವವಿದ್ಯಾಲಯಕ್ಕೆ ಅಗತ್ಯವಿರುವ ಉಪನ್ಯಾಸಕರ, ಪ್ರವಾಚಕರ, ಪ್ರಾಧ್ಯಾಪಕರ, ಮತ್ತು ಇತರ ಬೋಧಕ ಸಿಬ್ಬಂದಿಯ ಹುದ್ದೆಗಳನ್ನು ಸೃಜಿಸುವುದು ಮತ್ತು ಅಂಥ ಹುದ್ದೆಗಳಿಗೆ ವ್ಯಕ್ತಿಗಳನ್ನು ನೇಮಕ ಮಾಡುವುದು;

(xvii) ಫೆಲೋಷಿಪ್‌ಗಳು, ವಿದ್ಯಾರ್ಥಿ ವೇತನಗಳು, ಪಾರಿತೋಷಕಗಳು ಮತ್ತು ಪದಕಗಳನ್ನು ಪ್ರಾರಂಭಿಸುವುದು ಮತ್ತು ನೀಡುವುದು;

(xviii) ಸಂಶೋಧನೆ ಮತ್ತು ಇತರ ವಿಷಯಗಳ ಮುದ್ರಣ, ಪುನರ್ ಮುದ್ರಣ ಮತ್ತು ಪ್ರಕಟಣೆ ಮಾಡುವುದಕ್ಕಾಗಿ ಕಾರ್ಯನೀತಿಯನ್ನು ರೂಪಿಸುವುದು ಮತ್ತು ವಸ್ತುಪ್ರದರ್ಶನಗಳ ವ್ಯವಸ್ಥೆ ಮಾಡುವುದು;

(xix) ಕಾನೂನು, ನ್ಯಾಯ ಮತ್ತು ಸಾಮಾಜಿಕ ಅಭಿವೃದ್ಧಿಯ ವಿಷಯದಲ್ಲಿ ಎಲ್ಲಾ ರೀತಿಯಲ್ಲೂ ಸಂಶೋಧನೆ ಪ್ರಾಯೋಜಿಸುವುದು ಮತ್ತು ಕೈಗೊಳ್ಳುವುದು;

(xx) ವಿಶ್ವವಿದ್ಯಾಲಯವು, ಕಾಲಕಾಲಕ್ಕೆ ನಿರ್ಧರಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಕಾನೂನು ನ್ಯಾಯ, ಸಾಮಾಜಿಕ ಅಭಿವೃದ್ಧಿ ಮತ್ತು ಸಂಬಂಧಪಟ್ಟ ವಿಷಯಗಳಲ್ಲಿ, ಶಿಕ್ಷಣ, ತರಬೇತಿ ಮತ್ತು ಸಂಶೋಧನೆಯ ವಿಷಯಗಳಲ್ಲಿ, ಇತರ ವಿಶ್ವವಿದ್ಯಾಲಯಗಳು ಮತ್ತು ಸಂಸ್ಥೆಗಳೊಂದಿಗೆ ಸಮನ್ವಯ ಕ್ಷೇತ್ರಗಳನ್ನು ಗುರುತಿಸುವುದು;

(xxi) ವಿಶ್ವವಿದ್ಯಾಲಯವು ಹೊಂದಿರುವಂಥ ಉದ್ದೇಶಗಳನ್ನೇ ಪೂರ್ಣವಾಗಿ ಅಥವಾ ಭಾಗಶಃ ಹೊಂದಿರುವ ವಿಶ್ವದ ಯಾವುದೇ ಭಾಗದಲ್ಲಿರುವ ಇತರ ವಿಶ್ವವಿದ್ಯಾಲಯಗಳು ಅಥವಾ ಉನ್ನತ ಶಿಕ್ಷಣ ಸಂಸ್ಥೆಗಳೊಡನೆ ಅಧ್ಯಾಪಕರು ಮತ್ತು ವಿದ್ವಾಂಸರನ್ನು ಸಮಾನ ಉದ್ದೇಶಗಳಿಗೆ ಅನುಕೂಲಕರವಾದ ರೀತಿಯಲ್ಲಿ ವಿನಿಮಯ ಮಾಡಿಕೊಳ್ಳುವ ಬಗ್ಗೆ ಸಮನ್ವಯ ಕ್ಷೇತ್ರಗಳನ್ನು ಗುರುತಿಸುವುದು;

(xxii) ವಿಶ್ವವಿದ್ಯಾಲಯದ ವೆಚ್ಚವನ್ನು ನಿಯಂತ್ರಿಸುವುದು ಮತ್ತು ಲೆಕ್ಕಪತ್ರಗಳನ್ನು ನಿರ್ವಹಿಸುವುದು;

(xxiii) ವಿಶ್ವವಿದ್ಯಾಲಯವು, ಅವಶ್ಯವೆಂದು ಪರಿಗಣಿಸಬಹುದಾದಂಥ ತರಗತಿಯ ಕೊಠಡಿಗಳು, ಅಧ್ಯಯನ ಹಾಲ್‌ಗಳು ಮತ್ತು ಸಭಾಂಗಣಗಳನ್ನು ವಿಶ್ವವಿದ್ಯಾಲಯದಲ್ಲಿ ಅಥವಾ

ಬೇರೆಕಡೆಗಳಲ್ಲಿ ಸ್ಥಾಪಿಸುವುದು ಮತ್ತು ನಿರ್ವಹಿಸುವುದು ಹಾಗೂ ಅವುಗಳಿಗೆ ಪೀಠೋಪಕರಣ ಇತ್ಯಾದಿ ಒದಗಿಸುವುದು;

(xxiv) ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮತ್ತು ಸಂಶೋಧನೆಗೆ ಅವಶ್ಯಕವಾದ ಗ್ರಂಥಾಲಯಗಳು ಮತ್ತು ವಾಚನಾಲಯಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು;

(xxv) ವಿಶ್ವವಿದ್ಯಾಲಯವನ್ನು ಸ್ಥಾಪಿಸಿರುವ ಧ್ಯೇಯೋದ್ದೇಶಗಳಿಗೆ ಸುಸಂಗತವಾದ ಅನುದಾನಗಳು, ಧನಸಹಾಯಗಳು, ವಂತಿಗೆಗಳು, ದೇಣಿಗೆಗಳು ಮತ್ತು ದಾನಗಳನ್ನು ಸ್ವೀಕರಿಸುವುದು;

(xxvi) ವಿಶ್ವವಿದ್ಯಾಲಯವು, ತಾನು ಯೋಗ್ಯ ಮತ್ತು ಸೂಕ್ತವೆಂದು ಭಾವಿಸಿದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ವಿಶ್ವವಿದ್ಯಾಲಯದ ಉದ್ದೇಶಕ್ಕಾಗಿ ಅವಶ್ಯಕವಾದ ಅಥವಾ ಅನುಕೂಲಕರವಾಗಬಹುದಾದ ಯಾವುದೇ ಭೂಮಿ ಅಥವಾ ಕಟ್ಟಡ ಅಥವಾ ಕಾಮಗಾರಿಗಳನ್ನು ಖರೀದಿಸುವುದು, ಗುತ್ತಿಗೆಗೆ ತೆಗೆದುಕೊಳ್ಳುವುದು ಅಥವಾ ದಾನರೂಪದಲ್ಲಿ ಅಥವಾ ಅನ್ಯಥಾ ಸ್ವೀಕರಿಸುವುದು ಮತ್ತು ಅಂಥ ಯಾವುದೇ ಕಟ್ಟಡ ಅಥವಾ ಕಾಮಗಾರಿಗಳನ್ನು ನಿರ್ಮಿಸುವುದು ಮತ್ತು ನಿರ್ವಹಿಸಿಕೊಂಡುಬರುವುದು;

(xxvii) ವಿಶ್ವವಿದ್ಯಾಲಯದ ಹಿತಾಸಕ್ತಿಗೆ ಮತ್ತು ಕಾರ್ಯಚಟುವಟಿಕೆಗಳಿಗೆ ಬಾಧಕವಾಗದಂತೆ ತಾನು ಯೋಗ್ಯ ಮತ್ತು ಸೂಕ್ತವೆಂದು ಭಾವಿಸುವಂಥ ನಿಬಂಧನೆಗಳ ಮೇಲೆ, ಸರ್ಕಾರವು ಮಂಜೂರ್ಮಾಡಿದ ಸ್ಥಿರಸ್ಥತ್ತಿನ ಹೊರತಾಗಿ ಎಲ್ಲಾ ಚರ ಅಥವಾ ಸ್ಥಿರ ಸ್ವತ್ತುಗಳನ್ನು ಅಥವಾ ಅವುಗಳ ಯಾವುದೇ ಭಾಗವನ್ನು ಮಾರಾಟ ಮಾಡುವುದು, ವಿನಿಃಯ ಮಾಡುವುದು, ಗುತ್ತಿಗೆಗೆ ಕೊಡುವುದು ಅಥವಾ ಅನ್ಯಥಾ ವಿಲೆ ಮಾಡುವುದು;

(xxviii) ಸರ್ಕಾರದ ಭದ್ರತೆಗಳು ಅಥವಾ ಇತರ ಪ್ರಾಮಿಸರಿನೋಟುಗಳನ್ನು, ವಿನಿಮಯ ಪತ್ರ, ಚೆಕ್ ಅಥವಾ ಇತರ ವರ್ಗಾವಣೀಯ ಲಿಖಿತಪತ್ರಗಳನ್ನು ಬರೆದುಕೊಡುವುದು ಮತ್ತು ಸ್ವೀಕರಿಸುವುದು, ತಯಾರಿಸಿಕೊಡುವುದು ಅಥವಾ ಹಿಂಬರಹ ಬರೆಯುವುದು, ಡಿಸ್ಕೌಂಟ್ ಮಾಡುವುದು ಮತ್ತು ವರ್ಗಾವಣೆ ಮಾಡುವುದು;

(xxix) ವಿಶ್ವವಿದ್ಯಾಲಯಕ್ಕೆ ಸೇರಿದ ಅಥವಾ ರಾಜ್ಯ ಸರ್ಕಾರದ ಪೂರ್ವ ಸಹಮತಿಯೊಂದಿಗೆ ವಿಶ್ವವಿದ್ಯಾಲಯವು ಸ್ವಾಧೀನಪಡಿಸಿಕೊಳ್ಳಬೇಕಾದ ಸರ್ಕಾರಿ ಭದ್ರತೆಗಳೂ ಒಳಗೊಂಡಂತೆ ಚರ ಅಥವಾ ಸ್ಥಿರ ಸ್ವತ್ತಿನ ಸಂಬಂಧದಲ್ಲಿ, ಹಸ್ತಾಂತರಣ ಪತ್ರಗಳನ್ನು, ವರ್ಗಾವಣೆ ಪತ್ರಗಳನ್ನು, ಮರು ಹಸ್ತಾಂತರಣ ಪತ್ರಗಳನ್ನು, ಅಡಮಾನ ಪತ್ರಗಳನ್ನು, ಗುತ್ತಿಗೆ ಪತ್ರಗಳನ್ನು, ಅನುಮತಿ ಪತ್ರಗಳನ್ನು ಮತ್ತು ಒಪ್ಪಂದ ಪತ್ರಗಳನ್ನು ಬರೆದುಕೊಡುವುದು;

(xxx) ವಿಶ್ವವಿದ್ಯಾಲಯದ ಲಿಖಿತ ಪತ್ರವನ್ನು ಬರೆದುಕೊಡುವುದಕ್ಕಾಗಿ ಅಥವಾ ಯಾವುದೇ ವ್ಯವಹಾರವನ್ನು ಮಾಡುವುದಕ್ಕಾಗಿ ತಾನು ಸೂಕ್ತವೆಂದು ಭಾವಿಸುವ ಯಾವೊಬ್ಬ ವ್ಯಕ್ತಿಯನ್ನು ನೇಮಕ ಮಾಡುವುದು;

(xxxi) ವಿಶ್ವವಿದ್ಯಾಲಯದ ಯಾವುದೇ ತರಗತಿಯನ್ನು ಅಥವಾ ವಿಭಾಗವನ್ನು ನಡೆಸುವುದನ್ನು ಕೈಬಿಡುವುದು ಅಥವಾ ನಿಲ್ಲಿಸುವುದು;

(xxxii) ಅನುದಾನಗಳನ್ನು ಪಡೆಯುವುದಕ್ಕಾಗಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳು, ವಿಶ್ವವಿದ್ಯಾಲಯ ಅನುದಾನ ಆಯೋಗ ಅಥವಾ ಇತರ ಪ್ರಾಧಿಕಾರಗಳೊಡನೆ ಒಪ್ಪಂದ ಮಾಡಿಕೊಳ್ಳುವುದು;

(xxxiii) ತಾನು ಸೂಕ್ತವೆಂದು ಭಾವಿಸುವಂಥ ನಿಬಂಧನೆಗಳ ಮೇಲೆ, ಅನುದಾನ ಅಥವಾ ಹಣವನ್ನು, ಭದ್ರತೆಗಳನ್ನು ಅಥವಾ ಯಾವುದೇ ಬಗೆಯ ಸ್ವತ್ತನ್ನು ಸ್ವೀಕರಿಸುವುದು;

(xxxiv) ವಿಶ್ವವಿದ್ಯಾಲಯದ ಎಲ್ಲಾ ಅಥವಾ ಯಾವುವೇ ಸ್ವತ್ತುಗಳ ಮತ್ತು ಆಸ್ತಿಗಳ ಮೇಲೆ ಭದ್ರತೆಯೊಡನೆ ಅಥವಾ ಭದ್ರತೆಗಳಿಲ್ಲದೆ ಮತ್ತು ತಾನು ಸೂಕ್ತವೆಂದು ಭಾವಿಸುವಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಬಂಧಪತ್ರಗಳ, ಅಡಮಾನಗಳ, ಪ್ರಾಮಿಸರಿ ನೋಟುಗಳ ಅಥವಾ ಇತರ ದಾಯಿತ್ವಗಳ ಅಥವಾ ಭದ್ರತೆಗಳ ಮೇಲೆ ಹಣ ಸಾಲಪಡೆಯುವುದು ಮತ್ತು ಹಣಸಾಲ ಪಡೆಯುವುದಕ್ಕೆ ಪ್ರಾಸಂಗಿಕವಾಗಿ ಉಂಟಾದ ಎಲ್ಲಾ ವೆಚ್ಚಗಳನ್ನು ವಿಶ್ವವಿದ್ಯಾಲಯದ ನಿಧಿಯಿಂದ ಸಂದಾಯ ಮಾಡುವುದು ಮತ್ತು ಪಡೆದ ಯಾವುದೇ ಸಾಲವನ್ನು ಮರುಪಾವತಿ ಮಾಡುವುದು ಮತ್ತು ವಿಮೋಚನೆಗೊಳಿಸುವುದು;

(xxxv) ವಿಶ್ವವಿದ್ಯಾಲಯದ ನಿಧಿಗಳು ಅಥವಾ ವಿಶ್ವವಿದ್ಯಾಲಯಕ್ಕೆ ವಹಿಸಿಕೊಟ್ಟಿರುವ ಹಣವನ್ನು ಪ್ರಯೋಜನಕಾರಿಯೆಂದು ತಾನು ಭಾವಿಸುವಂಥ ಭದ್ರತೆಗಳಲ್ಲಿ ಅಥವಾ ಅವುಗಳ ಮೇಲೆ ಮತ್ತು ಅಂಥ ರೀತಿಯಲ್ಲಿ ಹೂಡುವುದು ಮತ್ತು ಕಾಲಕಾಲಕ್ಕೆ ಯಾವುದೇ ಹೂಡಿಕೆಯನ್ನು ಬದಲಾಯಿಸುವುದು;

(xxxvi) ವಿಶ್ವವಿದ್ಯಾಲಯದ ವ್ಯವಹಾರಗಳು ಮತ್ತು ಆಡಳಿತವನ್ನು ನಿಯಂತ್ರಿಸುವುದಕ್ಕಾಗಿ ಅವಶ್ಯಕವೆಂದು ಪರಿಗಣಿಸುವಂಥ ಶಾಸನಗಳನ್ನು ಕಾಲಕಾಲಕ್ಕೆ ರಚಿಸುವುದು ಮತ್ತು ಅವನ್ನು ಬದಲಾಯಿಸುವುದು, ಮಾರ್ಪಡಿಸುವುದು ಮತ್ತು ರದ್ದುಗೊಳಿಸುವುದು;

(xxxvii) ಶಾಸನಗಳ ಮೂಲಕ ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳಿಗೊಳಪಟ್ಟು, ಶೈಕ್ಷಣಿಕ, ತಾಂತ್ರಿಕ, ಆಡಳಿತ ಮತ್ತು ಇತರ ಸಿಬ್ಬಂದಿಯ ಪ್ರಯೋಜನಕ್ಕಾಗಿ ತಾನು ಸೂಕ್ತವೆಂದು ಭಾವಿಸಬಹುದಾದಂಥ ನಿವೃತ್ತಿವೇತನ, ವಿಮೆ, ಭವಿಷ್ಯನಿಧಿ ಮತ್ತು ಉಪದಾನದಂಥ ನಿಧಿಗಳನ್ನು ರಚಿಸುವುದು ಮತ್ತು ವಿಶ್ವವಿದ್ಯಾಲಯದ ಯಾವೊಬ್ಬ ನೌಕರನ ಪ್ರಯೋಜನಕ್ಕಾಗಿ ತಾನು ಸೂಕ್ತವೆಂದು ಭಾವಿಸುವಂಥ ಅನುದಾನಗಳನ್ನು ನೀಡುವುದು ಮತ್ತು ವಿಶ್ವವಿದ್ಯಾಲಯದ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಪ್ರಯೋಜಕ್ಕೆಂದು ಉದ್ದೇಶಿಸಿದ ಸಂಘಗಳು, ಸಂಸ್ಥೆಗಳು, ನಿಧಿಗಳು, ನ್ಯಾಸಗಳು ಮತ್ತು ವಾಹನ ಸೌಲಭ್ಯ ಸ್ಥಾಪನೆ ಮತ್ತು ಬೆಂಬಲಕ್ಕಾಗಿ ನೆರವು ನೀಡುವುದು;

(xxxviii) ಕ್ಯಾಂಪಸ್‌ನಲ್ಲೇ ಉದ್ಯೋಗಿ ಆಯ್ಕೆಗಾಗಿ ಮತ್ತು ಉದ್ಯೋಗ ನೆರವು ಸಂಸ್ಥೆಯ ಸ್ಥಾಪನೆಗಾಗಿ ವ್ಯವಸ್ಥೆ ಮಾಡುವುದು;

(xxxix) ತನ್ನ ಎಲ್ಲಾ ಅಥವಾ ಯಾವುದೇ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು, ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರಕ್ಕೆ ಅಥವಾ ಯಾವುದೇ ಸಮಿತಿಗೆ ಅಥವಾ ಯಾವುದೇ ಉಪಸಮಿತಿಗೆ ಅಥವಾ ತನ್ನ ನಿಕಾಯದ ಅಥವಾ ತನ್ನ ಕಚೇರಿಗಳ ಒಬ್ಬರು ಅಥವಾ ಹೆಚ್ಚು ಸದಸ್ಯರಿಗೆ ವಹಿಸಿಕೊಡುವುದು; ಮತ್ತು

(xl) ತನ್ನ ಧ್ಯೇಯೋದ್ದೇಶಗಳು, ಅಧಿಕಾರಗಳು ಮತ್ತು ಪ್ರಕಾರ್ಯಗಳ ಅಥವಾ ಅವುಗಳ ಪೈಕಿ ಯಾವುದಾದರೊಂದರ ಸಾಧನೆಗಾಗಿ ಅಥವಾ ವಿಸ್ತರಣೆಗಾಗಿ, ಅವಶ್ಯಕವೆಂದು, ಅನುಕೂಲಕರವೆಂದು ಅಥವಾ ಪ್ರಾಸಂಗಿಕವೆಂದು ವಿಶ್ವವಿದ್ಯಾಲಯವು ಪರಿಗಣಿಸುವಂಥ ಇತರ ಎಲ್ಲಾ ಕ್ರಮಗಳನ್ನು ಮತ್ತು ಕಾರ್ಯಗಳನ್ನು ಕೈಗೊಳ್ಳುವುದು.

6. **ಅಧಿಕಾರಕ್ಷೇತ್ರ ಮತ್ತು ವಿಶೇಷಾಧಿಕಾರಗಳಿಗೆ ಪ್ರವೇಶ.**- ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ರಲ್ಲಿ (2001ರ ಕರ್ನಾಟಕ ಅಧಿನಿಯಮ 29) ಏನೇ ಇದ್ದರೂ,-

(i) ವಿಶ್ವವಿದ್ಯಾಲಯದ ಅಧಿಕಾರಕ್ಷೇತ್ರವು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗತಕ್ಕದ್ದು;

(ii) ಕರ್ನಾಟಕ ರಾಜ್ಯದಲ್ಲಿರುವ ಕಾನೂನು ಶಿಕ್ಷಣ ನೀಡುವ ಯಾವುದೇ ಕಾಲೇಜು, ವಿಶ್ವವಿದ್ಯಾಲಯದ ಒಪ್ಪಿಗೆ ಮತ್ತು ಸರ್ಕಾರದ ಮಂಜೂರಾತಿಯೊಂದಿಗೆ ಹೊರತ್ತು ಭಾರತದ ರಾಷ್ಟ್ರೀಯ ಕಾನೂನು ವಿದ್ಯಾಲಯ ವಿಶ್ವವಿದ್ಯಾಲಯವನ್ನು ಹೊರತುಪಡಿಸಿ ಭಾರತದಲ್ಲಿರುವ ಅಥವಾ ವಿದೇಶದಲ್ಲಿರುವ ಯಾವುದೇ ಇತರ ವಿಶ್ವವಿದ್ಯಾಲಯದ ಜೊತೆಯಲ್ಲಿ ಯಾವುದೇ ರೀತಿಯಲ್ಲಿ ಸಂಬಂಧ ಹೊಂದಿರತಕ್ಕದ್ದಲ್ಲ ಅಥವಾ ಅದರ ವಿಶೇಷಾಧಿಕಾರಗಳಿಗೆ ಪ್ರವೇಶ ಕೋರತಕ್ಕದ್ದಲ್ಲ;

(iii) ರಾಜ್ಯದಲ್ಲಿರುವ ಯಾವುದೇ ಕಾನೂನು ಕಾಲೇಜು ಅಥವಾ ಕಾನೂನು ಶಿಕ್ಷಣ ನೀಡುವ ಸಂಸ್ಥೆಯು, ಗೊತ್ತುಪಡಿಸಿದ ದಿನಾಂಕಕ್ಕೆ ಮೊದಲು ಇತರ ವಿಶ್ವವಿದ್ಯಾಲಯದಿಂದ ಪಡೆಯುತ್ತಿದ್ದಂಥ ಯಾವುದೇ ವಿಶೇಷಾಧಿಕಾರವನ್ನು, ಅಂಥ ದಿನಾಂಕದಿಂದ ಜಾರಿಗೆ ಬರುವಂತೆ ಹಿಂದಕ್ಕೆ ಪಡೆಯಲಾಗಿದೆ ಎಂದು ಭಾವಿಸತಕ್ಕದ್ದು;

(iv) ಈ ಅಧ್ಯಾದೇಶವು ಪ್ರಾರಂಭವಾದ ದಿನಾಂಕದಂದು ಮತ್ತು ದಿನಾಂಕದಿಂದ ಜಾರಿಗೆ ಬರುವಂತೆ, ಈ ಹಿಂದೆ ಕರ್ನಾಟಕ, ಮೈಸೂರು, ಬೆಂಗಳೂರು, ತುಮಕೂರು, ಗುಲಬರ್ಗಾ, ಮಂಗಳೂರು, ಮಹಿಳಾ ಮತ್ತು ಕುವೆಂಪು ವಿಶ್ವವಿದ್ಯಾಲಯಗಳ ವಿಶೇಷಾಧಿಕಾರಕ್ಕೆ ಪ್ರವೇಶ ಪಡೆದುಕೊಂಡಿದ್ದ ಅಥವಾ ಸಂಯೋಜಿತವಾಗಿದ್ದ ಎಲ್ಲಾ ಕಾಲೇಜುಗಳು ಮತ್ತು ಸ್ನಾತಕೋತ್ತರ ವಿಭಾಗಗಳೂ ಸೇರಿದಂತೆ ಕಾನೂನು ಶಿಕ್ಷಣ ನೀಡುತ್ತಿರುವ ಸ್ವಾಯತ್ತ ಸಂಸ್ಥೆಗಳಿಗೆ, ಈ ವಿಶ್ವವಿದ್ಯಾಲಯದ ವಿಶೇಷಾಧಿಕಾರಗಳಿಗೆ ಪ್ರವೇಶ ನೀಡಲಾಗಿದೆ ಎಂದು ಅಥವಾ ಅವನ್ನು ಈ ವಿಶ್ವವಿದ್ಯಾಲಯಕ್ಕೆ ಸಂಯೋಜಿಸಲಾಗಿದೆ ಎಂದು ಭಾವಿಸತಕ್ಕದ್ದು.

7. **ವಿಶ್ವವಿದ್ಯಾಲಯಕ್ಕೆ ಪ್ರವೇಶ.**- (1) ಈ ಅಧಿನಿಯಮದ ಮತ್ತು ಶಾಸನಗಳ ಉಪಬಂಧಗಳಿಗೊಳಪಟ್ಟು ವಿಶ್ವವಿದ್ಯಾಲಯದಲ್ಲಿ ಎಲ್ಲಾ ವ್ಯಕ್ತಿಗಳಿಗೆ ಮುಕ್ತ ಪ್ರವೇಶ ಇರತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಇರುವುದು ಯಾವುದೂ ವಿಶ್ವವಿದ್ಯಾಲಯವನ್ನು,-

(ಎ) ನಿಯಮಿಸಲಾದ ಶೈಕ್ಷಣಿಕ ಅರ್ಹತೆಗಳನ್ನು ಅಥವಾ ಗುಣಮಟ್ಟವನ್ನು ಪಡೆದುಕೊಂಡಿರದ ಯಾವೊಬ್ಬ ವ್ಯಕ್ತಿಗೆ ಯಾವುದೇ ವ್ಯಾಸಂಗ ಕ್ರಮಕ್ಕೆ ಪ್ರವೇಶ ನೀಡುವುದಕ್ಕೆ;

(ಬಿ) ಪದವಿ, ಡಿಪ್ಲೋಮಾ ಅಥವಾ ಇತರ ಶೈಕ್ಷಣಿಕ ಪ್ರಶಸ್ತಿ ನೀಡಿಕೆಗಾಗಿ ಅಗತ್ಯಪಡಿಸಲಾದ ಕನಿಷ್ಠ ಗುಣಮಟ್ಟಕ್ಕಿಂತ ತನ್ನ ಶೈಕ್ಷಣಿಕ ಸಾಧನೆಯು, ಕಡಿಮೆ ಇರುವ ಯಾವೊಬ್ಬ ವಿದ್ಯಾರ್ಥಿಯನ್ನು ವಿಶ್ವವಿದ್ಯಾಲಯದ ಹಾಜರಿಪಟ್ಟಿಯಲ್ಲಿ ಉಳಿಸಿಕೊಳ್ಳುವುದಕ್ಕೆ; ಅಥವಾ

(ಸಿ) ವಿಶ್ವವಿದ್ಯಾಲಯದ ಹಿತಾಸಕ್ತಿಗಾ ಅಥವಾ ಇತರ ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ಹಕ್ಕುಗಳು ಮತ್ತು ವಿಶೇಷಾಧಿಕಾರಗಳಿಗೆ ಬಾಧಕವಾಗುವಂತಿರುವ ನಡತೆಯುಳ್ಳ ಯಾವೊಬ್ಬ ವ್ಯಕ್ತಿಗೆ ಅಥವಾ ಯಾವೊಬ್ಬ ವಿದ್ಯಾರ್ಥಿಗೆ ಪ್ರವೇಶ ನೀಡುವುದಕ್ಕೆ ಅಥವಾ ಅವರನ್ನು ಉಳಿಸಿಕೊಳ್ಳುವುದಕ್ಕೆ,

ಅಗತ್ಯಪಡಿಸತಕ್ಕದ್ದಲ್ಲ.

(3) (2)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು ಸರ್ಕಾರವು, ಆದೇಶದ ಮೂಲಕ ಅಂಥ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಶೇಕಡಾವಾರು ಸ್ಥಾನಗಳನ್ನು ವಿಶ್ವವಿದ್ಯಾಲಯವು, ಅನುಸೂಚಿತ ಜಾತಿಗಳಿಗೆ, ಅನುಸೂಚಿತ ಪಂಗಡಗಳಿಗೆ ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗಾಗಿ ಮೀಸಲಿಡತಕ್ಕದ್ದೆಂದು ನಿರ್ದೇಶಿಸಬಹುದು ಮತ್ತು ಅಂಥ ನಿರ್ದೇಶನವನ್ನು ನೀಡಲಾಗಿದ್ದಲ್ಲಿ ವಿಶ್ವವಿದ್ಯಾಲಯವು ತದನುಸಾರವಾಗಿ ಸ್ಥಾನಗಳನ್ನು ಮೀಸಲಿಡತಕ್ಕದ್ದು.

8. **ಶಿಸ್ತು, ಪರಿವೀಕ್ಷಣೆ ಮತ್ತು ನಿಯಂತ್ರಣ.**– (1) ಕುಲಾಧಿಪತಿಯವರು ತಾನಾಗಿಯೇ ಅಥವಾ ರಾಜ್ಯ ಸರ್ಕಾರದ ಶಿಫಾರಸುಗಳ ಮೇಲೆ ತಾನು ನಿರ್ದೇಶಿಸಬಹುದಾದಂತೆ ಒಬ್ಬ ಅಥವಾ ಹೆಚ್ಚು ವ್ಯಕ್ತಿಗಳಿರುವ ಒಂದು ವಿಚಾರಣಾ ಆಯೋಗದಿಂದ, ವಿಶ್ವವಿದ್ಯಾಲಯದ ಅದರ ಕಟ್ಟಡಗಳ, ಪ್ರಯೋಗ ಶಾಲೆಗಳ, ಗ್ರಂಥಾಲಯಗಳ, ವಸ್ತು ಸಂಗ್ರಹಾಲಯಗಳ, ಕಾರ್ಯಾಗಾರಗಳ ಮತ್ತು ಸಾಧನ ಸಾಮಗ್ರಿಗಳ ಹಾಗೂ ವಿಶ್ವವಿದ್ಯಾಲಯವು ನಿರ್ವಹಿಸುವ, ಆಡಳಿತ ನಡೆಸುವ, ಮನ್ನಣೆ ಕೊಟ್ಟಿರುವ ಅಥವಾ ಅನುಮೋದಿಸಿರುವ ಯಾವುದೇ ಸಂಸ್ಥೆ ಮತ್ತು ವಿಶ್ವವಿದ್ಯಾಲಯವು ನಡೆಸಿದ ಅಥವಾ ನಿರ್ವಹಿಸಿದ ಪರೀಕ್ಷೆಗಳ, ಬೋಧನೆಗಳ ಮತ್ತು ಇತರ ಕೆಲಸಗಳ ಪರಿವೀಕ್ಷಣೆಯನ್ನು ಮಾಡಿಸಬಹುದು ಮತ್ತು ವಿಶ್ವವಿದ್ಯಾಲಯದ ಯಾವೊಬ್ಬ ನೌಕರನ ವಿರುದ್ಧ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪೂರಕವಾಗಿ ಮಾಡಲಾದ ಯಾವುದೇ ನಿರ್ದಿಷ್ಟ ಆಪಾದನೆಗಳ ಬಗ್ಗೆ ಅದೇ ರೀತಿ ಪರಿವೀಕ್ಷಣೆ ಮಾಡಿಸಬಹುದು.

(2) (1)ನೇ ಉಪ ಪ್ರಕರಣದ ಅಡಿಯಲ್ಲಿ ಪರಿವೀಕ್ಷಣೆ ಅಥವಾ ವಿಚಾರಣೆಯನ್ನು ಮಾಡಲು ನಿರ್ದೇಶಿಸಲಾದ ಆಯೋಗವು ಆ ಉದ್ದೇಶಕ್ಕಾಗಿ ಸಂಬಂಧಪಟ್ಟ ಸಂಸ್ಥೆಗಳನ್ನು ಮತ್ತು ಆವರಣಗಳನ್ನು ಪ್ರವೇಶಿಸಲು ಮತ್ತು ಅಗತ್ಯವಾಗಬಹುದಾದಂಥ ಲೆಕ್ಕಪತ್ರಗಳನ್ನು ಅಥವಾ ಇತರ ದಾಖಲೆಗಳನ್ನು ಪರಿವೀಕ್ಷಿಸಲು ಅವಕಾಶವಿರತಕ್ಕದ್ದು.

(3) ಆಯೋಗವು, ಪರಿವೀಕ್ಷಣೆಯ ಅಥವಾ ವಿಚಾರಣೆಯ ಫಲಿತಾಂಶದ ವರದಿಯನ್ನು ಕುಲಾಧಿಪತಿಗೆ ಸಲ್ಲಿಸತಕ್ಕದ್ದು ಮತ್ತು ಅದರ ಪ್ರತಿಯನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(4) ಪರಿವೀಕ್ಷಣೆಯ ವರದಿಯನ್ನು ಸ್ವೀಕರಿಸಿದ ಕೂಡಲೇ ಕುಲಾಧಿಪತಿಯು, ಆದರ ಮೇಲೆ ತನ್ನ ತೀರ್ಮಾನಗಳನ್ನು ದಾಖಲಿಸತಕ್ಕದ್ದು ಮತ್ತು ಅವಶ್ಯಕವಾಗಬಹುದಾದ ಮುಂದಿನ ಕ್ರಮ ಕೈಗೊಳ್ಳುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು.

(5) ರಾಜ್ಯ ಸರ್ಕಾರವು, ವಿಚಾರಣೆಯ ಅಥವಾ ಪರಿವೀಕ್ಷಣೆಯ ವರದಿಯಲ್ಲಿಯ ತೀರ್ಮಾನಗಳಿಗೆ ಸಂಬಂಧಿಸಿದಂತೆ ಕುಲಾಧಿಪತಿಯು ನಿರ್ದೇಶಿಸಿದಂಥ ಕ್ರಮ ಕೈಗೊಳ್ಳಲು ಪ್ರಾರಂಭಿಸುವಂತೆ ಕುಲಪತಿಗೆ ನಿರ್ದೇಶಿಸತಕ್ಕದ್ದು ಮತ್ತು ಪ್ರಶಾಸನಸಭೆಯು ಸರ್ಕಾರದ ನಿರ್ದೇಶನಗಳನ್ನು ಅನುಷ್ಠಾನಗೊಳಿಸತಕ್ಕದ್ದು.

(6) ಕುಲಪತಿಯು, ರಾಜ್ಯ ಸರ್ಕಾರದ ಆದೇಶಗಳಲ್ಲಿ ನಿರ್ದಿಷ್ಟಪಡಿಸಲಾದ ರಾಜ್ಯ ಸರ್ಕಾರದ ನಿರ್ದೇಶನಗಳನ್ನು ಪಾಲಿಸಿ ತಾನು ಕೈಗೊಂಡ ಕ್ರಮದ ಬಗ್ಗೆ ಒಂದು ವರದಿಯನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(7) ಕುಲಪತಿಯು, ರಾಜ್ಯ ಸರ್ಕಾರದ ತೀರ್ಮಾನಗಳನ್ನು ಪಾಲಿಸಲು ತಪ್ಪಿದಲ್ಲಿ, ಆಗ ರಾಜ್ಯ ಸರ್ಕಾರದ ಆದೇಶಗಳಲ್ಲಿ ತಿಳಿಸಿರುವ ಅವಧಿಯೊಳಗೆ ಅದನ್ನು ಕುಲಾಧಿಪತಿಗೆ ವರದಿಮಾಡತಕ್ಕದ್ದು.

(8) ಪ್ರಶಾಸನಸಭೆಯು, ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅಗತ್ಯಪಡಿಸಬಹುದಾದಂತೆ, ವಿಶ್ವವಿದ್ಯಾಲಯದ ಆಡಳಿತಕ್ಕೆ ಸಂಬಂಧಪಡುವಂಥ ವಿವರಣ ಪಟ್ಟಿಗಳು, ತಃಖ್ತೆಗಳು, ಲೆಕ್ಕಪತ್ರಗಳು ಅಥವಾ ಇತರ ವಿವರಗಳನ್ನು ಸಲ್ಲಿಸತಕ್ಕದ್ದು.

9. **ನಿರ್ದೇಶನಗಳನ್ನು ನೀಡಲು ಅಧಿಕಾರ.**– ಕುಲಾಧಿಪತಿಯು, ತಾನಾಗಿಯೇ ಅಥವಾ ರಾಜ್ಯ ಸರ್ಕಾರದ ಶಿಫಾರಸಿನ ಮೇಲೆ, ವಿಶ್ವವಿದ್ಯಾಲಯದ ಆಡಳಿತ ಮತ್ತು ವಿದ್ಯಾವಿಷಯಕ ಕಾರ್ಯನಿರ್ವಹಣೆಯ ಮತ್ತು ವಿಶೇಷವಾಗಿ ಶಾಂತಿ ಮತ್ತು ನೆಮ್ಮದಿಯನ್ನು ಕಾಯ್ದುಕೊಂಡುಬರುವ ದೃಷ್ಟಿಯಿಂದ ಹಾಗೂ ಸ್ವತ್ತು ಮತ್ತು ಹಣಕಾಸು ವ್ಯವಸ್ಥೆಯನ್ನು ಸಂರಕ್ಷಿಸುವುದಕ್ಕಾಗಿ ಅವಶ್ಯಕ ಅಥವಾ ಯುಕ್ತವಾಗಬಹುದಾದಂಥ ನಿರ್ದೇಶನಗಳನ್ನು ನೀಡಬಹುದು.

10. **ವಿಶ್ವವಿದ್ಯಾಲಯದ ಆದೇಶಗಳನ್ನು ರದ್ದುಗೊಳಿಸಲು ಅಧಿಕಾರ.**– (1) ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ, ಈ ಅಧಿನಿಯಮದ ಅಥವಾ ಶಾಸನಗಳು, ವಿನಿಯಮಗಳು ಅಥವಾ ಪರ್ಯಾದೇಶಗಳ ಉಪಬಂಧಗಳಿಗೆ ಸುಸಂಗತವಾಗಿಲ್ಲವೆಂದು ಅಥವಾ ಅನ್ಯಥಾ ರಾಜ್ಯಸರ್ಕಾರದ ಕಾರ್ಯನೀತಿಗೆ ಅಸಂಗತವಾಗಿದೆಯೆಂದು ತಾನು ಅಭಿಪ್ರಾಯಪಡುವ ಯಾವುದೇ ಆದೇಶ, ಅಧಿಸೂಚನೆ, ಠರಾವು ಅಥವಾ ಯಾವುವೇ ವ್ಯವಹರಣೆಗಳನ್ನು ರದ್ದುಗೊಳಿಸಬಹುದು:

ಪರಂತು, ಅಂಥ ಯಾವುದೇ ಆದೇಶವನ್ನು ಮಾಡುವುದಕ್ಕೆ ಮೊದಲು ರಾಜ್ಯ ಸರ್ಕಾರವು, ವಿಶ್ವವಿದ್ಯಾಲಯಕ್ಕೆ ತನ್ನ ಅಹವಾಲು ಹೇಳಿಕೊಳ್ಳಲು ಒಂದು ಅವಕಾಶವನ್ನು ಕೊಡತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಿದ ಪ್ರತಿಯೊಂದು ಆದೇಶವನ್ನು ಅದನ್ನು ಹೊರಡಿಸಿದ ತರುವಾಯ ಸಾಧ್ಯವಾದಷ್ಟು ಬೇಗನೇ ರಾಜ್ಯವಿಧಾನಮಂಡಲದ ಉಭಯಸದನಗಳ ಮುಂದೆ ಮಂಡಿಸತಕ್ಕದ್ದು.

ಅಧ್ಯಾಯ – III
ವಿಶ್ವವಿದ್ಯಾಲಯದ ಅಧಿಕಾರಿಗಳು

11. **ವಿಶ್ವವಿದ್ಯಾಲಯದ ಅಧಿಕಾರಿಗಳು.**– ಈ ಕೆಳಕಂಡವರು ವಿಶ್ವವಿದ್ಯಾಲಯದ ಅಧಿಕಾರಿಗಳಾಗಿರತಕ್ಕದ್ದು ಎಂದರೆ:–

(i) ಕುಲಾಧಿಪತಿ;

(ii) ಸಹಕುಲಾಧಿಪತಿ;

(iii) ಕುಲಪತಿ;

(iv) ಕುಲಸಚಿವ;

(v) ಕುಲಸಚಿವ (ಮೌಲ್ಯಮಾಪನ);

(vi) ಹಣಕಾಸು ಅಧಿಕಾರಿ;

(vii) ಶಾಸನಗಳ ಮೂಲಕ ವಿಶ್ವವಿದ್ಯಾಲಯದ ಅಧಿಕಾರಿಗಳೆಂದು ಘೋಷಿಸಬಹುದಾದಂಥ ಇತರ ಅಧಿಕಾರಿಗಳು.

12. ಕುಲಾಧಿಪತಿ.- (1) ಕರ್ನಾಟಕದ ರಾಜ್ಯಪಾಲರು ತಮ್ಮ ಹುದ್ದೆಯ ಬಲದಿಂದಾಗಿ ವಿಶ್ವವಿದ್ಯಾಲಯದ ಕುಲಾಧಿಪತಿಯಾಗಿರತಕ್ಕದ್ದು.

(2) ಕುಲಾಧಿಪತಿಯವರು ವಿಶ್ವವಿದ್ಯಾಲಯದ ಮುಖ್ಯಸ್ಥರಾಗಿರತಕ್ಕದ್ದು ಮತ್ತು ವಿಶ್ವವಿದ್ಯಾಲಯದ ಘಟಿಕೋತ್ಸವಗಳ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(3) ವಿಶ್ವವಿದ್ಯಾಲಯವು, ಕುಲಾಧಿಪತಿಯವರ ಪೂರ್ವ ಅನುಮೋದನೆ ಪಡೆಯದೆ ಯಾವ ವ್ಯಕ್ತಿಗೂ ಯಾವುದೇ ಗೌರವ ಪದವಿಯನ್ನು ನೀಡತಕ್ಕದ್ದಲ್ಲ.

(4) ಕುಲಾಧಿಪತಿಯವರು ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ತಮಗೆ ಪ್ರದತ್ತವಾಗಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಇತರ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

13. ಸಹಕುಲಾಧಿಪತಿ.- (1) ಕರ್ನಾಟಕದ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಖಾತೆಯ ಪ್ರಭಾರದ ಸಚಿವರು ತಮ್ಮ ಹುದ್ದೆಯ ಬಲದಿಂದಾಗಿ ಸಹಕುಲಾಧಿಪತಿಗಳಾಗಿರತಕ್ಕದ್ದು.

(2) ಸಹಕುಲಾಧಿಪತಿಯವರು, ಕುಲಾಧಿಪತಿಯವರ ಅನುಪಸ್ಥಿತಿಯಲ್ಲಿ ವಿಶ್ವವಿದ್ಯಾಲಯದ ಘಟಿಕೋತ್ಸವದ ಅಧ್ಯಕ್ಷತೆ ವಹಿಸತಕ್ಕದ್ದು.

(3) ಸಹಕುಲಾಧಿಪತಿಯವರು ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಅಥವಾ ಶಾಸನಗಳ ಅಡಿಯಲ್ಲಿ ತಮಗೆ ಪ್ರದತ್ತವಾಗಬಹುದಾದಂಥ ಕುಲಾಧಿಪತಿಯವರ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಚಲಾಯಿಸತಕ್ಕದ್ದು. ಕುಲಾಧಿಪತಿಯವರು, ಸಹಕುಲಾಧಿಪತಿಯವರಿಗೆ ಲಿಖಿತ ಆದೇಶದ ಮೂಲಕ ಪ್ರತ್ಯಾಯೋಜಿಸಬಹುದಾದಂಥ ಕುಲಾಧಿಪತಿಯವರ ಅಧಿಕಾರಗಳನ್ನು ಸಹ ಚಲಾಯಿಸತಕ್ಕದ್ದು ಮತ್ತು ಅಂಥ ಇತರ ಕರ್ತವ್ಯಗಳನ್ನು ಸಹ ನಿರ್ವಹಿಸತಕ್ಕದ್ದು ಮತ್ತು ಅಂಥ ಪ್ರತ್ಯಾಯೋಜನೆಯು ಆ ಆದೇಶದಲ್ಲಿ ನಿರ್ದಿಷ್ಟಪಡಿಸಿದಂಥ ನಿರ್ಬಂಧಗಳು ಮತ್ತು ಷರತ್ತುಗಳಿಗೊಳಪಟ್ಟಿರತಕ್ಕದ್ದು.

14. ಕುಲಪತಿಯವರು.- (1) ಕುಲಪತಿಯವರು ವಿಶ್ವವಿದ್ಯಾಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು ಮತ್ತು ಅವರು ರಾಜ್ಯಸರ್ಕಾರವು ರಚಿಸಿದ ಈ ಮುಂದಿನ ವ್ಯಕ್ತಿಗಳನ್ನು , ಎಂದರೆ:-

(i) ಕುಲಾಧಿಪತಿಯವರ ಒಬ್ಬ ನಾಮನಿರ್ದೇಶಿತರು;

(ii) ಅಧ್ಯಕ್ಷರು, ವಿಶ್ವವಿದ್ಯಾಲಯ ಅನುದಾನ ಆಯೋಗ ಅಥವಾ ಅವರ ನಾಮನಿರ್ದೇಶಿತರು

(iii) ರಾಜ್ಯ ಸರ್ಕಾರದ ಒಬ್ಬ ನಾಮನಿರ್ದೇಶಿತರು;

(iv) ಪ್ರಶಾಸನ ಸಭೆಯ ಒಬ್ಬ ನಾಮನಿರ್ದೇಶಿತರು;

– ಇವರುಗಳನ್ನು ಒಳಗೊಂಡ ಶೋಧನಾ ಸಮಿತಿಯು ತಯಾರಿಸಿದ ಕಾನೂನಿನ ಖ್ಯಾತ ವಿದ್ವಾಂಸರ ಪಟ್ಟಿಯಿಂದ ಕುಲಾಧಿಪತಿಯವರು ನೇಮಕಮಾಡಿದವರಾಗಿರತಕ್ಕದ್ದು:

ಪರಂತು, ಕುಲಾಧಿಪತಿಯವರು ಶೋಧನಾ ಸಮಿತಿಯ ಸದಸ್ಯರ ಪೈಕಿಯಿಂದ ಒಬ್ಬರನ್ನು ಅಧ್ಯಕ್ಷರಾಗಿ ಕೆಲಸ ನಿರ್ವಹಿಸಲು ನಾಮನಿರ್ದೇಶಿಸತಕ್ಕದ್ದು. ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳು ಶೋಧನಾ ಸಮಿತಿಯ ಸಂಚಾಲಕರಾಗಿರತಕ್ಕದ್ದು.

(2) ರಾಜ್ಯಸರ್ಕಾರದ, ವಿಶ್ವವಿದ್ಯಾಲಯದ ಅಥವಾ ವಿಶ್ವವಿದ್ಯಾಲಯಕ್ಕೆ ಸಂಯೋಜಿತವಾದ ಯಾವುದೇ ಕಾಲೇಜಿನ ಅಥವಾ ಸಂಸ್ಥೆಯ ವ್ಯವಹಾರಗಳೊಂದಿಗೆ ಸಂಬಂಧವಿರುವ ಯಾವ ವ್ಯಕ್ತಿಯನ್ನೂ ಶೋಧನಾ ಸಮಿತಿಯ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡತಕ್ಕದ್ದಲ್ಲ.

(3) ಶೋಧನಾ ಸಮೀತಿಯು ರಾಜ್ಯ ಸರ್ಕಾರಕ್ಕೆ ಮೂವರು ಖ್ಯಾತ ವಿದ್ವಾಂಸರ ಹೆಸರಿನ ಒಂದು ಪಟ್ಟಿಯನ್ನು ಅಕಾರಾದಿ ಕ್ರಮದಲ್ಲಿ ಕಳುಹಿಸಿಕೊಡತಕ್ಕದ್ದು ರಾಜ್ಯ ಸರ್ಕಾರವು ಆ ಪಟ್ಟಿಯನ್ನು ಕುಲಾಧಿಪತಿಗಳಿಗೆ ಕಳುಹಿಸಿಕೊಡತಕ್ಕದ್ದು ; ಅವರು ಅರ್ಹತೆ, ಸಮದರ್ಶಿತ್ವ ಮತ್ತು ಸಾಮಾಜಿಕ ನ್ಯಾಯ ಇವುಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ರಾಜ್ಯ ಸರ್ಕಾರದ ಸಹಮತಿಯೊಂದಿಗೆ ಪಟ್ಟಿಯಲ್ಲಿರುವ ಒಬ್ಬ ವ್ಯಕ್ತಿಯನ್ನು ಕುಲಪತಿಯಾಗಿ ನೇಮಿಸತಕ್ಕದ್ದು ;

ಪರಂತು, ಕುಲಾಧಿಪತಿಗಳು ರಾಜ್ಯ ಸರ್ಕಾರದ ಸಹಮತಿಯೊಂದಿಗೆ ಅವಶ್ಯವಿದೆ ಎಂದು ಕಂಡು ಬಂದರೆ ಎರಡನೇ ಪಟ್ಟಿಯನ್ನು ಕೋರಬಹುದು ಮತ್ತು ಶೋಧನಾ ಸಮಿತಿಯು ಎರಡನೇ ಪಟ್ಟಿಯನ್ನು ಸಲ್ಲಿಸತಕ್ಕದ್ದು. ಅದೇ ಅಂತಿಮವಾಗಿರಬೇಕು.

(4) (3)ನೇ ಉಪ ಪ್ರಕರಣದಲ್ಲಿ ಏನೇ ಇದ್ದರೂ, ವಿಶ್ವವಿದ್ಯಾಲಯದ ಮೊದಲ ಕುಲಪತಿಯವರನ್ನು ರಾಜ್ಯ ಸರ್ಕಾರದ ಶಿಫಾರಸ್ಸಿನ ಮೇಲೆ ಕುಲಾಧಿಪತಿಯವರು ನೇಮಕ ಮಾಡತಕ್ಕದ್ದು.

(5) ಕುಲಪತಿಯವರು ನಾಲ್ಕು ವರ್ಷಗಳವರೆಗೆ ಅಥವಾ ಅವರಿಗೆ 65 ವರ್ಷಗಳಾಗುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಆ ಅವಧಿಯವರೆಗೆ ಪದಧಾರಣೆಯನ್ನು ಮಾಡತಕ್ಕದ್ದು. ಅವರು ಪುನರ್ ನೇಮಕಾತಿಗೆ ಅರ್ಹರಾಗಿರತಕ್ಕದ್ದಲ್ಲ.

(6) ಕುಲಪತಿಯವರನ್ನು, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದನ್ನು ಉದ್ದೇಶಪೂರ್ವಕವಾಗಿ ಕೈಬಿಟ್ಟಿದ್ದಾರೆ ಅಥವಾ ಕಾರ್ಯಗತಗೊಳಿಸಲು ನಿರಾಕರಿಸಿದ್ದಾರೆ ಅಥವಾ ಅವರಲ್ಲಿ ನಿಹಿತವಾದ, ಅಧಿಕಾರಗಳನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂಬ ಕಾರಣದ ಮೇಲೆ ಮತ್ತು ರಾಜ್ಯ ಸರ್ಕಾರವು (7)ನೇ ಉಪ ಪ್ರಕರಣದ ಅಡಿಯಲ್ಲಿ ತಾನು ಆದೇಶಿಸಿದ್ದ ಒಂದು ವಿಚಾರಣೆಯ ವರದಿಯನ್ನು ಪರಿಗಣಿಸಿದ ನಂತರ ನೀಡಿದ ಸಲಹೆಯ ಮೇಲೆ ಕುಲಾಧಿಪತಿಯವರು ಹೊರಡಿಸಿದ ಆದೇಶದ ಮೂಲಕವಾಗಿ ಅಲ್ಲದೆ, ಅವರ ಅಧಿಕಾರಸ್ಥಾನದಿಂದ ತೆಗೆದುಹಾಕತಕ್ಕದ್ದಲ್ಲ.

(7) ಈ ಪ್ರಕರಣದ ಅಡಿಯಲ್ಲಿ ಒಂದು ವಿಚಾರಣೆಯನ್ನು ನಡೆಸುವ ಉದ್ದೇಶಕ್ಕಾಗಿ, ರಾಜ್ಯಸರ್ಕಾರವು, ಉಚ್ಚ ನ್ಯಾಯಾಲಯದ ಅಥವಾ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿರುವ ಅಥವಾ ಆಗಿದ್ದ ವ್ಯಕ್ತಿಯನ್ನು ನೇಮಕ ಮಾಡತಕ್ಕದ್ದು. ವಿಚಾರಣಾ ಪ್ರಾಧಿಕಾರವು, ಕುಲಪತಿಯವರಿಗೆ ತಮ್ಮ ಮನವಿಯನ್ನು ಸಲ್ಲಿಸಲು ಅವಕಾಶ ನೀಡಿದ ನಂತರ ವಿಚಾರಣೆ ನಡೆಸತಕ್ಕದ್ದು ಮತ್ತು ವಿಧಿಸಬೇಕಾದ ಯಾವುದೇ ದಂಡನೆ ಇದ್ದರೆ, ಅದೂ ಒಳಗೊಂಡಂತೆ ತೆಗೆದುಕೊಳ್ಳಬೇಕಾದ ಕ್ರಮದ ಬಗ್ಗೆ ಒಂದು ವರದಿಯನ್ನು ರಾಜ್ಯಸರ್ಕಾರಕ್ಕೆ ಸಲ್ಲಿಸತಕ್ಕದ್ದು. ರಾಜ್ಯಸರ್ಕಾರವು, ವರದಿಯನ್ನು ಪರಿಶೀಲಿಸಿದ ನಂತರ, ಕುಲಾಧಿಪತಿಯವರಿಗೆ ಸಲಹೆ ನೀಡತಕ್ಕದ್ದು. ಕುಲಾಧಿಪತಿಯವರು ಸಾಧ್ಯವಾದಷ್ಟುಮಟ್ಟಿಗೆ ಆರು ತಿಂಗಳೊಳಗಾಗಿ ಅಂಥ ಸಲಹೆಗೆ ಅನುಸಾರವಾಗಿ ಕ್ರಮ ಕೈಗೊಳ್ಳತಕ್ಕದ್ದು.

(8) ಕುಲಪತಿಯವರ ಉಪಲಬ್ಧಿಗಳು ಮತ್ತು ಇತರ ಸೇವಾ ಷರತ್ತುಗಳು ಕುಲಾಧಿಪತಿಯವರು ನಿರ್ಧರಿಸಬಹುದಾದಂತೆ ಇರತಕ್ಕದ್ದು ಮತ್ತು ಅವುಗಳನ್ನು ಅವರು ಕುಲಪತಿಯಾಗಿ ನೇಮಕವಾದ ತರುವಾಯ ಅವರಿಗೆ ಅನಾನುಕೂಲವಾಗುವಂತೆ ಬದಲಾಯಿಸತಕ್ಕದ್ದಲ್ಲ. ಕುಲಪತಿಯಾಗಿ ತಮ್ಮ ಅಧಿಕಾರಾವಧಿಯಲ್ಲಿರುವಾಗ ಕುಲಪತಿಯವರು ವಯೋನಿವೃತ್ತಿಯ ಮೇಲೆ ನಿವೃತ್ತರಾಗುವ ಸಂದರ್ಭದಲ್ಲಿ, ಈಗಾಗಲೇ ನಿರ್ಧರಿಸಲಾದ ಅವರ ಸೇವಾ ಷರತ್ತುಗಳು ಮುಂದುವರಿಯತಕ್ಕದ್ದು. ಅವರ ಎಲ್ಲ ನಿವೃತ್ತಿ ಸೌಲಭ್ಯಗಳನ್ನು ತಡೆಹಿಡಿಯತಕ್ಕದ್ದು, ಅವುಗಳನ್ನು ಅವರು ಕುಲಪತಿಯಾಗಿ ತಮ್ಮ ಅಧಿಕಾರ ಸ್ಥಾನವನ್ನು ತ್ಯಜಿಸಿದ ನಂತರ ಬಿಡುಗಡೆ ಮಾಡತಕ್ಕದ್ದು.

(9) ಕುಲಪತಿಯವರು ಕುಲಾಧಿಪತಿಯವರಿಗೆ ರಾಜೀನಾಮೆ ಪತ್ರವನ್ನು ಬರೆದು ಅದಕ್ಕೆ ತನ್ನ ಸಹಿ ಹಾಕಿ ತಾನು ಬಿಡುಗಡೆಗೊಳ್ಳಲು ಇಚ್ಛಿಸುವ ದಿನಾಂಕದಿಂದ ಸಾಮಾನ್ಯವಾಗಿ ಅರವತ್ತು ದಿನಗಳಿಗೆ ಮೊದಲು ಅದನ್ನು ಕುಲಾಧಿಪತಿಯವರಿಗೆ ಕಳುಹಿಸುವ ಮೂಲಕ ತನ್ನ ಸ್ಥಾನವನ್ನು ತ್ಯಜಿಸಬಹುದು. ಆದರೆ ಕುಲಾಧಿಪತಿಯವರು ಅವರನ್ನು ಅದಕ್ಕೂ ಮೊದಲೇ ಬಿಡುಗಡೆಗೊಳಿಸಬಹುದು.

(10) ಕುಲಪತಿಯವರ ಹುದ್ದೆಯು ತಾತ್ಕಾಲಿಕವಾಗಿ ಖಾಲಿಯಾದಲ್ಲಿ ಅಥವಾ ಅವರು ರಜೆಯ ಕಾರಣದಿಂದಾಗಿ ಅಥವಾ ಇನ್ನಾವುದೇ ಕಾರಣಗಳಿಗಾಗಿ ಗೈರುಹಾಜರಾದಲ್ಲಿ ವಿಶ್ವವಿದ್ಯಾಲಯದ ಅತ್ಯಂತ ಹಿರಿಯ ಪ್ರಾಧ್ಯಾಪಕರು, ಕುಲಾಧಿಪತಿಯವರ ಅನುಮೋದನೆ ಪಡೆದು ಕುಲಪತಿಯವರ ಕರ್ತವ್ಯಗಳನ್ನು 6 ತಿಂಗಳುಗಳನ್ನು ಮೀರದ ಅವಧಿಯವರೆಗೆ ನಿರ್ವಹಿಸಬಹುದು.

(11) ನಿವೃತ್ತರಾದ ಒಬ್ಬ ವ್ಯಕ್ತಿಯು, ಕುಲಪತಿಯಾಗಿ ನೇಮಕಗೊಂಡರೆ, ಅವರು ಕುಲಪತಿಯಾಗಿ ನೇಮಕಗೊಂಡ ಮೇಲೆ, ಅವರ ಉಪಲಬ್ಧಿಗಳೂ ಸೇರಿದಂತೆ ಅವರ ಸೇವಾ ನಿಬಂಧನೆ ಮತ್ತು ಷರತ್ತುಗಳನ್ನು ಕುಲಾಧಿಪತಿಯವರು ನಿರ್ಣಯಿಸತಕ್ಕದ್ದು. ಅವರು ಪಡೆಯುವ ನಿವೃತ್ತಿ ವೇತನದ ಮೊತ್ತವನ್ನು ಮತ್ತು ಭತ್ಯಗಳನ್ನು ಅವರ ಉಪಲಬ್ಧಿಗಳಿಂದ ಕಳೆಯತಕ್ಕದ್ದು.

(12) ರಾಜ್ಯದಲ್ಲಿನ ಒಂದು ವಿಶ್ವವಿದ್ಯಾಲಯದ ಸೇವೆಯಲ್ಲಿರುವ ಒಬ್ಬ ಪ್ರಾಧ್ಯಾಪಕರು, ಕುಲಪತಿಯಾಗಿ ನೇಮಕ ಮಾಡಿದರೆ, ಅವರು ಕುಲಪತಿಯಾಗಿರುವ ಅಧಿಕಾರಾವಧಿಯಲ್ಲಿ ಪ್ರಾಧ್ಯಾಪಕರಾಗಿ ಅವರ ಸೇವಾ ನಿಬಂಧನೆ ಮತ್ತು ಷರತ್ತುಗಳನ್ನು ಅವರಿಗೆ ಅನಾನುಕೂಲವಾಗುವಂತೆ ಪರಿಷ್ಕರಿಸತಕ್ಕದ್ದಲ್ಲ ಮತ್ತು ಅವರು ತಮ್ಮ ಹುದ್ದೆಯ ಧಾರಣಾಧಿಕಾರವನ್ನು ಉಳಿಸಿಕೊಳ್ಳತಕ್ಕದ್ದು.

15. ಕುಲಪತಿಯವರ ಅಧಿಕಾರಗಳು.- (1) ಕುಲಪತಿಯವರು, ವಿಶ್ವವಿದ್ಯಾಲಯದ ಪ್ರಧಾನ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಶೈಕ್ಷಣಿಕ ವಿಷಯಗಳ ಮುಖ್ಯಸ್ಥರಾಗಿರತಕ್ಕದ್ದು ಮತ್ತು ವಿಶ್ವವಿದ್ಯಾಲಯದ ವ್ಯವಹಾರಗಳ ಮೇಲ್ವಿಚಾರಣೆ ಹಾಗೂ ನಿಯಂತ್ರಣವನ್ನು ನಡೆಸತಕ್ಕದ್ದು ಮತ್ತು ವಿಶ್ವವಿದ್ಯಾಲಯದ ಪ್ರಾಧಿಕಾರಗಳ ತೀರ್ಮಾನಗಳನ್ನು ಜಾರಿಗೊಳಿಸತಕ್ಕದ್ದು. ವಿಶ್ವವಿದ್ಯಾಲಯದಲ್ಲಿ ಶಿಸ್ತುಪಾಲನೆಗೆ ಅವಶ್ಯವಾದ ಎಲ್ಲಾ ಅಧಿಕಾರಗಳನ್ನು ಅವರು ಹೊಂದಿರತಕ್ಕದ್ದು.

(2) ಕುಲಪತಿಯವರು, ಪ್ರಶಾಸನ ಸಭೆಯ, ಪ್ರಶಿಕ್ಷಣ ಪರಿಷತ್ತಿನ ಮತ್ತು ಹಣಕಾಸು ಸಮಿತಿಯ ಪದನಿಮಿತ್ತ ಅಧ್ಯಕ್ಷರಾಗಿರತಕ್ಕದ್ದು.

(3) ಕುಲಪತಿಯವರು, ಶಾಸನಗಳ ಮತ್ತು ಪರ್ಯಾದೇಶಗಳ ಮೂಲಕ ನಿಯಮಿಸಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(4) ಕುಲಪತಿಯವರು, ಈ ಅಧಿನಿಯಮದ ಉಪಬಂಧಗಳು, ಶಾಸನಗಳು, ಪರ್ಯಾದೇಶಗಳು ಮತ್ತು ವಿನಿಯಮಗಳು ಕಟ್ಟುನಿಟ್ಟಾಗಿ ಪಾಲನೆಯಾಗುವಂತೆ ನೋಡಿಕೊಳ್ಳತಕ್ಕದ್ದು.

(5) ಕುಲಪತಿಯವರು, ಪ್ರಶಾಸನ ಸಭೆಯ ಮತ್ತು ಪ್ರವಿಕ್ಷಣ ಪರಿಷತ್ತಿನ ಸಭೆಗಳನ್ನು ಕರೆಯತಕ್ಕದ್ದು ಮತ್ತು ಸದರಿ ಸಭೆಗಳನ್ನು ಕರೆಯುವ ಅಧಿಕಾರವನ್ನು ವಿಶ್ವವಿದ್ಯಾಲಯದ ಯಾವೊಬ್ಬ ಅಧಿಕಾರಿಗೆ ಲಿಖಿತ ಆದೇಶದ ಮೂಲಕ ಪ್ರತ್ಯಾಯೋಜಿಸಬಹುದು.

(6) ಕುಲಪತಿಯು, ಯಾವುದೇ ವಿಷಯದ ಮೇಲೆ ತಕ್ಷಣದ ಕ್ರಮವು ಅವಶ್ಯವೆಂದು ಅಭಿಪ್ರಾಯಪಟ್ಟರೆ, ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರಕ್ಕೆ ಪ್ರದತ್ತವಾದ ಯಾವುದೇ ಅಧಿಕಾರವನ್ನು ಚಲಾಯಿಸಬಹುದು ಮತ್ತು ಅಂಥ ವಿಷಯದ ಮೇಲೆ ತಾನು ಕೈಗೊಂಡ ಕ್ರಮದ ಬಗ್ಗೆ ಅಂಥ ಪ್ರಾಧಿಕಾರಕ್ಕೆ ವರದಿ ಸಲ್ಲಿಸತಕ್ಕದ್ದು:

ಪರಂತು, ಅಂಥ ಕ್ರಮವನ್ನು ಕೈಗೊಳ್ಳಬಾರದಿತ್ತೆಂದು ಸಂಬಂಧಪಟ್ಟ ಪ್ರಾಧಿಕಾರವು ಅಭಿಪ್ರಾಯಪಟ್ಟರೆ, ಅದು ಆ ವಿಷಯವನ್ನು ಕುಲಾಧಿಪತಿಯವರಿಗೆ ಕಳುಹಿಸತಕ್ಕದ್ದು ಮತ್ತು ಅದರ ಮೇಲೆ ಕುಲಾಧಿಪತಿಯವರ ತೀರ್ಮಾನವು ಅಂತಿಮವಾಗಿರತಕ್ಕದ್ದು.

(7) ಕುಲಪತಿಯವರು,–

(ಎ) ವಿಶ್ವವಿದ್ಯಾಲಯದ ಸೂಕ್ತ ಆಡಳಿತ ನಿರ್ವಹಣೆ ಮತ್ತು ಬೋಧನೆ, ಸಂಶೋಧನೆ ಹಾಗೂ ಜ್ಞಾನ ಪ್ರಸಾರದ ನಿಕಟ ಸಮನ್ವಯ ಮತ್ತು ಸಂಯೋಜನೆಗೆ;

(ಬಿ) ಪ್ರಶಾಸನ ಸಭೆಗೆ ವಾರ್ಷಿಕ ಹಣಕಾಸುಗಳು ಮತ್ತು ವಾರ್ಷಿಕ ಲೆಕ್ಕಪತ್ರಗಳು ಮತ್ತು ಜಮಾ-ಖರ್ಚು ಪಟ್ಟಿಯನ್ನು ಮಂಡಿಸುವುದಕ್ಕೆ,

– ಜವಾಬ್ದಾರರಾಗಿರತಕ್ಕದ್ದು.

16. **ಕುಲಪತಿಯವರ ಸ್ಥಾನವು ಖಾಲಿಯಿರುವಾಗ ಕೆಲಸದ ವ್ಯವಸ್ಥೆ.**– (1) ರಜೆ, ಖಾಯಿಲೆ ಅಥವಾ ಇನ್ನಾವುದೇ ಕಾರಣದಿಂದಾಗಿ ಕುಲಪತಿಯವರ ತಾತ್ಕಾಲಿಕ ಗೈರುಹಾಜರಿಯಲ್ಲಿ, ಕುಲಾಧಿಪತಿಯವರು, ಕುಲಪತಿಯವರ ಕರ್ತವ್ಯಗಳನ್ನು ನಡೆಸಿಕೊಂಡು ಹೋಗುವುದಕ್ಕೆ ತಾನು ಸೂಕ್ತನೆಂದು ಭಾವಿಸುವಂಥ ವ್ಯವಸ್ಥೆಯನ್ನು ಮಾಡಬಹುದು:

ಪರಂತು, ಕುಲಾಧಿಪತಿಯವರು ಅಂಥ ವ್ಯವಸ್ಥೆಯನ್ನು ಮಾಡುವವರೆಗೆ ಕುಲಪತಿಯವರು ಒಂದು ತಿಂಗಳು ಮೀರದಂಥ ಅವಧಿಗೆ ಅಥವಾ ಕುಲಾಧಿಪತಿಯವರು ವ್ಯವಸ್ಥೆ ಮಾಡುವವರೆಗೆ, ಅವರೆಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ, ವಿಶ್ವವಿದ್ಯಾಲಯದಲ್ಲಿ ಇರುವಂಥ ಅತ್ಯಂತ ಹಿರಿಯ ಡೀನ್ ಅವರನ್ನು ಕುಲಪತಿಯವರ ಪ್ರಸಕ್ತ ಕರ್ತವ್ಯಗಳ ಪ್ರಭಾರವಹಿಸಲು ಹೆಸರಿಸಬಹುದು.

(2) ಕುಲಪತಿಯವರ ಸ್ಥಾನವು ಭರ್ತಿಯಾಗದೆ ಖಾಲಿ ಉಳಿದಿರುವ ಅವಧಿಯವರೆಗೆ, ಕುಲಾಧಿಪತಿಯವರು ನೇಮಿಸಬಹುದಾದಂಥ, ವಿಶ್ವವಿದ್ಯಾಲಯದಲ್ಲಿ ಇರುವ ಅತ್ಯಂತ ಹಿರಿಯ ಡೀನ್ ಅವರು ಕುಲಪತಿಯಾಗಿ ಕಾರ್ಯ ನಿರ್ವಹಿಸತಕ್ಕದ್ದು ಮತ್ತು ಹಾಗೆ ನೇಮಕಗೊಂಡ ವ್ಯಕ್ತಿಯು, ಕುಲಪತಿಯವರ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಎಲ್ಲಾ ವಿಶೇಷಾಧಿಕಾರಗಳಿಗೂ ಹಾಗೂ ಈ ಕುರಿತು ರಚಿಸಲಾದ ಶಾಸನಗಳಾವುವಾದರೂ ಇದ್ದಲ್ಲಿ, ಅವುಗಳಿಗನ್ವಯ ಕುಲಾಧಿಪತಿಯವರು ನಿರ್ಧರಿಸಬಹುದಾದಂಥ ಉಪಲಬ್ಧಿಗಳು ಮತ್ತು ಭತ್ಯೆಗಳಿಗೂ ಹಕ್ಕುಳ್ಳವರಾಗಿರತಕ್ಕದ್ದು.

17. ಕುಲಸಚಿವರು.– (1) ಕುಲಸಚಿವರು ವಿಶ್ವವಿದ್ಯಾಲಯದ ಪೂರ್ಣ ಕಾಲಿಕ ಅಧಿಕಾರಿಯಾಗಿರತಕ್ಕದ್ದು.

(2) ರಾಜ್ಯ ಸರ್ಕಾರವು, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ಅಥವಾ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳ ದರ್ಜೆಗಿಂತ ಕಡಿಮೆಯಿಲ್ಲದ ಒಬ್ಬರು ಅಧಿಕಾರಿಯನ್ನು ಅಥವಾ ಅಖಿಲ ಭಾರತ ಸೇವೆಗಳಿಗೆ ಸೇರಿರುವ ಗರಿಷ್ಠ ಕಾಲ ಶ್ರೇಣಿಯಲ್ಲಿ (ಸೂಪರ ಟೈಂ ಸ್ಕೇಲ್) ಕಾರ್ಯ ನಿರ್ವಹಿಸುತ್ತಿರುವ ಒಬ್ಬರು ಅಧಿಕಾರಿಯನ್ನು ವಿಶ್ವವಿದ್ಯಾಲಯದ ಕುಲಸಚಿವರನ್ನಾಗಿ ನೇಮಿಸಬಹುದು.

(3) ಕುಲಸಚಿವರ ಸ್ಥಾನವು ಖಾಲಿಯಾಗಿದ್ದಾಗ ಅಥವಾ ಕುಲಸಚಿವರು ಅನಾರೋಗ್ಯದ, ಗೈರುಹಾಜರಿಯ ಅಥವಾ ಇತರ ಯಾವುದೇ ಕಾರಣದಿಂದ ತನ್ನ ಹುದ್ದೆಯ ಕರ್ತವ್ಯಗಳನ್ನು ನಿರ್ವಹಿಸಲು ಅಸಮರ್ಥರಾದಾಗ, ಕುಲಸಚಿವರ ಹುದ್ದೆಯ ಕರ್ತವ್ಯಗಳನ್ನು ಈ ಉದ್ದೇಶಕ್ಕಾಗಿ ಕುಲಪತಿಯವರು ನೇಮಕ ಮಾಡಬಹುದಾದ ವ್ಯಕ್ತಿಯು ನಿರ್ವಹಿಸತಕ್ಕದ್ದು.

(4) ಕುಲಸಚಿವರಿಗೆ ಒಬ್ಬರು ಅಥವಾ ಹೆಚ್ಚು ಮಂದಿ ಉಪ ಕುಲಸಚಿವರು ಮತ್ತು ಸಹಾಯಕ ಕುಲಸಚಿವರುಗಳು ಅವರಿಗೆ ಸಹಾಯಕರಾಗಿರಬಹುದು.

18. ಕುಲಸಚಿವರ ಅಧಿಕಾರಗಳು ಮತ್ತು ಪ್ರಕಾರ್ಯಗಳು.– (1) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು, ಕುಲಸಚಿವರು ಪ್ರಶಾಸನ ಸಭೆ, ಪ್ರಶಿಕ್ಷಣ ಪರಿಷತ್ತು, ಹಣಕಾಸು ಸಮಿತಿ ಮತ್ತು ಅಧ್ಯಯನ ಮಂಡಳಿಯ ಪದನಿಮಿತ್ತ ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು.

(2) ಈ ಮುಂದಿನವುಗಳು ಕುಲಸಚಿವರ ಕರ್ತವ್ಯಗಳಾಗಿರತಕ್ಕದ್ದು:–

(ಎ) ಕುಲಪತಿಯವರು ಅಥವಾ ಪ್ರಶಾಸನ ಸಭೆಯು ತಮ್ಮ ಪ್ರಭಾರಕ್ಕೆ ಒಪ್ಪಿಸಿದ ವಿಶ್ವವಿದ್ಯಾಲಯದ ದಾಖಲೆಗಳ, ಸಾಮಾನ್ಯ ಮೊಹರಿನ ಮತ್ತು ಇತರ ಸ್ವತ್ತಿನ ಅಭಿರಕ್ಷಕರಾಗಿರತಕ್ಕದ್ದು;

(ಬಿ) ಪ್ರಶಾಸನ ಸಭೆಯ, ಪ್ರಶಿಕ್ಷಣ ಪರಿಷತ್ತಿನ, ಅಧ್ಯಯನ ಮಂಡಳಿಗಳ, ಪರೀಕ್ಷಾ ಮಂಡಳಿಗಳ ಮತ್ತು ವಿಶ್ವವಿದ್ಯಾಲಯದ ಪ್ರಾಧಿಕಾರಗಳು ನೇಮಕಮಾಡಿದ ಯಾವುದೇ ಸಮಿತಿಯ ಸಭೆಗಳನ್ನು ನಡೆಸುವುದಕ್ಕೆ ನೋಟೀಸುಗಳನ್ನು ನೀಡತಕ್ಕದ್ದು;

(ಸಿ) ಪ್ರಶಾಸನ ಸಭೆಯ, ಪ್ರಶಿಕ್ಷಣ ಪರಿಷತ್ತಿನ, ಅಧ್ಯಯನ ಮಂಡಳಿಗಳ, ಪರೀಕ್ಷಕರ ಮಂಡಳಿಗಳ ಮತ್ತು ವಿಶ್ವವಿದ್ಯಾಲಯದ ಪ್ರಾಧಿಕಾರಗಳು ನೇಮಕ ಮಾಡಿದ ಸಮಿತಿಗಳ ಸಭೆಗಳ ಎಲ್ಲಾ ವ್ಯವಹರಣೆಗಳ ಸಭಾ ನಡವಳಿಗಳನ್ನು ಇಟ್ಟುಕೊಂಡು ಬರತಕ್ಕದ್ದು;

(ಡಿ) ಪ್ರಶಾಸನ ಸಭೆಯ ಮತ್ತು ಪ್ರಶಿಕ್ಷಣ ಪರಿಷತ್ತಿನ ಅಧಿಕೃತ ಪತ್ರ ವ್ಯವಹಾರಗಳನ್ನು ನಡೆಸತಕ್ಕದ್ದು;

(ಇ) ವಿಶ್ವವಿದ್ಯಾಲಯದ ಪ್ರಾಧಿಕಾರಗಳ ಸಭೆಗಳ ಕಾರ್ಯಸೂಚಿಯ ಪ್ರತಿಗಳನ್ನು, ಅವುಗಳನ್ನು ಹೊರಡಿಸಿದ ಕೂಡಲೇ ಮತ್ತು ಅಂಥ ಸಭೆಗಳ ಸಭಾ ನಡವಳಿಗಳ ಪ್ರತಿಗಳನ್ನು, ಕುಲಾಧಿಪತಿಯವರಿಗೆ ಕಳುಹಿಸಿಕೊಡತಕ್ಕದ್ದು; ಮತ್ತು

(ಎಫ್) ಶಾಸನಗಳಲ್ಲಿ, ಪರ್ಯಾದೇಶಗಳಲ್ಲಿ ಅಥವಾ ವಿನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಅಥವಾ ಪ್ರಶಾಸನ ಸಭೆಯು ಅಥವಾ ಕುಲಪತಿಯವರು ಕಾಲಕಾಲಕ್ಕೆ ಅಗತ್ಯಪಡಿಸಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಇತರ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

(3) ವಿಶ್ವವಿದ್ಯಾಲಯವು ಹೂಡುವ ಅಥವಾ ಅದರ ವಿರುದ್ಧ ಹೂಡಲಾಗುವ ಎಲ್ಲಾ ದಾವೆಗಳಲ್ಲಿ ಮತ್ತು ಇತರ ಕಾನೂನು ವ್ಯವಹರಣೆಗಳಲ್ಲಿ ವಾದಪ್ರತಿವಾದ ಪತ್ರಗಳಿಗೆ ಕುಲಸಚಿವರು ಸಹಿ ಮಾಡತಕ್ಕದ್ದು ಮತ್ತು ಅವುಗಳನ್ನು ಸತ್ಯಾಪನೆ ಮಾಡತಕ್ಕದ್ದು ಮತ್ತು ಅಂಥ ದಾವೆಗಳು ಮತ್ತು ವ್ಯವಹರಣೆಗಳಲ್ಲಿನ ಆದೇಶಿಕೆಗಳನ್ನು ಕುಲಸಚಿವರ ಹೆಸರಿಗೆ ಹೊರಡಿಸತಕ್ಕದ್ದು ಮತ್ತು ಅವರಿಗೆ ಜಾರಿಗೊಳಿಸತಕ್ಕದ್ದು.

19. **ಕುಲಸಚಿವ (ಮೌಲ್ಯಮಾಪನ).**- (1) ಕುಲಸಚಿವ (ಮೌಲ್ಯಮಾಪನ) ಹುದ್ದೆಯ ಧಾರಕರು, ಕಾನೂನಿನ ಒಂದು ವಿಭಾಗದಲ್ಲಿ ಪ್ರವಾಚಕರ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ ಕಾನೂನು ಕ್ಷೇತ್ರದಲ್ಲಿಯ ವಿದ್ವಾಂಸರಾಗಿರತಕ್ಕದ್ದು.

(2) ಕುಲಸಚಿವ (ಮೌಲ್ಯಮಾಪನ), ನಿಯಮಿಸಬಹುದಾದಂಥ ಅವಧಿಗಾಗಿ ಮತ್ತು ಅಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಪ್ರಶಾಸನ ಸಭೆಯ ಅನುಮೋದನೆಯೊಂದಿಗೆ ಕುಲಪತಿಯು ನೇಮಕ ಮಾಡಿದ ವಿಶ್ವವಿದ್ಯಾಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು.

(3) ಕುಲಸಚಿವ (ಮೌಲ್ಯಮಾಪನ) ನಿಯಮಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

20. **ಹಣಕಾಸು ಅಧಿಕಾರಿ.**- (1) ಹಣಕಾಸು ಅಧಿಕಾರಿಯು, ಲೆಕ್ಕಪರಿಶೋಧನೆ, ಲೆಕ್ಕಪತ್ರ ಮತ್ತು ಹಣಕಾಸು ಆಡಳಿತದಲ್ಲಿ ಅನುಭವವಿರುವ, ರಾಜ್ಯ ಲೆಕ್ಕಪತ್ರಗಳ ಇಲಾಖೆಯ ಜಂಟಿ ನಿಯಂತ್ರಕರ ಕೇಡರ್‌ನಲ್ಲಿನ ಅಧಿಕಾರಿಗಳು ಅಥವಾ ಉಪ-ಮಹಾಲೇಖಪಾಲರ ದರ್ಜೆಯ ಅಧಿಕಾರಿಗಳು ಇರುವ ಮೂರು ವ್ಯಕ್ತಿಗಳನ್ನು ಮೀರದ ಹೆಸರುಗಳ ಪಟ್ಟಿಯಿಂದ ಪ್ರಶಾಸನ ಸಭೆಯ ಅನುಮೋದನೆಯೊಂದಿಗೆ ಕುಲಪತಿಯು ನೇಮಕ ಮಾಡುವ ವಿಶ್ವವಿದ್ಯಾನಿಲಯದ ಒಬ್ಬ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು. ಶಾಸನಗಳ ಮೂಲಕ ನಿಯಮಿಸಲಾದ ಸಮಯದೊಳಗೆ ಪಟ್ಟಿಯಲ್ಲಿನ ಯಾರ ಹೆಸರನ್ನೂ ಪ್ರಶಾಸನಸಭೆಯು ಅನುಮೋದಿಸದಿದ್ದರೆ, ಕುಲಾಧಿಪತಿಯು, ಕುಲಪತಿಯೊಂದಿಗೆ ಸಮಾಲೋಚಿಸಿ, ಹಣಕಾಸು ಅಧಿಕಾರಿ ಆಗಿರಲು ಸೂಕ್ತವೆಂದು ತಾವು ಭಾವಿಸುವಂಥ ಇತರ ವ್ಯಕ್ತಿಯನ್ನು ನೇಮಕ ಮಾಡಬಹುದು.

(2) ಹಣಕಾಸು ಅಧಿಕಾರಿಯ ಹುದ್ದೆಯ ಪದಾವಧಿ ಮತ್ತು ಅವನ ಉಪಲಬ್ಧಿಗಳು ಮತ್ತು ಇತರ ನಿಬಂಧನೆಗಳು ಮತ್ತು ಷರತ್ತುಗಳು ಕುಲಾಧಿಪತಿಯು ನಿರ್ಧರಿಸುವಂಥವುಗಳಾಗಿರತಕ್ಕವು.

(3) ಹಣಕಾಸು ಅಧಿಕಾರಿಯು, ಹಣಕಾಸು ಸಮಿತಿಯ ನಿಯಂತ್ರಣಕ್ಕೊಳಪಟ್ಟು, ಶಾಸನಗಳ, ಪರ್ಯಾದೇಶಗಳ ಮತ್ತು ವಿನಿಯಮಗಳ ಮೂಲಕ ನಿಯಮಿಸಬಹುದಾದಂಥ ಅಥವಾ ಕುಲಪತಿ ಅಥವಾ ಕುಲಸಚಿವರು ಕಾಲ ಕಾಲಕ್ಕೆ ಅಗತ್ಯಪಡಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು. ಆತನು ವಿದ್ಯಾವಿಷಯಕ ಪರಿಷತ್ತಿನ ಪದನಿಮಿತ್ತ ಸದಸ್ಯನಾಗಿರತಕ್ಕದ್ದು ಮತ್ತು ಹಣಕಾಸು ಸಮಿತಿಯ ಪದನಿಮಿತ್ತ ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು.

21. **ಕುಲಸಚಿವ, ಕುಲಸಚಿವ (ಮೌಲ್ಯಮಾಪನ), ಹಣಕಾಸು ಅಧಿಕಾರಿಯವರ ಹುದ್ದೆಗಳಲ್ಲಿ ತಾತ್ಕಾಲಿಕ ಖಾಲಿಸ್ಥಾನ.**- (1) ಕುಲಸಚಿವ, ಕುಲಸಚಿವ (ಮೌಲ್ಯಮಾಪನ) ಅಥವಾ ಹಣಕಾಸು ಅಧಿಕಾರಿ ಇವರ ಹುದ್ದೆಗಳಲ್ಲಿ ಮರಣ, ಅಮಾನತು ಅಥವಾ ಖಾಯಿಲೆ ಅಥವಾ ಇತರ ಕಾರಣಗಳಿಗಾಗಿ ತಾತ್ಕಾಲಿಕ ಗೈರುಹಾಜರಿಯ ಕಾರಣದಿಂದಾಗಿ ತಾತ್ಕಾಲಿಕ ಖಾಲಿಸ್ಥಾನ ಉಂಟಾದ ಸಂದರ್ಭದಲ್ಲಿ ಕುಲಾಧಿಪತಿಯವರು ವಿಶ್ವವಿದ್ಯಾಲಯದ

ಯಾವೊಬ್ಬ ಇತರ ಸೂಕ್ತ ಅಧಿಕಾರಿಗೆ ಸಂದರ್ಭನುಸಾರವಾಗಿ ಕುಲಸಚಿವ, ಕುಲಸಚಿವ (ಮೌಲ್ಯಮಾಪನ) ಅಥವಾ ಹಣಕಾಸು ಅಧಿಕಾರಿಯವರ ಕರ್ತವ್ಯಗಳನ್ನು ನೆರವೇರಿಸಲು ಅಧಿಕಾರ ನೀಡಬಹುದು.

(2) ಕುಲಸಚಿವ, ಕುಲಸಚಿವ (ಮೌಲ್ಯಮಾಪನ) ಅಥವಾ ಹಣಕಾಸು ಅಧಿಕಾರಿಯ ಹುದ್ದೆಯ ಖಾಲಿಸ್ಥಾನವನ್ನು ಭರ್ತಿ ಮಾಡಲು ಒಬ್ಬ ಸೂಕ್ತ ಅಧಿಕಾರಿಯನ್ನು ಕುಲಾಧಿಪತಿಗಳು ನೇಮಕಮಾಡುವವರೆಗೂ, ಕುಲಪತಿಯವರು, ತಮ್ಮ ವಿವೇಚನಾನುಸಾರವಾಗಿ ಯಾವೊಬ್ಬ ಅಧಿಕಾರಿಗೆ ಹಾಗೆ ನೇಮಕ ಮಾಡುವವರೆಗೆ ಆ ಖಾಲಿಸ್ಥಾನದ ಕರ್ತವ್ಯಗಳನ್ನು ನಿರ್ವಹಿಸಲು ಅಧಿಕಾರ ನೀಡಬಹುದು. ಕುಲಪತಿಗಳು ಈ ಪ್ರಕರಣದಡಿಯಲ್ಲಿ ತಾನು ತೆಗೆದುಕೊಂಡ ಕ್ರಮದ ಬಗ್ಗೆ ತಕ್ಷಣವೇ ಕುಲಾಧಿಪತಿಯವರಿಗೆ ವರದಿಮಾಡತಕ್ಕದ್ದು.

22. ಡೀನ್.– (1) ಪ್ರತಿಯೊಂದು ಫ್ಯಾಕಲ್ಟಿಯ ಒಬ್ಬ ಪ್ರಾಧ್ಯಾಪಕರು ಜ್ಯೇಷ್ಠತೆಗನುಸಾರವಾಗಿ, ಸುತ್ತು ಸರದಿಯಲ್ಲಿ, ಎರಡು ವರ್ಷಗಳ ಅವಧಿಗೆ, ಆ ಫ್ಯಾಕಲ್ಟಿಯ ಡೀನ್ ಆಗಿ ಕರ್ತವ್ಯ ನಿರ್ವಹಿಸತಕ್ಕದ್ದು:

ಪರಂತು, ಪ್ರಾಧ್ಯಾಪಕರು ಇಲ್ಲದಿದ್ದಲ್ಲಿ, ಅತ್ಯಂತ ಹಿರಿಯ ಪ್ರವಾಚಕರು ಡೀನ್ ಆಗಿ ಕರ್ತವ್ಯ ನಿರ್ವಹಿಸತಕ್ಕದ್ದು:

ಮತ್ತೂ ಪರಂತು, ಯಾವುದೇ ಫ್ಯಾಕಲ್ಟಿಯಲ್ಲಿ ಪ್ರಾಧ್ಯಾಪಕರು ಅಥವಾ ಪ್ರವಾಚಕರು ಇಲ್ಲದಿದ್ದಾಗ ಕುಲಪತಿಯವರು ತಮ್ಮ ವಿವೇಚನಾನುಸಾರವಾಗಿ ಯಾವೊಬ್ಬ ಇತರ ಸೂಕ್ತ ಅಧ್ಯಾಪಕರನ್ನು ಡೀನ್ ಆಗಿ ಕಾರ್ಯನಿರ್ವಹಿಸುವಂತೆ ಹೆಸರಿಸಬಹುದು:

ಅಷ್ಟೇ ಅಲ್ಲದೆ, ಒಂದು ಫ್ಯಾಕಲ್ಟಿಯಲ್ಲಿ, ಆ ಫ್ಯಾಕಲ್ಟಿಯ ಡೀನ್ ಆಗಿ ಕಾರ್ಯ ನಿರ್ವಹಿಸಲು ಯಾವ ವ್ಯಕ್ತಿಯೂ ಲಭ್ಯವಿಲ್ಲದಿದ್ದಲ್ಲಿ ಅಥವಾ ವಿಶ್ವವಿದ್ಯಾಲಯವು ಯಾವುದೇ ಫ್ಯಾಕಲ್ಟಿಗೆ ಅಂಥ ಒಂದು ಅಧ್ಯಯನ ವಿಭಾಗವನ್ನು ಹೊಂದಿರದಿದ್ದಲ್ಲಿ, ಆಗ ಆದರ ಯಾವುದೇ ಸಂಯೋಜಿತ ಕಾಲೇಜಿನಲ್ಲಿನ ಅಧ್ಯಯನ ವಿಭಾಗದಲ್ಲಿಯ ಅಂಥ ಅಧ್ಯಾಪಕರನ್ನು, ಜ್ಯೇಷ್ಠತೆಯ ಆಧಾರದ ಮೇಲೆ ಆ ಫ್ಯಾಕಲ್ಟಿಯ ಡೀನ್ ಆಗಿ ಕಾರ್ಯ ನಿರ್ವಹಿಸಲು ಕುಲಪತಿಯವರು ನಾಮನಿರ್ದೇಶಿಸಬಹುದು.

(2) ಪ್ರತಿಯೊಂದು ಫ್ಯಾಕಲ್ಟಿಯ ಡೀನ್ ರವರು ಆ ಫ್ಯಾಕಲ್ಟಿಯ ಕಾರ್ಯನಿರ್ವಾಹಕ ಅಧಿಕಾರಿಯಾಗಿರತಕ್ಕದ್ದು ಮತ್ತು ಫ್ಯಾಕಲ್ಟಿಯ ಸಭೆಗಳ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(3) ಡೀನ್‌ರವರು ಶಾಸನಗಳ ಅಥವಾ ಪರ್ಯಾದೇಶಗಳ ಮೂಲಕ ನಿಯಮಿಸಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಇತರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

23. ವಿದ್ಯಾರ್ಥಿ ಕಲ್ಯಾಣ ನಿರ್ದೇಶಕರು.– ವಿದ್ಯಾರ್ಥಿ ಕಲ್ಯಾಣ ನಿರ್ದೇಶಕರು ವಿಶ್ವವಿದ್ಯಾಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು ಮತ್ತು ಅವರನ್ನು ಪ್ರಶಾಸನ ಸಭೆಯ ಶಿಫಾರಸಿನ ಮೇರೆಗೆ ಕುಲಾಧಿಪತಿಯವರು ನೇಮಿಸತಕ್ಕದ್ದು. ಅವರು ಕುಲಾಧಿಪತಿಯವರು ತಮಗೆ ವಹಿಸಿಕೊಟ್ಟ ಅಥವಾ ವಿಧಿಸಿದ ಅಥವಾ ಶಾಸನಗಳ ಮೂಲಕ ನಿಯಮಿಸಲಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಅಥವಾ ಅಂಥ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು. ಅವರ ಪದಾವಧಿ, ಉಪಲಬ್ಧಿಗಳು ಮತ್ತು ಇತರ ಸೇವಾ ಷರತ್ತುಗಳು ಶಾಸನಗಳ ಮೂಲಕ ನಿಯಮಿಸಲಾದಂತೆ ಇರತಕ್ಕದ್ದು.

24. ಗ್ರಂಥಪಾಲಕರು.– ಗ್ರಂಥಪಾಲಕರು ವಿಶ್ವವಿದ್ಯಾಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು ಮತ್ತು ಅವರನ್ನು 68ನೇ ಪ್ರಕರಣದ (1)ನೇ ಉಪ ಪ್ರಕರಣದಡಿಯಲ್ಲಿ ರಚಿಸಲಾದ ನೇಮಕಾತಿ ಮಂಡಳಿಯ

ಶಿಫಾರಸಿನ ಮೇಲೆ ಪ್ರಶಾಸನ ಸಭೆಯು ನೇಮಿಸತಕ್ಕದ್ದು. ಅವರು ಶಾಸನಗಳ ಮೂಲಕ ನಿಯಮಿಸಲಾದಂಥ ಅರ್ಹತೆಗಳನ್ನು ಹೊಂದಿರತಕ್ಕದ್ದು ಮತ್ತು ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಹಾಗೂ ಅಂಥ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು. ಅವರ ಉಪಲಬ್ಧಿಗಳು ಮತ್ತು ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ಶಾಸನಗಳ ಮೂಲಕ ನಿಯಮಿಸಬಹುದಾದಂತೆ ಇರತಕ್ಕದ್ದು.

25. ಯೋಜನೆ, ನಿರ್ವಹಣೆ ಮತ್ತು ಮೌಲ್ಯಮಾಪನ ಮಂಡಳಿಯ ನಿರ್ದೇಶಕರು.– ಯೋಜನೆ, ನಿರ್ವಹಣೆ ಮತ್ತು ಮೌಲ್ಯಮಾಪನ ಮಂಡಳಿಯ ನಿರ್ದೇಶಕರು ವಿಶ್ವವಿದ್ಯಾಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು ಮತ್ತು ಅವರನ್ನು ಪ್ರಶಾಸನ ಸಭೆಯು ನೇಮಿಸತಕ್ಕದ್ದು. ಅವರು ಶಾಸನಗಳ ಮೂಲಕ ನಿಯಮಿಸಬಹುದಾದಂಥ ಅರ್ಹತೆಗಳನ್ನು ಹೊಂದಿರತಕ್ಕದ್ದು ಮತ್ತು ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಹಾಗೂ ಅಂಥ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು. ಅವರ ಉಪಲಬ್ಧಿಗಳು ಮತ್ತು ನಿಬಂಧನೆಗಳು ಮತ್ತು ಷರತ್ತುಗಳು ಶಾಸನಗಳ ಮೂಲಕ ನಿಯಮಿಸಬಹುದಾದಂತೆ ಇರತಕ್ಕದ್ದು.

26. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್ತು.– ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್ತು ಇವರು ವಿಶ್ವವಿದ್ಯಾಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು ಮತ್ತು ಅವರನ್ನು ಪ್ರಶಾಸನ ಸಭೆಯು ನೇಮಿಸತಕ್ಕದ್ದು. ಅವರು ಶಾಸನಗಳ ಮೂಲಕ ನಿಯಮಿಸಬಹುದಾದಂಥ ಅರ್ಹತೆಗಳನ್ನು ಹೊಂದಿರತಕ್ಕದ್ದು ಮತ್ತು ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಹಾಗೂ ಅಂಥ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು. ಅವರ ಉಪಲಬ್ಧಿಗಳು ಮತ್ತು ಸೇವಾ ನಿಬಂಧನೆಗಳು ಹಾಗೂ ಷರತ್ತುಗಳು ಶಾಸನಗಳ ಮೂಲಕ ನಿಯಮಿಸಬಹುದಾದಂತೆ ಇರತಕ್ಕದ್ದು.

27. ದೈಹಿಕ ಶಿಕ್ಷಣದ ನಿರ್ದೇಶಕರು.– ದೈಹಿಕ ಶಿಕ್ಷಣದ ನಿರ್ದೇಶಕರು ವಿಶ್ವವಿದ್ಯಾಲಯಕ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು ಮತ್ತು 68ನೇ ಪ್ರಕರಣದಡಿಯಲ್ಲಿ ರಚಿಸಲಾದ ನೇಮಕಾತಿ ಮಂಡಳಿಯ ಶಿಫಾರಸ್ಸಿನ ಮೇಲೆ ಪ್ರಶಾಸನ ಸಭೆಯು ಅವರನ್ನು ನೇಮಿಸತಕ್ಕದ್ದು. ಅವರು ಶಾಸನಗಳ ಮೂಲಕ ನಿಯಮಿಸಬಹುದಾದಂಥ ಅರ್ಹತೆಗಳನ್ನು ಹೊಂದಿರತಕ್ಕದ್ದು ಮತ್ತು ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಹಾಗೂ ಅಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು. ಅವರ ಉಪಲಬ್ಧಿಗಳು ಮತ್ತು ಸೇವಾ ನಿಬಂಧನೆಗಳು ಹಾಗೂ ಷರತ್ತುಗಳು ಶಾಸನಗಳ ಮೂಲಕ ನಿಯಮಿಸಬಹುದಾದಂತೆ ಇರತಕ್ಕದ್ದು.

ಅಧ್ಯಾಯ – IV

ವಿಶ್ವವಿದ್ಯಾಲಯ ಪ್ರಾಧಿಕಾರಗಳು

28. ವಿಶ್ವವಿದ್ಯಾಲಯದ ಪ್ರಾಧಿಕಾರಗಳು.– ಮುಂದಿನವುಗಳು ವಿಶ್ವವಿದ್ಯಾಲಯದ ಪ್ರಾಧಿಕಾರಗಳಾಗಿರತಕ್ಕದ್ದು, ಎಂದರೆ:–

(ಎ) ಪ್ರಶಾಸನಸಭೆ,

(ಬಿ) ಪ್ರಶಿಕ್ಷಣ ಪರಿಷತ್ತು,

(ಸಿ) ಅಧ್ಯಯನ ಮಂಡಳಿಗಳು,

(ಡಿ) ಫ್ಯಾಕಲ್ಟಿಗಳು.

(ಇ) ಹಣಕಾಸು ಸಮಿತಿ,

(ಎಫ್) ಯೋಜನೆ, ಮೇಲ್ವಿಚಾರಣೆ ಹಾಗೂ ಮೌಲ್ಯಮಾಪನ ಮಂಡಳಿ ಮತ್ತು

(ಜಿ) ಶಾಸನಗಳ ಮೂಲಕ ವಿಶ್ವವಿದ್ಯಾಲಯದ ಪ್ರಾಧಿಕಾರಗಳೆಂದು ಘೋಷಿಸಬಹುದಾದಂಥ ಇತರ ಪ್ರಾಧಿಕಾರಗಳು.

ಪ್ರಶಾಸನ ಸಭೆ

29. **ಪ್ರಶಾಸನ ಸಭೆ.**– (1) ಕುಲಾಧಿಪತಿಯವರು, 14ನೇ ಪ್ರಕರಣದಡಿ ಮೊದಲನೇ ಕುಲಪತಿಯವರು ನೇಮಕಗೊಂಡ ಮೇಲೆ ಆದಷ್ಟು ಬೇಗನೆ ಪ್ರಶಾಸನ ಸಭೆಯನ್ನು ರಚಿಸತಕ್ಕದ್ದು.

(2) ಕುಲಪತಿಯವರು ಪ್ರಶಾಸನ ಸಭೆಯ ಪದನಿಮಿತ್ತ ಅಧ್ಯಕ್ಷರಾಗಿರತಕ್ಕದ್ದು.

(3) ಪ್ರಶಾಸನ ಸಭೆಯು ಈ ಮುಂದಿನ ಇತರ ಸದಸ್ಯರನ್ನು ಒಳಗೊಂಡಿರತಕ್ಕದ್ದು; ಎಂದರೆ:–

(ಎ) ಸರ್ಕಾರದ ಕಾರ್ಯದರ್ಶಿಗಳು,
ಕಾನೂನು, ನ್ಯಾಯ ಮತ್ತು ಮಾನವಹಕ್ಕುಗಳ ಇಲಾಖೆ
ಅಥವಾ ಸರ್ಕಾರದ ಅವರ ಕಾರ್ಯದರ್ಶಿಗಿಂತ
ಕಡಿಮೆಯಿಲ್ಲದ ದರ್ಜೆಯ ಅವರ ನಾಮನಿರ್ದೇಶಿತ — ಪದನಿಮಿತ್ತ ಸದಸ್ಯರು

(ಬಿ) ಸರ್ಕಾರದ ಕಾರ್ಯದರ್ಶಿಗಳು,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ
ಅಥವಾ ಸರ್ಕಾರದ ಜಂಟಿ ಕಾರ್ಯದರ್ಶಿಗಿಂತ
ಕಡಿಮೆಯಿಲ್ಲದ ದರ್ಜೆಯ ಅವರ ನಾಮನಿರ್ದೇಶಿತ — ಪದನಿಮಿತ್ತ ಸದಸ್ಯರು

(ಸಿ) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಉನ್ನತ ಶಿಕ್ಷಣ — ಪದನಿಮಿತ್ತ ಸದಸ್ಯರು

(ಡಿ) ಕಾಲೇಜು ಶಿಕ್ಷಣ ಆಯುಕ್ತರು ಅಥವಾ ಹೆಚ್ಚುವರಿ ಆಯುಕ್ತ ಅಥವಾ ರಾಜ್ಯಸರ್ಕಾರದಿಂದ ನಾಮ ನಿರ್ದೇಶಿತರಾದ ಕಾಲೇಜು ಶಿಕ್ಷಣ ಜಂಟಿ ನಿರ್ದೇಶಕರ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಅವರ ನಾಮನಿರ್ದೇಶಿತ;

(ಇ) ಜ್ಯೇಷ್ಠತೆಯ ಆಧಾರದ ಮೇಲೆ ಸುತ್ತು ಸರದಿಯ ಮೇಲೆ ಒಂದು ವರ್ಷದ ಅವಧಿಗಾಗಿ ಕುಲಪತಿಯವರು ನಾಮನಿರ್ದೇಶಿಸುವ ಒಬ್ಬ ಡೀನ್;

(ಎಫ್) ಜ್ಯೇಷ್ಠತೆಗನುಸಾರವಾಗಿ ಸುತ್ತು ಸರದಿಯ ಮೇಲೆ ಕುಲಪತಿಯವರು ನಾಮನಿರ್ದೇಶಿಸುವ, ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಉತ್ಕೃಷ್ಟತಾ ವಿದ್ಯಾಲಯದ (School of excellence) ಅಥವಾ ಪ್ರೌಢ ವ್ಯಾಸಂಗ (Advanced) ಅಧ್ಯಯನ ಕೇಂದ್ರಗಳ ಮುಖ್ಯಸ್ಥರ ಪೈಕಿ ಇಬ್ಬರು ಪ್ರಾಧ್ಯಾಪಕರು;

(ಜಿ) ಸರ್ಕಾರವು ನಾಮನಿರ್ದೇಶಿಸಿದ ಐದು ಸದಸ್ಯರು, ಅವರಲ್ಲಿ, ಒಬ್ಬರು ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಬುಡಕಟ್ಟಿಗೆ ಸೇರಿದ ವ್ಯಕ್ತಿಯಾಗಿರತಕ್ಕದ್ದು, ಒಬ್ಬರು ಇತರೆ ಹಿಂದುಳಿದ

ವರ್ಗಗಳಿಗೆ ಸೇರಿದ ವ್ಯಕ್ತಿಯಾಗಿರತಕ್ಕದ್ದು, ಮತ್ತು ಇತರೆ ಮೂರು ಜನರು ಕಾನೂನು ವೃತ್ತಿಯಲ್ಲಿರುವ ಅಥವಾ ಕಾನೂನು ಬೋಧನಾ ವಿಭಾಗಕ್ಕೆ ಸೇರಿದ ಸದಸ್ಯರಾಗಿದ್ದು ಅವರಲ್ಲಿ ಒಬ್ಬರು ಮಹಿಳೆಯಾಗಿರತಕ್ಕದ್ದು;

(ಎಚ್) ಕುಲಪತಿಯವರು ನಾಮನಿರ್ದೇಶಿಸುವ ಸಂಯೋಜಿತ ಅಥವಾ ಘಟಕ ಕಾಲೇಜುಗಳ ಇಬ್ಬರು ಪ್ರಾಂಶುಪಾಲರ;

(ಐ) ಕುಲಪತಿಯವರು ನಾಮನಿರ್ದೇಶಿಸುವ, ಖ್ಯಾತ ಶಿಕ್ಷಣ ತಜ್ಞರುಗಳು ಅಥವಾ ಕಾನೂನು ಶಿಕ್ಷಣ ಕ್ಷೇತ್ರದಲ್ಲಿನ ವ್ಯೆಕ್ತಿಗಳ ಪೈಕಿ, ಇಬ್ಬರು ಸದಸ್ಯರು.

(4) ಒಬ್ಬ ವ್ಯಕ್ತಿಯ ಪ್ರಶಾಸನ ಸಭೆಯ ಸದಸ್ಯತ್ವ ಕೊನೆಗೊಂಡಲ್ಲಿ, ಅವರು, ಪ್ರಶಾಸನ ಸಭೆಯ ತನ್ನ ಸದಸ್ಯತ್ವದ ಕಾರಣದಿಂದಾಗಿ ಸದಸ್ಯರಾಗಿರಬಹುದಾದ ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಸದಸ್ಯರಾಗಿರುವುದೂ ಕೊನೆಗೊಳ್ಳತಕ್ಕದ್ದು.

30. **ಪ್ರಶಾಸನ ಸಭೆಯ ಅಧಿಕಾರಗಳು.**- ಪ್ರಶಾಸನ ಸಭೆಯು ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:-

(i) ಶಾಸನಗಳು ಮತ್ತು ಪರ್ಯಾದೇಶಗಳನ್ನು ರಚಿಸುವುದು ಮತ್ತು ಅವುಗಳಿಗೆ ತಿದ್ದುಪಡಿ ಮಾಡುವುದು ಅಥವಾ ಅವುಗಳನ್ನು ನಿರಸನಗೊಳಿಸುವುದು;

(ii) ವಿಶ್ವವಿದ್ಯಾಲಯದ ಸ್ವತ್ತುಗಳು ಮತ್ತು ನಿಧಿಗಳನ್ನು ಹೊಂದಿರುವುದು, ನಿಯಂತ್ರಿಸುವುದು ಮತ್ತು ಆಡಳಿತ ನಡೆಸುವುದು;

(iii) ತಾನು ಸೂಕ್ತವೆಂದು ಭಾವಿಸಬಹುದಾದಂಥ ಕಾನೂನಿನ ಜ್ಞಾನದ ಶಾಖೆಗಳಲ್ಲಿ ಅಥವಾ ಕ್ಷೇತ್ರಗಳಲ್ಲಿ ಬೋಧನೆ ಮತ್ತು ತರಬೇತಿಗಳಿಗಾಗಿ ಉಪಬಂಧ ಕಲ್ಪಿಸುವುದು;

(iv) ತಾನು ಸೂಕ್ತವೆಂದು ಭಾವಿಸಬಹುದಾದಂಥ, ಕಾನೂನಿನ ವಿವಿಧ ಕ್ಷೇತ್ರದ ಕಲಿಕೆ ವಿಭಾಗಗಳಲ್ಲಿ ಅಧ್ಯಯನ ವಿಭಾಗಗಳನ್ನು ರಾಜ್ಯ ಸರ್ಕಾರದ ಪೂರ್ವಾನುಮತಿಯೊಡನೆ ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸುವುದು;

(v) ಕಾನೂನಿನ ವಿವಿಧ ಕ್ಷೇತ್ರಗಳಲ್ಲಿ ಸಂಶೋಧನೆ, ಜ್ಞಾನಾಭಿವೃದ್ಧಿ ಮತ್ತು ಜ್ಞಾನ ಪ್ರಸಾರಕ್ಕಾಗಿ ಅವಕಾಶ ಕಲ್ಪಿಸುವುದು;

(vi) ವಿಶ್ವವಿದ್ಯಾಲಯಕ್ಕೆ ಅಗತ್ಯವಾದ ಉಪನ್ಯಾಸಕರು, ಪ್ರವಾಚಕರು, ಪ್ರಾಧ್ಯಾಪಕರುಗಳು ಮತ್ತು ಇತರೆ ಬೋಧಕರ ಮತ್ತು ಬೋಧಕೇತರ ಹುದ್ದೆಗಳನ್ನು ರಾಜ್ಯ ಸರ್ಕಾರದ ಪೂರ್ವಾನುಮತಿಯೊಡನೆ ಸೃಜಿಸುವುದು;

(vii) ವಿಶ್ವವಿದ್ಯಾಲಯಕ್ಕೆ ಕಾಲೇಜುಗಳು ಸಂಯೋಜನೆಗೊಳ್ಳಲು ಷರತ್ತುಗಳನ್ನು ಈ ಉದ್ದೇಶಕ್ಕಾಗಿಯೇ ನೇಮಕ ಮಾಡಲಾದ ತಜ್ಞ ಸಮಿತಿಗಳೊಂದಿಗೆ ಸಮಾಲೋಚಿಸಿ ನಿಯಮಿಸುವುದು;

(viii) ಪದವಿಗಳು, ಡಿಪ್ಲೋಮಾಗಳು ಮತ್ತಿತರ ವಿದ್ಯಾ ಪ್ರಶಸ್ತಿಗಳನ್ನು ಪ್ರಾರಂಭಿಸುವುದು;

(ix) ಈ ಮುಂದಿನ ವ್ಯಕ್ತಿಗಳಿಗೆ ಪದವಿಗಳು, ಡಿಪ್ಲೋಮಾಗಳು ಮತ್ತು ಇತರೆ ಶೈಕ್ಷಣಿಕ ಪ್ರಶಸ್ತಿಗಳನ್ನು ನೀಡುವುದು, ಅವರುಗಳೆಂದರೆ:-

(ಎ) ವಿವಿಧ ಅಧೀನ ನ್ಯಾಯಾಲಯಗಳು ಮತ್ತು ನ್ಯಾಯ ಮಂಡಳಿಗಳಲ್ಲಿ ಆರು ತಿಂಗಳುಗಳ ಅವಧಿಯ ಪ್ರಾಯೋಗಿಕ ತರಬೇತಿಯನ್ನು ಒಳಗೊಂಡ ಒಂದು ನಿಯುಕ್ತಿಶಿಕ್ಷಣ (ಇಂಟರ್ನ್‌ಶಿಪ್) ವ್ಯಾಸಂಗ ಕ್ರಮವನ್ನು ಪೂರ್ಣಗೊಳಿಸಿದ ವ್ಯಕ್ತಿ;

(ಬಿ) ಶಾಸನಗಳ ಮೂಲಕ ನಿಯಮಿಸಬಹುದಾದ ರೀತಿಯಲ್ಲಿ, ಆ ಬಗ್ಗೆ ವಿನಾಯಿತಿ ನೀಡಿದ್ದ ಹೊರತು ಕಾಲೇಜಿನಲ್ಲಿ ಅಥವಾ ಅನುಮೋದಿತ ಸಂಸ್ಥೆಯಲ್ಲಿ ಅನುಮೋದಿತ ವ್ಯಾಸಂಗ ಕ್ರಮವನ್ನು ಓದಿರತಕ್ಕ ಅಥವಾ ತರಬೇತಿ ಪಡೆದಿರತಕ್ಕ ಮತ್ತು ವಿಶ್ವವಿದ್ಯಾಲಯವು ನಿಯಮಿಸಿರುವ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರುವ ವ್ಯಕ್ತಿ; ಅಥವಾ

(ಸಿ) ಶಾಸನಗಳ ಮೂಲಕ ನಿಯಮಿಸಲಾದ ಷರತ್ತುಗಳ ಅಡಿಯಲ್ಲಿ ಸಂಶೋಧನೆಯನ್ನು ಪೂರೈಸಿರುವ ವ್ಯಕ್ತಿ.

(x) ಪ್ರಶಾಸನ ಸಭೆಯ ಸದಸ್ಯರುಗಳ ಪೈಕಿ ಮೂರನೇ ಎರಡರಷ್ಟು ಸದಸ್ಯರಿಗಿಂತ ಕಡಿಮೆ ಇಲ್ಲದ ಸಂಖ್ಯೆಯ ಸದಸ್ಯರ ಶಿಫಾರಸ್ಸಿನ ಮೇಲೆ ಗೌರವ ಪದವಿಗಳನ್ನು ಅಥವಾ ಇತರೆ ಗೌರವ ಪ್ರಶಸ್ತಿಗಳನ್ನು ನೀಡುವುದು;

(xi) ವಾರ್ಷಿಕ ವರದಿ, ವಾರ್ಷಿಕ ಲೆಕ್ಕಪತ್ರಗಳು ಮತ್ತು ಹಣಕಾಸು ಅಂದಾಜುಗಳನ್ನು ಪರಿಗಣಿಸುವುದು ಮತ್ತು ಅವುಗಳ ಮೇಲೆ ತಾನು ಸೂಕ್ತವೆಂದು ಭಾವಿಸಬಹುದಾದಂಥ ಕ್ರಮಕೈಗೊಳ್ಳುವುದು;

(xii) ವಿಶ್ವವಿದ್ಯಾಲಯದ ವಿಭಾಗಗಳ ಮತ್ತು ವಿಶ್ವವಿದ್ಯಾಲಯ ಕಾಲೇಜುಗಳ ಮತ್ತು ಸಂಯೋಜಿತ ಕಾಲೇಜುಗಳ ಅಧ್ಯಾಪಕರ ವಿದ್ಯಾರ್ಹತೆಗಳನ್ನು ಶಾಸನಗಳಲ್ಲಿ ನಿಗದಿಪಡಿಸುವುದು;

(xiii) ಆಯ್ಕೆಯ ಉದ್ದೇಶಕ್ಕಾಗಿಯೇ ನೇಮಕಗೊಂಡ ತಜ್ಞರ ಆಯ್ಕೆ ಸಮಿತಿಯ ಶಿಫಾರಸ್ಸಿನ ಮೇಲೆ ವಿಶ್ವವಿದ್ಯಾಲಯ ಉಪನ್ಯಾಸಕರು, ಪ್ರವಾಚಕರು, ಪ್ರಾಧ್ಯಾಪಕರು ಮತ್ತು ಅಧ್ಯಾಪಕರುಗಳನ್ನು ನೇಮಕ ಮಾಡುವುದು, ಅವರ ಉಪಲಬ್ಧಿಗಳನ್ನು ನಿಗದಿಪಡಿಸುವುದು, ಅವರ ಕರ್ತವ್ಯಗಳು ಮತ್ತು ಸೇವಾ ಷರತ್ತುಗಳನ್ನು ಪರಿಭಾಷಿಸುವುದು ಮತ್ತು ತಾತ್ಕಾಲಿಕ ಖಾಲಿ ಸ್ಥಾನಗಳನ್ನು ಭರ್ತಿ ಮಾಡಿಕೊಳ್ಳುವುದಕ್ಕಾಗಿ ಉಪಬಂಧ ಕಲ್ಪಿಸುವುದು;

(xiv) ಆಡಳಿತಾತ್ಮಕ ಮತ್ತು ಇತರೆ ಹುದ್ದೆಗಳಿಗೆ ವ್ಯಕ್ತಿಗಳನ್ನು ನೇಮಕ ಮಾಡುವ ಕ್ರಮವನ್ನು ನಿರ್ದಿಷ್ಟಪಡಿಸಲು ಶಾಸನಗಳನ್ನು ಮಾಡುವುದು, ತಾತ್ಕಾಲಿಕ ಖಾಲಿ ಸ್ಥಾನಗಳನ್ನು ಭರ್ತಿ ಮಾಡಲು ಮತ್ತು ಅವರ ಕರ್ತವ್ಯಗಳು ಹಾಗೂ ಅವರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳನ್ನು ಪರಿಭಾಷಿಸಲು ಉಪಬಂಧ ಕಲ್ಪಿಸುವುದು;

(xv) ಶಾಸನಗಳ ಮೂಲಕ ನಿಯಮಿಸಬಹುದಾದ ರೀತಿಯಲ್ಲಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು, ಪ್ರವಾಚಕರು, ಉಪನ್ಯಾಸಕರು, ಅಧ್ಯಾಪಕರು ಮತ್ತು ವಿಶ್ವವಿದ್ಯಾಲಯದ ಇತರ ನೌಕರರ ವಿರುದ್ಧ ಶಿಸ್ತಿನ ವ್ಯವಹರಣೆಗಳನ್ನು ಕೈಗೊಳ್ಳುವುದು ಮತ್ತು ಶಾಸನಗಳಲ್ಲಿ ನಿರ್ದಿಷ್ಟಪಡಿಸಿರಬಹುದಾದಂಥ ದಂಡನೆಗಳನ್ನು ವಿಧಿಸುವುದು ಮತ್ತು ಅವರುಗಳನ್ನು ವಿಚಾರಣೆಯು ನಡೆಯುತ್ತಿರುವಾಗ ಅಮಾನತ್ತಿನಲ್ಲಿಡುವುದು;

(xvi) ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡ ಅಥವಾ ಸಂಯೋಜನೆಗೊಳ್ಳಬೇಕಾಗಿರುವ ಎಲ್ಲಾ ಕಾಲೇಜುಗಳು ಮತ್ತು ಇತರೆ ಸಂಸ್ಥೆಗಳ ತಪಾಸಣೆ ನಡೆಸುವಂತೆ ಮಾಡುವುದು ಮತ್ತು ಅವಶ್ಯಕವೆಂದು ಭಾವಿಸಬಹುದಾದಂಥ ಕ್ರಮ ಕೈಗೊಳ್ಳುವುದು;

(xvii) ಒಂದು ಕಾಲೇಜು ಅಥವಾ ಸಂಸ್ಥೆಯನ್ನು ಯಾವ ರೀತಿಯಲ್ಲಿ ಮತ್ತು ಯಾವ ಷರತ್ತುಗಳ ಮೇಲೆ ಸ್ವಾಯತ್ತ ಕಾಲೇಜು ಅಥವಾ ಸಂಸ್ಥೆ ಎಂಬುದಾಗಿ ಹೆಸರಿಸಬಹುದು ಮತ್ತು ಹಾಗೆ ಹೆಸರಿಸಿದ್ದನ್ನು ರದ್ದುಪಡಿಸಬಹುದು ಎಂಬುದನ್ನು ನಿಯಮಿಸುವುದು;

(xviii) ಸರ್ಕಾರದ ಒಪ್ಪಿಗೆ ಪಡೆದು ಯಾವುದೇ ಕಾಲೇಜನ್ನು ಸ್ವಾಯತ್ತ ಕಾಲೇಜು ಎಂಬುದಾಗಿ ಹೆಸರಿಸುವುದು ಮತ್ತು ಹಾಗೆ ಹೆಸರಿಸಿರುವುದನ್ನು ರದ್ದುಪಡಿಸುವುದು;

(xix) ಪರಿಶೀಲನಾ ಆಯೋಗದ ವರದಿಯ ಮೇಲೆ ವಿಶ್ವವಿದ್ಯಾಲಯ ಪ್ರದೇಶದ ಹೊರಗೆ ಇರುವ ಯಾವುದೇ ಕಾಲೇಜು ಅಥವಾ ಸಂಸ್ಥೆಗೆ ಮಾನ್ಯತೆ ನೀಡುವುದು;

(xx) ಕೇಂದ್ರ ಅಥವಾ ಯಾವುದೇ ರಾಜ್ಯ ಸರ್ಕಾರದಿಂದ ಅಥವಾ ಕೇಂದ್ರ ಅಥವಾ ಯಾವುದೇ ರಾಜ್ಯ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ವಿಗಮದಿಂದ ಅಥವಾ ಸಾರ್ವಜನಿಕರಿಂದ ವಿಶ್ವವಿದ್ಯಾಲಯದ ಪರವಾಗಿ ಸಾಲವನ್ನು ಪಡೆಯುವುದು;

(xxi) ವಿಶ್ವವಿದ್ಯಾಲಯದ ಸ್ಥಿತಿನ ಭದ್ರತೆಯ ಆಧಾರದ ಮೇಲೆ, ಸರ್ಕಾರದ ಅನುಮೋದನೆಯೊಂದಿಗೆ ವಿಶ್ವವಿದ್ಯಾಲಯದ ಉದ್ದೇಶಗಳಿಗಾಗಿ ಹಣವನ್ನು ಸಾಲಪಡೆಯುವುದು;

(xxii) ಅಧ್ಯಯನ ಮಂಡಲಿಯ ಶಿಫಾರಸ್ಸಿನ ಮೇಲೆ ಪರೀಕ್ಷಕರನ್ನು ನೇಮಕ ಮಾಡುವುದು ಮತ್ತು ಅವರ ಸಂಭಾವನೆಯನ್ನು ನಿಗದಿಪಡಿಸುವುದು;

(xxiii) ಶಾಸನಗಳ ಮೂಲಕ ನಿಯಮಿಸಬಹುದಾದಂಥ ಫೀಜನ್ನು ವಿಧಿಸುವುದು ಮತ್ತು ಸಂಗ್ರಹಿಸುವುದು

(xxiv) ವಿಶ್ವವಿದ್ಯಾಲಯ ಪರೀಕ್ಷೆಗಳನ್ನು ನಡೆಸುವುದು ಮತ್ತು ಅವುಗಳ ಫಲಿತಾಂಶಗಳನ್ನು ಅನುಮೋದಿಸುವುದು ಮತ್ತು ಪ್ರಕಟಿಸುವುದು;

(xxv) ಅಧ್ಯಯನ ಮಂಡಲಿಗೆ ಸದಸ್ಯರನ್ನು ನೇಮಕ ಮಾಡುವುದು;

(xxvi) ವಿಶ್ವವಿದ್ಯಾಲಯಕ್ಕೆ ವಿದ್ಯಾರ್ಥಿಗಳ ಪ್ರವೇಶಕ್ಕೆ ಸಂಬಂಧಪಟ್ಟಂತೆ ಅಥವಾ ವಿಶ್ವವಿದ್ಯಾಲಯ ಪರೀಕ್ಷೆಗಳಿಗೆ ಸಮಾನವಾದ ಪರೀಕ್ಷೆಗಳೆಂದು ಮಾನ್ಯತೆ ನೀಡಲು ಪರೀಕ್ಷೆಗಳನ್ನು ಗೊತ್ತುಪಡಿಸಲು ಪರ್ಯಾದೇಶಗಳನ್ನು ರಚಿಸುವುದು;

(xxvii) ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು,

(xxviii) ವಿಶ್ವವಿದ್ಯಾಲಯವು ನಿರ್ವಹಿಸದಿರುವ ವಿದ್ಯಾರ್ಥಿನಿಲಯಗಳಿಗೆ ಮಾನ್ಯತೆ ನೀಡುವುದು; ಮತ್ತು ಯಾವ ಷರತ್ತುಗಳಿಗೊಳಪಟ್ಟು ಮಾನ್ಯತೆ ನೀಡಲಾಗಿದೆಯೋ ಅದಕ್ಕನುಸಾರವಾಗಿ ನಡೆದುಕೊಳ್ಳದ ವಿದ್ಯಾರ್ಥಿನಿಲಯದ ಮಾನ್ಯತೆಯನ್ನು ಅಮಾನತುಗೊಳಿಸುವುದು ಅಥವಾ ಹಿಂದಕ್ಕೆ ಪಡೆಯುವುದು;

(xxix) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ವಸತಿಗೃಹದ ಮೇಲ್ವಿಚಾರಣೆ ಮಾಡುವುದು ಮತ್ತು ಅವರ ಆರೋಗ್ಯ ಮತ್ತು ಯೋಗಕ್ಷೇಮವನ್ನು ವೃದ್ಧಿಗೊಳಿಸಲು ವ್ಯವಸ್ಥೆ ಮಾಡುವುದು;

(xxx) ಶಾಸನಗಳಿಗೆ ಅನುಸಾರವಾಗಿ ಫೆಲೋಶಿಪ್‌ಗಳು, ಸಂಚಾರಿ ಫೆಲೋಶಿಪ್‌ಗಳು, ವಿದ್ಯಾರ್ಥಿ ವೇತನಗಳು, ಪದಕಗಳು ಮತ್ತು ಪಾರಿತೋಷಕಗಳನ್ನು ನೀಡುವುದು;

(xxxi) ವಿಶ್ವವಿದ್ಯಾಲಯವು ಸ್ಥಾಪಿಸಿದ ಯಾವುದೇ ಪ್ರಕಟಣಾ ವಿಭಾಗ, ಉದ್ಯೋಗ ವಿಭಾಗ ಮತ್ತು ಕ್ರೀಡೆಗಳು ಮತ್ತು ಅಥ್ಲೆಟಿಕ್ ಕ್ಲಬ್‌ಗಳ ಆಡಳಿತ ನಿರ್ವಹಣೆಯನ್ನು ಮಾಡುವುದು;

(xxxii) ವಿಶ್ವವಿದ್ಯಾಲಯದ ಶಿಕ್ಷಣ ಮತ್ತು ಬೋಧನೆಯನ್ನು ಪುನರವಲೋಕಿಸುವುದು;

(xxxiii) ವಿಶ್ವವಿದ್ಯಾಲಯದೊಳಗೆ ಸಂಶೋಧನೆ ನಡೆಸುವುದಕ್ಕೆ ಪ್ರೋತ್ಸಾಹ ನೀಡುವುದು ಮತ್ತು ಅಂಥ ಸಂಶೋಧನೆಯ ಬಗ್ಗೆ ಕಾಲಕಾಲಕ್ಕೆ ವರದಿಗಳನ್ನು ನೀಡಬೇಕೆಂದು ಅಗತ್ಯಪಡಿಸುವುದು;

(xxxiv) ನಿರ್ದಿಷ್ಟ ಉದ್ದೇಶಗಳಿಗಾಗಿ ವಿಶ್ವವಿದ್ಯಾಲಯದ ಉಸ್ತುವಾರಿಯಲ್ಲಿರುವ ಎಲ್ಲಾ ಸ್ಥತ್ತುಗಳು ಮತ್ತು ನಿಧಿಗಳ ಆಡಳಿತ ವ್ಯವಹರಣೆ ನಡೆಸುವುದು;

(xxxv) ವಿಶ್ವವಿದ್ಯಾಲಯಕ್ಕೆ ನೀಡಲಾದ ಯಾವುದೇ ಚರ ಮತ್ತು ಸ್ಥಿರ ಸ್ಥತ್ತುಗಳ ದತ್ತಿ, ಮರಣ ಶಾಸನ ದಾನ, ದೇಣಿಗೆಗಳು, ದಾನಗಳು ಮತ್ತು ವರ್ಗಾವಣೆಗಳನ್ನು ವಿಶ್ವವಿದ್ಯಾಲಯದ ಪರವಾಗಿ ಸ್ವೀಕರಿಸುವುದು; ಮತ್ತು

(xxxvi) ಕುಲಪತಿಗೆ ಅಥವಾ ಶಾಸನಗಳಿಗೆ ಅನುಸಾರವಾಗಿ ನೇಮಿಸಲಾದ ತನ್ನ ಸದಸ್ಯರ ಪೈಕಿಯಿಂದ ರಚಿಸಲಾದ ಒಂದು ಸಮಿತಿಗೆ ತನ್ನ ಯಾವುಪೇ ಅಧಿಕಾರಗಳನ್ನು ಪ್ರತ್ಯಾಯೋಜನೆ ಮಾಡುವುದು.

31. **ಪ್ರಶಾಸನ ಸಭೆಯ ಸಭೆಗಳು.**- (1) ಪ್ರಶಾಸನ ಸಭೆಯು ಶಾಸನಗಳ ಮೂಲಕ ನಿಯಮಿಸಬಹುದಾದಂಥ ಸಮಯ ಹಾಗೂ ಸ್ಥಳದಲ್ಲಿ ಕಡೇಪಕ್ಷ ಪ್ರತಿ ಎರಡು ತಿಂಗಳುಗಳಗೊಮ್ಮೆ ಸಭೆ ಸೇರತಕ್ಕದ್ದು ಮತ್ತು (2) ಮತ್ತು (3)ನೇ ಉಪ ಪ್ರಕರಣಗಳ ಉಪಬಂಧಗಳಿಗೆ ಒಳಪಟ್ಟು, ಸಭೆಯಲ್ಲಿ ಕೋರಂನ್ನು ಒಳಗೊಂಡಂತೆ ಅದರ ಸಭೆಗಳಲ್ಲಿನ ಕಾರ್ಯಕಲಾಪಗಳ ವ್ಯವಹಾರಗಳ ಸಂಬಂಧದಲ್ಲಿ ಅಂಥ ಕಾರ್ಯವಿಧಾನದ ನಿಯಮಗಳನ್ನು ಪಾಲಿಸತಕ್ಕದ್ದು.

(2) ಕುಲಪತಿ ಅಥವಾ ಅವರ ಗೈರುಹಾಜರಿಯಲ್ಲಿ, ಸದಸ್ಯರುಗಳ ಪೈಕಿಯಿಂದ ಆಯ್ಕೆ ಮಾಡಲಾದ ಹಾಜರಿರುವ ಯಾವೊಬ್ಬ ಸದಸ್ಯನು ಪ್ರಶಾಸನ ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು.

(3) ಪ್ರಶಾಸನ ಸಭೆಯ ಯಾವುದೇ ಸಭೆಯಲ್ಲಿನ ಎಲ್ಲಾ ಪ್ರಶ್ನೆಗಳನ್ನು ಹಾಜರಿರುವ ಮತ್ತು ಮತದಾನ ಮಾಡಿದ ಸದಸ್ಯರುಗಳ ಮತಗಳ ಬಹುಮತದ ಮೂಲಕ ತೀರ್ಮಾನಿಸತಕ್ಕದ್ದು ಮತ್ತು ಮತಗಳು ಸಮವಾಗಿ ಬಂದ ಸಂದರ್ಭದಲ್ಲಿ, ಸಂದರ್ಭಾನುಸಾರ ಕುಲಪತಿ ಅಥವಾ ಅಧ್ಯಕ್ಷತೆ ವಹಿಸಿರುವ ಸದಸ್ಯನು ಎರಡನೇ ಅಥವಾ ನಿರ್ಣಾಯಕ ಮತ ಚಲಾಯಿಸತಕ್ಕದ್ದು.

(4) (ಎ) ಪ್ರಶಾಸನ ಸಭೆ ಪರಿಗಣಿಸುತ್ತಿರುವ ಯಾವುದೇ ವಿಷಯದಲ್ಲಿ ವಿಶೇಷ ಜ್ಞಾನ ಹೊಂದಿರುವ ಅಥವಾ ವಾಸ್ತವ ಅನುಭವ ಹೊಂದಿರುವ ಯಾವೊಬ್ಬ ವ್ಯಕ್ತಿಯನ್ನು ಸಮಾಲೋಚನೆಯ ಉದ್ದೇಶಕ್ಕಾಗಿ ಯಾವುದೇ ಸಭೆಗೆ ಹಾಜರಾಗುವಂತೆ ಆಹ್ವಾನಿಸಬಹುದು ಮತ್ತು ಅಂಥ ವ್ಯಕ್ತಿಯು ಆ ವಿಷಯದ ಬಗ್ಗೆ ಮಾತನಾಡಬಹುದು ಮತ್ತು ಅನ್ಯಥಾ ಅಂಥ ಸಭೆಯ ವ್ಯವಹರಣೆಗಳಲ್ಲಿ ಭಾಗವಹಿಸಬಹುದು. ಆದರೆ ಮತ ಚಲಾಯಿಸಲು ಹಕ್ಕು ಹೊಂದಿರತಕ್ಕದ್ದಲ್ಲ;

(ಬಿ) ಹಾಗೆ ಆಹ್ವಾನಿಸಲಾದ ವ್ಯಕ್ತಿಗಳು, ಪ್ರಶಾಸನ ಸಭೆಯ ಸದಸ್ಯರಿಗೆ ಅನ್ವಯವಾಗುವಂಥ ದಿನಭತ್ಯೆ ಮತ್ತು ಪ್ರವಾಸ ಭತ್ಯೆಗಳನ್ನು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು.

(5) ಕುಲಾಧಿಪತಿಯು, ತಾವು ನಿರ್ದಿಷ್ಟಪಡಿಸಬಹುದಾದಂಥ ಪರಿಶೀಲನಾಂಶಗಳನ್ನು ಚರ್ಚಿಸಲು ಸಭೆಯನ್ನು ಕರೆಯಲು ಆದೇಶದ ಮೂಲಕ ನಿರ್ದೇಶನ ನೀಡಬಹುದು ಮತ್ತು ಕುಲಪತಿಯವರು ಅಂಥ ನಿರ್ದೇಶನವನ್ನು ಪಾಲಿಸತಕ್ಕದ್ದು.

32. **ಸದಸ್ಯರು ಪರಿಶ್ರಮಧನ ಪಡೆಯಲು ಹಕ್ಕುಳ್ಳವರಾಗಿರುವುದಿಲ್ಲ.**– ಪ್ರಶಾಸನ ಸಭೆಯ ಸದಸ್ಯರು, ಶಾಸನದಲ್ಲಿ ನಿರ್ದಿಷ್ಟಪಡಿಸಿರಬಹುದಾದಂಥ ಪ್ರವಾಸಭತ್ಯೆ ಮತ್ತು ದಿನಭತ್ಯೆಯನ್ನು ಹೊರತುಪಡಿಸಿ ವಿಶ್ವವಿದ್ಯಾಲಯದಿಂದ ಯಾವುದೇ ಪರಿಶ್ರಮಧನವನ್ನು ಪಡೆಯಲು ಅರ್ಹರಾಗಿರತಕ್ಕದ್ದಲ್ಲ:

ಪರಂತು, ಈ ಪ್ರಕರಣದಲ್ಲಿರುವುದಾವುದೂ, ಯಾವೊಬ್ಬ ಸದಸ್ಯನು, ಆತ ಹೊಂದಿರುವ ಪದದ ಕಾರಣದಿಂದಾಗಿ ಅರ್ಹನಾಗಿರುವ ಉಪಲಬ್ಧಿಗಳನ್ನು ಪಡೆಯಲು ಅಡ್ಡಿಯುಂಟು ಮಾಡತಕ್ಕದ್ದಲ್ಲ.

ಪ್ರಶಿಕ್ಷಣ ಪರಿಷತ್ತು

33. **ಪ್ರಶಿಕ್ಷಣ ಪರಿಷತ್ತು.**– (1) ಈ ಮುಂದಿನ ಪದನಿಮಿತ್ತ ಮತ್ತು ಇತರೆ ಸದಸ್ಯರುಗಳನ್ನು ಒಳಗೊಂಡಂತೆ ಪ್ರಶಿಕ್ಷಣ ಪರಿಷತ್ತನ್ನು ಕುಲಾಧಿಪತಿಯವರು ರಚಿಸತಕ್ಕದ್ದು, ಎಂದರೆ:–

(ಎ) ಕುಲಪತಿಯವರು ಪ್ರಶಿಕ್ಷಣ ಪರಿಷತ್ತಿನ ಪದನಿಮಿತ್ತ ಅಧ್ಯಕ್ಷರಾಗಿರತಕ್ಕದ್ದು;

(ಬಿ) ಕರ್ನಾಟಕ ಉಚ್ಚ ನ್ಯಾಯಾಲಯದ ರಿಜಿಸ್ಟ್ರಾರ್ ಜನರಲ್;

(ಸಿ) ಪ್ರೌಢಶಿಕ್ಷಣದ ಪ್ರಭಾರಧಲ್ಲಿರುವ ಸರ್ಕಾರದ ಪ್ರಧಾನಕಾರ್ಯದರ್ಶಿಗಳು/

ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ:

(ಡಿ) ಸರ್ಕಾರದ ಕಾರ್ಯದರ್ಶಿಗಳು, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ ಅಥವಾ ಸರ್ಕಾರದ ಅವರ ಕಾರ್ಯದರ್ಶಿಗಳ ದರ್ಜೆಗಿಂತ ಕಡಿಮೆಯಲ್ಲದ ಅವರ ನಾಮನಿರ್ದೇಶಿತರು – ಪದನಿಮಿತ್ತ ಸದಸ್ಯರು

(ಇ) ಸರ್ಕಾರದ ಕಾರ್ಯದರ್ಶಿಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಅಥವಾ ಸರ್ಕಾರದ ಜಂಟಿ ಕಾರ್ಯದರ್ಶಿಗಳ ದರ್ಜೆಗಿಂತ ಕಡಿಮೆಯಲ್ಲದ ಅವರ ನಾಮನಿರ್ದೇಶಿತರು – ಪದನಿಮಿತ್ತ ಸದಸ್ಯರು

(ಎಫ್) ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರು, ಬೆಂಗಳೂರು ಅಥವಾ ಕಾಲೇಜು ಶಿಕ್ಷಣ ಇಲಾಖೆಯ ಅಪರ ಆಯುಕ್ತರ ದರ್ಜೆಗಿಂತ ಕಡಿಮೆಯಲ್ಲದ ಅವರ ನಾಮನಿರ್ದೇಶಿತರು;

(ಜಿ) ಭಾರತದ ರಾಷ್ಟ್ರೀಯ ಕಾನೂನು ವಿದ್ಯಾಲಯ ವಿಶ್ವವಿದ್ಯಾಲಯದ ನಿರ್ದೇಶಕರು, ಬೆಂಗಳೂರು;

(ಎಚ್) ಕುಲಪತಿಯವರು ಜ್ಯೇಷ್ಠತೆಯ ಕ್ರಮದಲ್ಲಿ ನಾಮನಿರ್ದೇಶನ ಮಾಡಿದ ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡ ಕಾನೂನು ಕಾಲೇಜುಗಳ ಹತ್ತು ಪ್ರಾಚಾರ್ಯರು;

(ಐ) ವಿಶ್ವವಿದ್ಯಾಲಯದ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಅಧ್ಯಕ್ಷರುಗಳು;

(ಜೆ) ವಿಶ್ವವಿದ್ಯಾಲಯ ಗ್ರಂಥಾಲಯದ ಗ್ರಂಥಪಾಲಕ;

(ಕೆ) ಸರ್ಕಾರವು ನಾಮನಿರ್ದೇಶಿಸಿದ ಐದು ಸದಸ್ಯರು, ಅವರಲ್ಲಿ ಒಬ್ಬರು, ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಬುಡಕಟ್ಟಿಗೆ ಸೇರಿದ ವ್ಯಕ್ತಿಯಾಗಿರತಕ್ಕದ್ದು, ಒಬ್ಬರು ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಯಾಗಿರತಕ್ಕದ್ದು ಮತ್ತು ಇತರೆ ಮೂರು ಜನರು ಕಾನೂನು ವೃತ್ತಿಯಲ್ಲಿರುವ ಅಥವಾ ಕಾನೂನು ಬೋಧನಾ ವಿಭಾಗಕ್ಕೆ ಸೇರಿದ ಸದಸ್ಯರಾಗಿದ್ದು ಅವರಲ್ಲಿ ಒಬ್ಬರು ಮಹಿಳೆಯಾಗಿರತಕ್ಕದ್ದು;

(ಎಲ್) ಸರ್ಕಾರದಿಂದ ನಾಮನಿರ್ದೇಶಿತರಾದ ಕರ್ನಾಟಕ ವಿಧಾನಮಂಡಲದ ಮೂರು ಜನ ಸದಸ್ಯರು, ಅವರಲ್ಲಿ, ಇಬ್ಬರು ವಿಧಾನಸಭೆಯ ಸದಸ್ಯರಾಗಿರತಕ್ಕದ್ದು ಮತ್ತು ಇನ್ನೊಬ್ಬರು ವಿಧಾನ ಪರಿಷತ್ತಿನ ಸದಸ್ಯರಾಗಿರತಕ್ಕದ್ದು;

(ಎಮ್) ಸರ್ಕಾರದಿಂದ ನಾಮನಿರ್ದೇಶಿತರಾದ ಸುಪ್ರಸಿದ್ಧ ಹಿರಿಯ ನ್ಯಾಯವಾದಿಗಳ ಪೈಕಿ ಇಬ್ಬರು ಸದಸ್ಯರು ಅವರಲ್ಲಿ ಒಬ್ಬರು ಮಹಿಳಾ ನ್ಯಾಯವಾದಿಯಾಗಿರತಕ್ಕದ್ದು;

(ಎನ್) ಕರ್ನಾಟಕ ನ್ಯಾಯವಾದಿ ಪರಿಷತ್ತಿನ (ಬಾರ್‌ಕೌನ್ಸಿಲಿನ) ಸದಸ್ಯರುಗಳ ಪೈಕಿಯಿಂದ ನಾಮನಿರ್ದೇಶಿತರಾದ ಒಬ್ಬ ಸದಸ್ಯರು.

(2) ಒಬ್ಬ ವ್ಯಕ್ತಿಯು, ಪ್ರಶಿಕ್ಷಣ ಪರಿಷತ್ತಿನ ಸದಸ್ಯನಾಗಿರುವುದು ನಿಂತುಹೋದಲ್ಲಿ, ಅವನು, ಪ್ರಶಿಕ್ಷಣ ಪರಿಷತ್ತಿನ ತನ್ನ ಸದಸ್ಯತ್ವದ ಕಾರಣದಿಂದಾಗಿ ಸದಸ್ಯನಾಗಿರಬಹುದಾದ ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಸದಸ್ಯನಾಗಿರುವುದೂ ನಿಂತುಹೋಗತಕ್ಕದ್ದು.

(3) ಪ್ರಶಿಕ್ಷಣ ಪರಿಷತ್ತಿನ ಸದಸ್ಯರು, ನಿಯಮಿಸಬಹುದಾದಂಥ ದಿನಭತ್ಯೆ / ಪ್ರವಾಸ ಭತ್ಯೆಯ ಹೊರತು ವಿಶ್ವವಿದ್ಯಾಲಯದಿಂದ ಯಾವುದೇ ಪರಿಶ್ರಮಧನವನ್ನು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದಲ್ಲ:

ಪರಂತು, ಈ ಉಪಪ್ರಕರಣದಲ್ಲಿರುವುದಾವುದೂ, ಯಾವೊಬ್ಬ ಸದಸ್ಯನು ಆತನು ಹೊಂದಿರುವ ಪದದ ಕಾರಣದಿಂದಾಗಿ ಪಡೆಯಲು ಅರ್ಹನಾಗಿರುವ ಸಾಮಾನ್ಯ ಉಪಲಬ್ಧಿಗಳನ್ನು ಪಡೆಯಲು ಅಡ್ಡಿಯುಂಟು ಮಾಡತಕ್ಕದ್ದಲ್ಲ.

(4) ಪದನಿಮಿತ್ತ ಸದಸ್ಯನನ್ನು ಹೊರತುಪಡಿಸಿ, ಪ್ರಶಿಕ್ಷಣ ಪರಿಷತ್ತಿನ ಒಬ್ಬ ಸದಸ್ಯನು, ತನ್ನ ಪದಾವಧಿಯು ಮುಕ್ತಾಯವಾಗುವುದಕ್ಕೆ ಮೊದಲು, ಯಾವುದೇ ಸಮಯದಲ್ಲಿ, ತನ್ನ ಸದಸ್ಯತ್ವಕ್ಕೆ ರಾಜೀನಾಮೆ ನೀಡಬಹುದು. ಅಂಥ ರಾಜೀನಾಮೆಯನ್ನು, ಸದಸ್ಯನು ಲಿಖಿತ ಪತ್ರದ ಮೂಲಕ ಕುಲಾಧಿಪತಿಗೆ ತಿಳಿಸತಕ್ಕದ್ದು ಮತ್ತು ಕುಲಾಧಿಪತಿಯವರು ರಾಜೀನಾಮೆಗೆ ಒಪ್ಪಿಗೆಯನ್ನು ನೀಡಿದ ದಿನಾಂಕದಿಂದ ರಾಜೀನಾಮೆಯು ಜಾರಿಗೆ ಬರತಕ್ಕದ್ದು.

34. ಪ್ರಶಿಕ್ಷಣ ಪರಿಷತ್ತಿನ ಅಧಿಕಾರಗಳು.- (1) ಪ್ರಶಿಕ್ಷಣ ಪರಿಷತ್ತು ವಿಶ್ವವಿದ್ಯಾಲಯದ ಪ್ರಶಿಕ್ಷಣ ನಿಕಾಯವಾಗಿರತಕ್ಕದ್ದು ಮತ್ತು ಈ ಅಧಿನಿಯಮದ, ಶಾಸನಗಳ, ಪರ್ಯಾದೇಶಗಳ ಮತ್ತು ವಿನಿಯಮಗಳ ಉಪಬಂಧಗಳಿಗೆ ಒಳಪಟ್ಟು ವಿಶ್ವವಿದ್ಯಾಲಯದ ಶಿಕ್ಷಣ, ವಿದ್ಯಾಭ್ಯಾಸ ಮತ್ತು ಪರೀಕ್ಷೆಗಳ ಗುಣಮಟ್ಟದ ನಿಯಂತ್ರಣ ಹಾಗೂ ಸಾಮಾನ್ಯ ನಿಯಂತ್ರಣ ಹೊಂದಿರತಕ್ಕದ್ದು ಮತ್ತು ಅವುಗಳ ಗುಣಮಟ್ಟಗಳನ್ನು ಕಾಪಾಡುವ ಜವಾಬ್ದಾರಿಯನ್ನು ಹೊಂದಿರತಕ್ಕದ್ದು.

(2) ಹಿಂದೆ ಹೇಳಿದ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಹಾಗೂ ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಅಡಿಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೊಳಪಟ್ಟು ಪ್ರಶಿಕ್ಷಣ ಪರಿಷತ್ತು ಈ ಮುಂದಿನ ಅಧಿಕಾರಗಳನ್ನು ಚಲಾಯಿಸತಕ್ಕದ್ದು, ಎಂದರೆ:–

(i) ಪ್ರಶಿಕ್ಷಣ ವಿಷಯಗಳಿಗೆ ಸಂಬಂಧಪಟ್ಟಂತೆ ಪರ್ಯಾವೇಕ್ಷಣಗಳನ್ನು ಹೊರಡಿಸಲು ಪ್ರಸ್ತಾವನೆಗಳನ್ನು ಮಾಡುವುದು;

(ii) ಪರ್ಯಾದೇಶಗಳಲ್ಲಿ ಒಳಗೊಂಡಿರದಷ್ಟರಮಟ್ಟಿಗೆ ಅಧ್ಯಯನ ಕ್ರಮಗಳಿಗೆ ಸಂಬಂಧಿಸಿದಂತೆ ವಿನಿಯಮಗಳನ್ನು ರಚಿಸುವುದು;

(iii) ಪರೀಕ್ಷೆಗಳ ವಿನ್ಯಾಸಗಳಿಗೆ ಸಂಬಂಧಿಸಿದಂತೆ ಮತ್ತು ಯಾವ ಷರತ್ತುಗಳಿಗೆ ಒಳಪಟ್ಟು ಪರೀಕ್ಷೆಗಳು, ಪದವಿಗಳು, ಡಿಪ್ಲೋಮಾಗಳು, ಪ್ರಮಾಣ ಪತ್ರಗಳು ಅಥವಾ ಇತರೆ ಶಿಕ್ಷಣ ಪ್ರಶಸ್ತಿಗಳಿಗೆ ವಿದ್ಯಾರ್ಥಿಗಳಿಗೆ ಪ್ರವೇಶ ಕೊಡತಕ್ಕದ್ದೋ, ಅಂಥ ಷರತ್ತುಗಳಿಗೆ ಸಂಬಂಧಿಸಿದಂತೆ ವಿನಿಯಮಗಳನ್ನು ರಚಿಸುವುದು;

(iv) ವಿಶ್ವವಿದ್ಯಾಲಯದ ವಿವಿಧ ಪರೀಕ್ಷೆಗಳ ಫಲಿತಾಂಶಗಳನ್ನು ಘೋಷಿಸಲು ವಿನಿಯಮಗಳನ್ನು ರಚಿಸುವುದು;

(v) ಕಾಲೇಜುಗಳಲ್ಲಿ ಮತ್ತು ಮನ್ನಣೆ ಪಡೆದ ಸಂಸ್ಥೆಗಳಲ್ಲಿ, ಅಧ್ಯಯನ ಹಾಗೂ ಬೋಧನೆಯ ಸಮನ್ವಯತೆಗಾಗಿ ವಿನಿಯಮಗಳನ್ನು ಮಾಡುವುದು;

(vi) ವಿಶ್ವವಿದ್ಯಾಲಯದಲ್ಲಿ ಸಂಶೋಧನೆಯನ್ನು ವೃದ್ಧಿಪಡಿಸುವುದಕ್ಕಾಗಿ ಮತ್ತು ಇತರ ವಿಶೇಷ ಅಧ್ಯಯನಗಳನ್ನು ವೃದ್ಧಿಪಡಿಸುವುದಕ್ಕಾಗಿ ಕಾರ್ಯ ಯೋಜನೆಗಳನ್ನು ರೂಪಿಸುವುದು;

(vii) ಫ್ಯಾಕಲ್ಟಿಗಳಿಗೆ ವಿಷಯಗಳನ್ನು ಹಂಚಿಕೆ ಮಾಡಲು ಮತ್ತು ಫ್ಯಾಕಲ್ಟಿಗಳಿಗೆ ತನ್ನದೇ ಅಡ ಸದಸ್ಯರನ್ನು ನೇಮಿಸುವುದಕ್ಕಾಗಿ ಪ್ರಸ್ತಾಪ ಸಲ್ಲಿಸುವುದು;

(viii) ಪರೀಕ್ಷೆಗಳಿಗೆ ವಿದ್ಯಾರ್ಥಿಗಳ ಪ್ರವೇಶಕ್ಕೆ ಸಂಬಂಧಿಸಿದಂತೆ ವಿನಾಯಿತಿಗಳ ನೀಡಿಕೆಗಾಗಿ ಮಾನದಂಡವನ್ನು ನಿಗದಿಪಡಿಸುವುದು;

(ix) ವಿಶ್ವವಿದ್ಯಾಲಯಕ್ಕೆ ಅಗತ್ಯವಿರುವ ಪ್ರಾಧ್ಯಾಪಕರುಗಳು, ಪ್ರವಾಚಕರುಗಳ, ಉಪನ್ಯಾಸಕರ ಮತ್ತು ಇತರ ಅಧ್ಯಾಪಕರ ಹುದ್ದೆಗಳನ್ನು ಪ್ರಾರಂಭಿಸಲು ಮತ್ತು ಅಂಥ ಹುದ್ದೆಗಳ ಕರ್ತವ್ಯಗಳನ್ನು ನಿಯಮಿಸಲು ಪ್ರಸ್ತಾವಗಳನ್ನು ಸಲ್ಲಿಸುವುದು;

(x) ಫೆಲೋಷಿಪ್‌ಗಳು, ಸಂಚಾರಿ ಫೆಲೋಷಿಪ್‌ಗಳು, ವಿದ್ಯಾರ್ಥಿ ವೇತನ, ಶಿಷ್ಯವೇತನ, ಅಥವಾ ಪ್ರವೇತನಗಳನ್ನು ಸ್ಥಾಪಿಸುವುದಕ್ಕಾಗಿ ಮತ್ತು ಅವುಗಳನ್ನು ನೀಡುವುದಕ್ಕಾಗಿ ಪ್ರಸ್ತಾವಗಳನ್ನು ಸಲ್ಲಿಸುವುದು;

(xi) ಪರೀಕ್ಷೆಗಳ ಸಮಾನತೆಯನ್ನು ನಿಯಮಿಸಲು ವಿನಿಯಮಗಳನ್ನು ರಚಿಸುವುದು;

(xii) ಪದವಿಗಳು, ಡಿಪ್ಲೋಮಾಗಳು ಮತ್ತು ಇತರ ಪ್ರಶಿಕ್ಷಣ ಪ್ರಶಸ್ತಿಗಳಿಗೆ ಅರ್ಹತೆ ಪಡೆಯುವುದಕ್ಕಾಗಿ ವಿಶ್ವವಿದ್ಯಾಲಯದಲ್ಲಿ ಅಥವಾ ಸಂಯೋಜನೆಗೊಂಡ ಕಾಲೇಜುಗಳಲ್ಲಿ ಅಧ್ಯಯನ

ಮಾಡಬೇಕಾದ ಅನುಮೋದಿತ ವ್ಯಾಸಂಗ ಕ್ರಮಗಳಿಂದ ವಿನಾಯಿತಿಗಳನ್ನು ನೀಡುವುದಕ್ಕಾಗಿ ವಿನಿಯಮಗಳನ್ನು ರಚಿಸುವುದು;

(xiii) ಸಂಶೋಧನೆ ಮತ್ತು ಜ್ಞಾನ ಪ್ರಗತಿಗಾಗಿ ಮತ್ತು ಪ್ರಸಾರಕ್ಕಾಗಿ ಸೂಕ್ತವೆಂದು ಭಾವಿಸಬಹುದಾದಂಥ ಕಲಿಕೆ ಮತ್ತು ಅಧ್ಯಯನ ಕ್ರಮಗಳ ವಿಭಾಗಗಳಲ್ಲಿ ಶಿಕ್ಷಣ, ಬೋಧನೆ ಮತ್ತು ತರಬೇತಿಗಾಗಿ ಅವಕಾಶ ಕಲ್ಪಿಸುವುದು;

(xiv) ಸಂಯೋಜನೆಗೊಂಡ ಕಾಲೇಜುಗಳು ಮತ್ತು ಮನ್ನಣೆ ಪಡೆದ ಸಂಸ್ಥೆಗಳನ್ನು ವಿಶೇಷ ಅಧ್ಯಯನ ಕೈಗೊಳ್ಳಲು ಸಮರ್ಥವಾಗುವಂತೆ ಮಾಡಲು ಅವಕಾಶ ಕಲ್ಪಿಸುವುದು;

(xv) ವಾರ್ಷಿಕ ಹಣಕಾಸು ಅಂದಾಜುಗಳನ್ನು ಪರಿಗಣಿಸುವುದು;

(xvi) ಯಾವುದೇ ವಿನಿಯಮವನ್ನು ತಿದ್ದುಪಡಿ ಮಾಡುವುದು ಅಥವಾ ನಿರಸನಗೊಳಿಸುವುದು;

(xvii) ವಿಶ್ವವಿದ್ಯಾಲಯದ ವಿವಿಧ ಪ್ರಾಧಿಕಾರಗಳಿಗೆ ಸದಸ್ಯರನ್ನು ನಾಮನಿರ್ದೇಶಿಸುವುದು;

(xviii) ಈ ಅಧಿನಿಯಮದ ಮೂಲಕ ಅಥವಾ ಅದರಡಿಯಲ್ಲಿ ಅದಕ್ಕೆ ಪ್ರದಾನ ಮಾಡಬಹುದಾದಂಥ ಇತರೆ ಅಧಿಕಾರಗಳನ್ನು ಚಲಾಯಿಸುವುದು ಮತ್ತು ವಿಧಿಸಬಹುದಾದಂಥ ಇತರ ಕರ್ತವ್ಯಗಳನ್ನು ನಿರ್ವೇರಿಸುವುದು;

(xix) ಸಂಶೋಧನಾ ಮತ್ತು ವಿಶೇಷ ಅಧ್ಯಯನಗಳ ವಿಭಾಗಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು; ಮತ್ತು

(xx) ಸಾಮಾನ್ಯವಾಗಿ ಪ್ರಶಿಕ್ಷಣಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳ ಬಗ್ಗೆ ವಿಶ್ವವಿದ್ಯಾಲಯಕ್ಕೆ ಸಲಹೆ ನೀಡುವುದು.

35. **ಪ್ರಶಿಕ್ಷಣ ಪರಿಷತ್ತಿನ ಸಭೆ.**- (1) ಪ್ರಶಿಕ್ಷಣ ಪರಿಷತ್ತು, ಕುಲಪತಿಯವರು ನಿಗದಿಪಡಿಸಬಹುದಾದ ದಿನಾಂಕಗಳಂದು, ಪ್ರತಿ ಮೂರು ತಿಂಗಳುಗಳಿಗೆ ಒಂದು ಬಾರಿಯಾದರೂ ಸಭೆ ಸೇರತಕ್ಕದ್ದು. ಅಂಥ ಸಭೆಗಳಲ್ಲಿ ಒಂದನ್ನು ವಾರ್ಷಿಕ ಸಭೆಯೆಂದು ಕರೆಯತಕ್ಕದ್ದು.

(2) ಒಟ್ಟು ಸದಸ್ಯರ ಸಂಖ್ಯೆಯಲ್ಲಿ ಮೂರನೇ ಒಂದರಷ್ಟು ಸಂಖ್ಯೆಯ ಸದಸ್ಯರು ಪ್ರಶಿಕ್ಷಣ ಪರಿಷತ್ತಿನ ಸಭೆಗಾಗಿ ಅಗತ್ಯಪಡಿಸಲಾದ ಕೋರಂ ಆಗಿರತಕ್ಕದ್ದು:

ಪರಂತು, ವಿಶ್ವವಿದ್ಯಾಲಯದ ಘಟಿಕೋತ್ಸವ ಸಂದರ್ಭದಲ್ಲಿ ಅಥವಾ ಪದವಿಗಳು, ಬಿರುದುಗಳು, ಡಿಪ್ಲೋಮಾಗಳು ಅಥವಾ ಇತರೆ ಪ್ರಶಿಕ್ಷಣ ಪ್ರಶಸ್ತಿಗಳನ್ನು ನೀಡುವ ಉದ್ದೇಶಕ್ಕಾಗಿ ನಡೆಯುವ ಪ್ರಶಿಕ್ಷಣ ಪರಿಷತ್ತಿನ ಸಭೆಯಲ್ಲಿ ಅಂಥ ಕೋರಂ ಅಗತ್ಯವಿರಬೇಕಾಗಿಲ್ಲ.

(3) ಕುಲಪತಿಯವರು, ತಾವು ಸೂಕ್ತವೆಂದು ಭಾವಿಸಿದಾಗಲೆಲ್ಲಾ ಮತ್ತು ಪ್ರಶಿಕ್ಷಣ ಪರಿಷತ್ತಿನ ಒಟ್ಟು ಸದಸ್ಯರುಗಳ ಪೈಕಿ ಶೇಕಡಾ ಐವತ್ತರಷ್ಟಕ್ಕೆ ಕಡಿಮೆ ಇಲ್ಲದ ಸದಸ್ಯರು ಸಹಿ ಮಾಡಿದ ಲಿಖಿತ ಕಡ್ಡಾಯ ಕೋರಿಕೆಯ ಮೇಲೆ ಪ್ರಶಿಕ್ಷಣ ಪರಿಷತ್ತಿನ ವಿಶೇಷ ಸಭೆಯನ್ನು ಕರೆಯತಕ್ಕದ್ದು.

36. **ಸದಸ್ಯತ್ವಕ್ಕೆ ಅನರ್ಹತೆ.**- (1) ಒಬ್ಬ ವ್ಯಕ್ತಿಯು, ತನ್ನ ನಾಮನಿರ್ದೇಶನದ ದಿನಾಂಕದಂದು,-

(ಎ) ಅಸ್ವಸ್ಥ ಚಿತ್ತದವನಾಗಿದ್ದರೆ ಅಥವಾ ಕಿವುಡ, ಮೂಕನಾಗಿದ್ದರೆ; ಅಥವಾ

(ಬಿ) ಅವಿಮುಕ್ತ ದಿವಾಳಿಯೆಂದು ನ್ಯಾಯನಿರ್ಣೀತನಾಗಿದ್ದರೆ:

(ಸಿ) ನೈತಿಕ ಅಧಃಪತನವನ್ನು ಒಳಗೊಂಡ ಯಾವುದೇ ಅಪರಾಧಕ್ಕಾಗಿ ಕ್ರಿಮಿನಲ್ ನ್ಯಾಯಾಲಯದಿಂದ ಕಾರಾವಾಸ ಶಿಕ್ಷೆಯಿಂದ ಶಿಕ್ಷಿಸಲ್ಪಟ್ಟಿದ್ದರೆ,

– ಅವನು ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಸದಸ್ಯನಾಗಿ ನಾಮನಿರ್ದೇಶಿತನಾಗಲು ಅಥವಾ ಸದಸ್ಯನಾಗಿ ಮುಂದುವರೆಯಲು ಅನರ್ಹನಾಗಿರತಕ್ಕದ್ದು.

(2) ಒಬ್ಬ ವ್ಯಕ್ತಿಯು (1)ನೇ ಉಪ ಪ್ರಕರಣದ ಅಡಿಯಲ್ಲಿ ಅನರ್ಹನೇ ಅಲ್ಲವೇ ಎಂಬ ಬಗ್ಗೆ ವಿವಾದ ಅಥವಾ ಸಂದೇಹ ಉಂಟಾದಲ್ಲಿ, ಪ್ರಶಿಕ್ಷಣ ಪರಿಷತ್ತಿನ ತೀರ್ಮಾನವು ಅಂತಿಮವಾಗಿರತಕ್ಕದ್ದು.

37. **ಪ್ರಶಿಕ್ಷಣ ಪರಿಷತ್ತಿನ ಮತ್ತು ಪ್ರಶಾಸನ ಸಭೆಯ ಸದಸ್ಯರ ಪದಾವಧಿ.**– (1) ಅನ್ಯಥಾ ಉಪಬಂಧಿಸಿದುದನ್ನುಳಿದು, ಪದನಿಮಿತ್ತ ಸದಸ್ಯರುಗಳನ್ನು ಹೊರತುಪಡಿಸಿ, ಪ್ರಶಿಕ್ಷಣ ಪರಿಷತ್ತಿನ ಮತ್ತು ಪ್ರಶಾಸನ ಸಭೆಯ ಸದಸ್ಯರ ಪದಾವಧಿಯು ಮೂರು ವರ್ಷಗಳು ಅಥವಾ ಪುನರ್ ರಚನೆಯಾಗುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಆ ಅವಧಿಯಾಗಿರತಕ್ಕದ್ದು.

(2) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ ಪ್ರಶಿಕ್ಷಣ ಪರಿಷತ್ತನ್ನು ಮತ್ತು ಪ್ರಶಾಸನ ಸಭೆಯನ್ನು ಕುಲಾಧಿಪತಿಯವರು ಮೂರು ವರ್ಷಗಳಿಗೊಮ್ಮೆ ಪುನರ್ ರಚಿಸತಕ್ಕದ್ದು.

38. **ಪ್ರಾಧಿಕಾರಗಳ ಸದಸ್ಯತ್ವವನ್ನು ಹೊಂದಲು ನಿರ್ಬಂಧಗಳು.**– (1) ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಪ್ರಾಧಿಕಾರಗಳಿಗೆ ನಾಮನಿರ್ದೇಶಿತನಾದ ಯಾವೊಬ್ಬ ಸದಸ್ಯನು, ನಾಮನಿರ್ದೇಶನ ಮಾಡುವ ಸಂಬಂಧಪಟ್ಟ ಪ್ರಾಧಿಕಾರದ ಇಷ್ಟಪರ್ಯಂತ ಪದಧಾರಣ ಮಾಡತಕ್ಕದ್ದು.

(2) ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಪ್ರಾಧಿಕಾರಗಳಿಗೆ ನಾಮನಿರ್ದೇಶಿತನಾದ ಯಾವೊಬ್ಬ ವ್ಯಕ್ತಿಯು ಎರಡನೇ ಅವಧಿಗಾಗಿ ನಾಮನಿರ್ದೇಶನ ಹೊಂದಲು ಅಥವಾ ಚುನಾಯಿತನಾಗಲು ಅರ್ಹನಾಗಿರತಕ್ಕದ್ದಲ್ಲ.

(3) ಯಾವುದೇ ಪ್ರಾಧಿಕಾರಗಳಿಗೆ ನಾಮನಿರ್ದೇಶಿತನಾದ ಯಾವೊಬ್ಬ ಸದಸ್ಯನು, ದುರ್ವರ್ತನೆ ಅಥವಾ ದುರ್ನಡತೆ ಆಧಾರದ ಮೇಲೆ ಅಥವಾ ಅನ್ಯಥಾ ವಿಚಾರಣೆಯನ್ನು ನಡೆಸಿದ ತರುವಾಯ ಕುಲಾಧಿಪತಿಯಿಂದ ಯಾವುದೇ ಕಾಲದಲ್ಲಿ ಅಂಥ ಸದಸ್ಯತ್ವದಿಂದ ತೆಗೆದು ಹಾಕಲ್ಪಡುವುದಕ್ಕೆ ಗುರಿಯಾಗತಕ್ಕದ್ದು:

ಪರಂತು, ಪ್ರಶಿಕ್ಷಣ ಪರಿಷತ್ತು ಅಥವಾ ಪ್ರಶಾಸನ ಸಭೆಯ ಯಾವೊಬ್ಬ ಸದಸ್ಯನು ನಿವೃತ್ತಿ ವಯಸ್ಸನ್ನು ತಲುಪಿದ ನಂತರ ಆತನ ಸದಸ್ಯತ್ವವು ನಿಂತುಹೋಗತಕ್ಕದ್ದು.

(4) ಈ ಅಧ್ಯಾದೇಶದ ಅಡಿಯಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು, ಕಾನೂನಿನ ಮೂಲಕ ಸ್ಥಾಪಿತವಾದ ಯಾವುದೇ ವಿಶ್ವವಿದ್ಯಾಲಯದ ಪದವೀಧರನಲ್ಲದ ಯಾವೊಬ್ಬ ವ್ಯಕ್ತಿಯು ಈ ಅಧ್ಯಾದೇಶದ ಅಡಿಯಲ್ಲಿ ಯಾವುವೇ ಪ್ರಾಧಿಕಾರಗಳ ಸದಸ್ಯನಾಗಿ ನಾಮನಿರ್ದೇಶಿತನಾಗಲು ಅರ್ಹನಾಗಿರತಕ್ಕದ್ದಲ್ಲ.

(5) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ ಆದರೆ ಅನ್ಯಥಾ ಉಪಬಂಧಿಸಿದುದನ್ನುಳಿದು, ವಿಶ್ವವಿದ್ಯಾಲಯದ ಬೋಧಕ ಮತ್ತು ಬೋಧಕೇತರ ಅಥವಾ ಲಿಪಿಕ ವರ್ಗದ ಯಾವೊಬ್ಬ ನೌಕರನು ಅಥವಾ ಸಂಯೋಜಿತ ಕಾಲೇಜಿನ ಆಡಳಿತದಲ್ಲಿ ಯಾವುದೇ ಸಾಮರ್ಥ್ಯದಲ್ಲಿರುವ ವ್ಯಕ್ತಿಯು ಈ ಅಧ್ಯಾದೇಶದ ಅಡಿಯಲ್ಲಿ ಯಾವುವೇ ಪ್ರಾಧಿಕಾರಗಳ ಸದಸ್ಯನಾಗಿ ನಾಮನಿರ್ದೇಶಿತನಾಗಲು ಅರ್ಹನಾಗಿರತಕ್ಕದ್ದಲ್ಲ.

39. ಹಣಕಾಸು ಸಮಿತಿ.– (1) ಹಣಕಾಸು ಸಮಿತಿಯು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ಕುಲಪತಿ; – ಪದನಿಮಿತ್ತ ಅಧ್ಯಕ್ಷ;

(ಬಿ) ಕಾನೂನು ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿಯವರ, ಅಪರ ಕಾರ್ಯದರ್ಶಿಗಳ ದರ್ಜೆಗಿಂತ ಕಡಿಮೆಯಿಲ್ಲದ ಒಬ್ಬ ಪ್ರತಿನಿಧಿ;

(ಸಿ) ಆರ್ಥಿಕ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿಯವರ, ಉಪಕಾರ್ಯದರ್ಶಿಯವರ ದರ್ಜೆಗಿಂತ ಕಡಿಮೆಯಿಲ್ಲದ ಒಬ್ಬ ಪ್ರತಿನಿಧಿ;

(ಡಿ) ಪ್ರಶಾಸನ ಸಭೆಯು ತನ್ನ ಸದಸ್ಯರ ಪೈಕಿಯಿಂದ ನಾಮನಿರ್ದೇಶಿಸಿದ ಇಬ್ಬರು ಸದಸ್ಯರು, ಅವರಲ್ಲಿ ಒಬ್ಬರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿರತಕ್ಕದ್ದು ಮತ್ತು ಒಬ್ಬರು ಸರ್ಕಾರವು ಪ್ರಶಾಸನ ಸಭೆಗೆ ನಾಮನಿರ್ದೇಶಿಸಿದ ವ್ಯಕ್ತಿಯಾಗಿರತಕ್ಕದ್ದು ;

(ಇ) ಪ್ರಶಿಕ್ಷಣ ಪರಿಷತ್ತಿನಿಂದ ನಾಮನಿರ್ದೇಶಿತರಾದ ಒಬ್ಬ ಸದಸ್ಯ, ಮತ್ತು

(ಎಫ್) ಕುಲಸಚಿವರು- ಒಬ್ಬ ಸದಸ್ಯರಾಗಿರತಕ್ಕದ್ದು.

(2) ಹಣಕಾಸು ಅಧಿಕಾರಿಯು ಹಣಕಾಸು ಸಮಿತಿಯ ಪದನಿಮಿತ್ತ ಕಾರ್ಯದರ್ಶಿಯಾಗಿರತಕ್ಕದ್ದು.

(3) (1)ನೇ ಉಪ ಪ್ರಕರಣದ (ಡಿ) ಮತ್ತು (ಇ) ಖಂಡಗಳ ಅಡಿಯಲ್ಲಿ ಹಣಕಾಸು ಸಮಿತಿಗೆ ನಾಮನಿರ್ದೇಶಿತರಾದ ಸದಸ್ಯರು ಮೂರು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು.

(4) ಹಣಕಾಸು ಅಧಿಕಾರಿಯು ತಯಾರಿಸಿದ ವಾರ್ಷಿಕ ಲೆಕ್ಕಪತ್ರಗಳು ಮತ್ತು ಹಣಕಾಸು ಅಂದಾಜುಗಳನ್ನು ಪರಿಗಣನೆ ಮತ್ತು ಪರಾಮರ್ಶೆಗಾಗಿ ಹಣಕಾಸು ಸಮಿತಿಯ ಮುಂದೆ ಮಂಡಿಸತಕ್ಕದ್ದು.

(5) ಹಣಕಾಸು ಸಮಿತಿಯು ವಿಶ್ವವಿದ್ಯಾಲಯದ ಆದಾಯ ಮತ್ತು ಸಂಪನ್ಮೂಲಗಳ ಆಧಾರದ ಮೇಲೆ ಆ ವರ್ಷಕ್ಕಾಗಿ ಆವರ್ತಕ ವೆಚ್ಚದ ಹಾಗೂ ಒಟ್ಟು ಅನಾವರ್ತಕ ವೆಚ್ಚಗಳ ಮಿತಿಗಳನ್ನು ಶಿಫಾರಸ್ಸು ಮಾಡತಕ್ಕದ್ದು, ಉತ್ತಾದಕ ಕಾಮಗಾರಿಗಳ ಸಂದರ್ಭದಲ್ಲಿ ಸಂಪನ್ಮೂಲವು ಸಾಲಗಳಿಂದ ಬರುವ ಉತ್ಪನ್ನಗಳನ್ನು ಒಳಗೊಳ್ಳಬಹುದು.

(6) ಹಣಕಾಸು ಸಮಿತಿಯು,–

(i) ಲೆಕ್ಕಪತ್ರಗಳನ್ನು ಪರಿಶೀಲಿಸಲು ಮತ್ತು ವೆಚ್ಚಗಳ ಪ್ರಸ್ತಾವಗಳನ್ನು ಪರಿಶೋಧಿಸಲು ಮೂರು ತಿಂಗಳಿಗೆ ಒಮ್ಮೆಯಾದರೂ ಸಭೆ ಸೇರತಕ್ಕದ್ದು;

(ii) ಕಾಲ ಕಾಲಕ್ಕೆ ವಿಶ್ವವಿದ್ಯಾಲಯ ಹಣಕಾಸಿನ ಪರಿಸ್ಥಿತಿಯನ್ನು ಪುನರವಲೋಕಿಸತಕ್ಕದ್ದು;

(iii) ವಾರ್ಷಿಕ ಹಣಕಾಸು ಅಂದಾಜಿನಲ್ಲಿ ಅವಕಾಶವನ್ನು ಕಲ್ಪಿಸಿಲ್ಲದ ಮತ್ತು ವಾರ್ಷಿಕ ಹಣಕಾಸು ಅಂದಾಜಿನಲ್ಲಿ ಒದಗಿಸಿದ ಮೊಬಲಗಿಗಿಂತ ಹೆಚ್ಚಿನ ವೆಚ್ಚವನ್ನು ಒಳಗೊಂಡ ಪ್ರತಿಯೊಂದು ಪ್ರಸ್ತಾವಗಳ ಮೇಲೆ ಪ್ರಶಾಸನ ಸಭೆಗೆ ಶಿಫಾರಸ್ಸುಗಳನ್ನು ಮಾಡತಕ್ಕದ್ದು;

(iv) ವಿಶ್ವವಿದ್ಯಾಲಯದ ಲೆಕ್ಕ ಪತ್ರಗಳ ನಿರ್ವಹಣೆಯ ವಿಧಾನಗಳು ಮತ್ತು ಕಾರ್ಯವಿಧಾನಗಳನ್ನು ಹಾಗೂ ನಮೂನೆಗಳನ್ನು ನಿಯಮಿಸತಕ್ಕದ್ದು;

(v) ವಿಶ್ವವಿದ್ಯಾಲಯದ ಹಣಕಾಸಿನ ಸಂಬಂಧದ ಎಲ್ಲಾ ವಿಷಯಗಳಲ್ಲಿ ಪ್ರಶಾಸನ ಸಭೆಗೆ ಶಿಫಾರಸ್ಸುಗಳನ್ನು ಮಾಡತಕ್ಕದ್ದು; ಮತ್ತು

(vi) ಶಾಸನದ ಮೂಲಕ ನಿಯಮಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

40 **ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ.**- (1) ವಿಶ್ವವಿದ್ಯಾಲಯದ ಯೋಜನೆ ಮತ್ತು ಅಭಿವೃದ್ಧಿಯ ಬಗ್ಗೆ ಸಾಮಾನ್ಯವಾಗಿ ಸಲಹೆಯನ್ನು ನೀಡಲು ಹಾಗೂ ವಿಶ್ವವಿದ್ಯಾಲಯದಲ್ಲಿ ಶೈಕ್ಷಣಿಕ ಮತ್ತು ಸಂಶೋಧನೆಯ ಗುಣಮಟ್ಟಗಳ ಬಗ್ಗೆ ಪುನರ್ವಿಮರ್ಶಿಸಲು ಒಂದು ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿಯನ್ನು ಪ್ರಶಾಸನ ಸಭೆಯು ರಚಿಸತಕ್ಕದ್ದು.

(2) ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿಯು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(ಎ) ಕುಲಪತಿ - ಇವರು ಪದನಿಮಿತ್ತ ಅಧ್ಯಕ್ಷರಾಗಿರತಕ್ಕದ್ದು; ಮತ್ತು

(ಬಿ) ಪ್ರಶಾಸನ ಸಭೆಯಿಂದ ಎಂಟು ವ್ಯಕ್ತಿಗಳನ್ನು ಮೀರದಂತೆ ನಾಮನಿರ್ದೇಶಿತರಾದ ಶ್ರೇಷ್ಠ ವಿದ್ವಾಂಸರು.

(3) ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿಯು, ಈ ಅಧಿನಿಯಮದ ಮೂಲಕ ನಿಹಿತವಾದ ಇತರ ಎಲ್ಲಾ ಅಧಿಕಾರಗಳ ಜೊತೆಯಲ್ಲಿ ಯಾವುದೇ ಶೈಕ್ಷಣಿಕ ವಿಷಯಗಳ ಬಗ್ಗೆ ಪ್ರಶಾಸನ ಸಭೆಗೆ ಮತ್ತು ಪ್ರಶಿಕ್ಷಣ ಪರಿಷತ್ತಿಗೆ ಸಲಹೆಗಳನ್ನು ನೀಡಲು ಅಧಿಕಾರವನ್ನು ಹೊಂದಿರತಕ್ಕದ್ದು.

(4) ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿಯ ನಾಮನಿರ್ದೇಶಿತ ಸದಸ್ಯರ ಪದಾವಧಿಯು ಮೂರು ವರ್ಷಗಳಾಗಿರತಕ್ಕದ್ದು ಮತ್ತು ಅವರು ಮತ್ತೊಂದು ಅವಧಿಗೆ ಪುನರ್ ನಾಮನಿರ್ದೇಶನಕ್ಕೆ ಅರ್ಹರಾಗಿರತಕ್ಕದ್ದು.

41. **ಅಧ್ಯಯನ ಮಂಡಳಿ.**- (1) ಬೋಧನೆಯ ಅಥವಾ ಸಂಶೋಧನೆಯ ಪ್ರತಿಯೊಂದು ವಿಭಾಗಕ್ಕೆ ಲಗತ್ತಾದಂತೆ ಒಂದು ಅಧ್ಯಯನ ಮಂಡಳಿ ಇರತಕ್ಕದ್ದು.

(2) ಅಧ್ಯಯನ ಮಂಡಳಿಯ ರಚನೆ ಮತ್ತು ಅಧಿಕಾರಗಳು ಪ್ರಶಾಸನ ಸಭೆಯು ನಿಯಮಿಸಬಹುದಾದಂತೆ ಇರತಕ್ಕದ್ದು.

42. **ಇತರ ಪ್ರಾಧಿಕಾರಗಳು.**- ಪ್ರಶಾಸನ ಸಭೆಯು, ಅವಶ್ಯವಾಗಬಹುದಾದಂಥ ವಿಶ್ವವಿದ್ಯಾಲಯದ ಇತರ ಪ್ರಾಧಿಕಾರಗಳನ್ನು ರಚಿಸಬಹುದು ಮತ್ತು ಅವುಗಳ ರಚನೆಯ ವಿಧಾನವನ್ನು ಮತ್ತು ಪ್ರಕಾರ್ಯಗಳನ್ನು ಶಾಸನಗಳಲ್ಲಿ ನಿಯಮಿಸತಕ್ಕದ್ದು.

43. **ಸಮಿತಿಗಳು.**- ವಿಶ್ವವಿದ್ಯಾಲಯದ ಪ್ರತಿಯೊಂದು ಪ್ರಾಧಿಕಾರವು, ತನ್ನ ಪ್ರಕಾರ್ಯಗಳಲ್ಲಿ ಸಹಾಯ ಮಾಡಲು ಸಮಿತಿಗಳನ್ನು ರಚಿಸಲು ಅಥವಾ ಪುನರ್ ರಚಿಸಲು ಹಾಗೂ ಅವುಗಳಿಗೆ ತಾನು ಸೂಕ್ತವೆಂದು ಭಾವಿಸಬಹುದಾದಂಥ ತನ್ನ ಅಧಿಕಾರಗಳನ್ನು ಪ್ರತ್ಯಾಯೋಜಿಸಲು ಅಧಿಕಾರವನ್ನು ಹೊಂದಿರತಕ್ಕದು. ಅಂಥ ಸಮಿತಿಗಳು ಅನ್ಯಥಾ ಉಪಬಂಧಿಸಿರುವಂತೆ ಉಳಿದು ಸಂಬಂಧಿಸಿದ ಪ್ರಾಧಿಕಾರದ ಸದಸ್ಯರನ್ನು ಮತ್ತು ಪ್ರತಿಯೊಂದು ಸಂದರ್ಭದಲ್ಲಿ ಆ ಪ್ರಾಧಿಕಾರವು ನಿರ್ದೇಶಿಸಬಹುದಾದಂಥ ಇತರ ವ್ಯಕ್ತಿಗಳನ್ನು ಒಳಗೊಂಡಿರತಕ್ಕದ್ದು.

44. ಫ್ಯಾಕಲ್ಟಿಗಳು.- (1) ತನ್ನ ಉದ್ದೇಶಗಳನ್ನು ಮತ್ತು ಪ್ರಕಾರ್ಯಗಳನ್ನು ಗಮನದಲ್ಲಿರಿಸಿಕೊಂಡು ಪ್ರತಿಯೊಂದು ವ್ಯಾಸಂಗ ಮತ್ತು ಸಂಶೋಧನೆ ವಿಷಯಗಳಿಗಾಗಿ ಶಾಸನಗಳ ಮೂಲಕ ನಿಯಮಿಸಬಹುದಾದಂಥ ಫ್ಯಾಕಲ್ಟಿಗಳನ್ನು ವಿಶ್ವವಿದ್ಯಾಲಯವು ಹೊಂದಿರತಕ್ಕದ್ದು.

(2) ಪ್ರತಿಯೊಂದು ಫ್ಯಾಕಲ್ಟಿಯು ಶಾಸನಗಳಲ್ಲಿ ನಿಯಮಿಸಬಹುದಾದಂಥ ಬೋಧನೆಯ ವಿಭಾಗಗಳನ್ನು ಒಳಗೊಂಡಿರತಕ್ಕದ್ದು.

45. ಕುಲಪತಿ ಮತ್ತು ಇತರ ಅಧಿಕಾರಿಗಳು ಮುಂತಾದವರು, ಸಾರ್ವಜನಿಕ ನೌಕರರಾಗಿರತಕ್ಕದ್ದು.- ವಿಶ್ವವಿದ್ಯಾಲಯದ ಕುಲಪತಿ, ಕುಲಸಚಿವ, ಹಣಕಾಸು ಅಧಿಕಾರಿ, ಕುಲಸಚಿವ (ಮೌಲ್ಯಮಾಪನ) ಮತ್ತು ಇತರ ಉದ್ಯೋಗಿಗಳು, ಈ ಅಧಿನಿಯಮದ ಯಾವುವೇ ಉಪಬಂಧಗಳನ್ನು ಅನುಸರಿಸಿ ಕಾರ್ಯನಿರ್ವಹಿಸುತ್ತಿರುವಾಗ ಅಥವಾ ಕಾರ್ಯನಿರ್ವಹಿಸುತ್ತಿರುವರೆಂದು ತಾತ್ಪರ್ಯವಾಗುವಾಗ ಭಾರತ ದಂಡ ಸಂಹಿತೆಯ 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಸಾರ್ವಜನಿಕ ನೌಕರರು ಎಂಬುದಾಗಿ ಭಾವಿಸತಕ್ಕದ್ದು.

ಅಧ್ಯಾಯ V

ಶಾಸನಗಳು, ಪರ್ಯಾದೇಶಗಳು ಮತ್ತು ವಿನಿಯಮಗಳು

46. ಶಾಸನಗಳು.- ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಶಾಸನಗಳು ಈ ಮುಂದಿನ ಎಲ್ಲ ಅಥವಾ ಯಾವುವೇ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸಬಹುದು, ಎಂದರೆ:-

(1) ಪದವಿಗಳನ್ನು, ಡಿಪ್ಲೋಮಾಗಳನ್ನು ಮತ್ತು ಇತರ ವಿದ್ಯಾ ಪ್ರಶಸ್ತಿಗಳನ್ನು ಪ್ರದಾನ ಮಾಡುವ ಸಲುವಾಗಿ ಘಟಿಕೋತ್ಸವಗಳನ್ನು ನಡೆಸುವುದು;

(2) ಗೌರವ ಪದವಿಗಳನ್ನು ಮತ್ತು ಇತರ ಪ್ರಶಸ್ತಿಗಳನ್ನು ನೀಡುವುದು;

(3) ವಿಶ್ವವಿದ್ಯಾಲಯದ ಪ್ರಾಧಿಕಾರಗಳ ರಚನೆ, ಅಧಿಕಾರಗಳು ಮತ್ತು ಪ್ರಕಾರ್ಯಗಳು;

(4) ಪ್ರಾಧಿಕಾರಗಳ ಸದಸ್ಯರ ಸ್ಥಾನಗಳಲ್ಲಿ ಉಂಟಾದ ಖಾಲಿ ಸ್ಥಾನಗಳನ್ನು ಭರ್ತಿ ಮಾಡುವ ವಿಧಾನ;

(5) ಪ್ರಾಧಿಕಾರಗಳ ಮತ್ತು ಅದರ ಸಮಿತಿಗಳ ಸದಸ್ಯರುಗಳಿಗೆ ಸಂದಾಯವಾಗಬೇಕಾದ ಭತ್ಯೆಗಳು;

(6) ವಿಶ್ವವಿದ್ಯಾಲಯದ ಪ್ರಾಧಿಕಾರಗಳ ಸಭೆಗಳ ಕಾರ್ಯವಿಧಾನ ಮತ್ತು ಅಂಥ ಸಭೆಗಳಲ್ಲಿನ ಕಾರ್ಯಕಲಾಪ ನಡೆಸಲು ಇರಬೇಕಾದ ಕೋರಂ;

(7) ವಿಶ್ವವಿದ್ಯಾಲಯದ ಪ್ರಾಧಿಕಾರಗಳ ನಿರ್ಣಯಗಳ ಆದೇಶಗಳನ್ನು ದೃಢೀಕರಿಸುವುದು;

(8) ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ವಿಭಾಗಗಳ ರಚನೆ;

(9) ಕುಲಾಧಿಪತಿ ಮತ್ತು ಸಹಕುಲಾಧಿಪತಿಯವರುಗಳನ್ನು ಹೊರತುಪಡಿಸಿ, ವಿಶ್ವವಿದ್ಯಾಲಯದ ಅಧಿಕಾರಿಗಳ ಪದಾವಧಿ ಮತ್ತು ನೇಮಕಾತಿ ವಿಧಾನ ಮತ್ತು ಸೇವಾ ಷರತ್ತುಗಳು;

(10) ವಿಶ್ವವಿದ್ಯಾಲಯದಲ್ಲಿ ಮತ್ತು ಸಂಯೋಜಿತ ಕಾಲೇಜುಗಳಲ್ಲಿ ಅಥವಾ ಸಂಸ್ಥೆಗಳಲ್ಲಿ ನಿಯೋಜಿತರಾಗಿರುವ ಅಧ್ಯಾಪಕರ ಮತ್ತು ಇತರ ವ್ಯಕ್ತಿಗಳ ವಿದ್ಯಾರ್ಹತೆಗಳು;

(11) ವಿಶ್ವವಿದ್ಯಾಲಯದ ಮೂಲಕ ನಿಯೋಜಿತರಾಗಿರುವ ಅಧ್ಯಾಪಕರ ಮತ್ತು ಇತರ ವ್ಯಕ್ತಿಗಳ ವರ್ಗೀಕರಣ, ನೇಮಕಾತಿ ವಿಧಾನ ಮತ್ತು ಸೇವಾ ನಿಬಂಧನೆಗಳು ಹಾಗೂ ಷರತ್ತುಗಳ ನಿರ್ಧರಣೆ;

(12) ವಿಶ್ವವಿದ್ಯಾಲಯದ ಮೂಲಕ ನಿಯೋಜಿತರಾಗಿರುವ ಅಧಿಕಾರಿಗಳ, ಅಧ್ಯಾಪಕರ ಮತ್ತು ಇತರ ವ್ಯಕ್ತಿಗಳ ಪ್ರಯೋಜನಾರ್ಥವಾಗಿ ನಿವೃತ್ತಿ ವೇತನ, ಉಪದಾನ, ವಿಮೆ ಅಥವಾ ಭವಿಷ್ಯ ನಿಧಿಯನ್ನು ಪ್ರಾರಂಭಿಸುವುದು;

(13) ಫೆಲೋಶಿಪ್, ಸಂಚಾರಿ ಫೆಲೋಶಿವ್, ವಿದ್ಯಾರ್ಥಿ ವೇತನಗಳು, ಶಿಷ್ಯ ವೇತನಗಳು, ಪದಕಗಳು ಮತ್ತು ಬಹುಮಾನಗಳನ್ನು ಪ್ರಾರಂಭಿಸುವುದು ಮತ್ತು ಅವುಗಳನ್ನು ನೀಡುವುದಕ್ಕೆ ಸಂಬಂಧಪಟ್ಟ ಷರತ್ತುಗಳು;

(14) ವಿಶ್ವವಿದ್ಯಾಲಯಕ್ಕೆ ಕಾಲೇಜುಗಳ ಸಂಯೋಜನೆಗೆ ಸಂಬಂಧಿಸಿದ ಷರತ್ತುಗಳು;

(15) ಸ್ವಾಯತ್ತ ಕಾಲೇಜೆಂದು ಒಂದು ಕಾಲೇಜನ್ನು ನಾಮಾಂಕಿತಗೊಳಿಸುವ ವಿಧಾನ ಮತ್ತು ಅದಕ್ಕಾಗಿ ಪಾಲಿಸಬೇಕಾದ ಷರತ್ತುಗಳು ಹಾಗೂ ಹಾಗೆ ನಾಮಾಂಕಿತಗೊಳಿಸಿದ್ದನ್ನು ರದ್ದುಪಡಿಸಲು ಇರುವ ಷರತ್ತುಗಳು ಮತ್ತು ಅಧ್ಯಯನ ಮಂಡಳಿ ಹಾಗೂ ಪರೀಕ್ಷಾ ಮಂಡಳಿಗಳ ರಚನೆ ಅಥವಾ ಪುನಾರಚನೆ, ಅಧಿಕಾರ ಮತ್ತು ಕರ್ತವ್ಯಗಳು ಒಳಗೊಂಡಂತೆ ಸ್ವಾಯತ್ತ ಕಾಲೇಜುಗಳ ಆಡಳಿತಕ್ಕಾಗಿ ಪ್ರಾಸಂಗಿಕವಾದ ವಿಷಯಗಳು;

(16) ಪಡಸಾಲೆಗಳನ್ನು (ಹಾಲ್‌ಗಳನ್ನು) ಮತ್ತು ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು;

(17) ವಿಶ್ವವಿದ್ಯಾಲಯವು ನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳನ್ನು ಹೊರತುಪಡಿಸಿ ಇತರ ವಿದ್ಯಾರ್ಥಿನಿಲಯಗಳ ನಿಯಂತ್ರಣಕ್ಕಾಗಿ ಷರತ್ತುಗಳು;

(18) ಪಡಸಾಲೆಗಳಲ್ಲಿ ಮತ್ತು ವಿದ್ಯಾರ್ಥಿನಿಲಯಗಳಲ್ಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ನಿವಾಸಕ್ಕಾಗಿ ಷರತ್ತುಗಳು ಮತ್ತು ಅಂಥ ನಿವಾಸದ ಸಲುವಾಗಿ ಶುಲ್ಕಗಳು ಮತ್ತು ಇತರ ವೆಚ್ಚಗಳನ್ನು ವಿಧಿಸುವುದು;

(19) ಪದವೀಧರರನ್ನು ನೋಂದಣಿ ಮಾಡಿಕೊಳ್ಳುವುದಕ್ಕೆ ಸಂಬಂಧಿಸಿದ ಷರತ್ತುಗಳು ಮತ್ತು ಅದರ ರಿಜಿಸ್ಟರಿನ ನಿರ್ವಹಣೆ;

(20) ವಿಶ್ವವಿದ್ಯಾಲಯದ ಪ್ರಾಧಿಕಾರಗಳಲ್ಲಿ ಅಥವಾ ಅಧಿಕಾರಿಗಳಲ್ಲಿ ನಿಹಿತವಾದ ಅಧಿಕಾರಗಳ ಪ್ರತ್ಯಾಯೋಜನೆ; ಮತ್ತು

(21) ಶಾಸನಗಳ ಮೂಲಕ ನಿಯಮಿಸಬಹುದಾದಂಥ ಅಥವಾ ನಿಯಮಿಸಲು ಅಗತ್ಯಪಡಿಸಬಹುದಾದಂಥ ಯಾವುದೇ ಇತರ ವಿಷಯ.

47. **ಶಾಸನಗಳನ್ನು ರಚಿಸುವ ಬಗೆ.**- (1) ಪ್ರಶಾಸನ ಸಭೆಯು ಈ ಪ್ರಕರಣದಲ್ಲಿ ಇನ್ನು ಮುಂದೆ ಉಪಬಂಧಿಸಿದ ವಿಧಾನದಲ್ಲಿ ಕಾಲಕಾಲಕ್ಕೆ ಶಾಸನಗಳನ್ನು ರಚಿಸಬಹುದು ಹಾಗೂ ಅವುಗಳನ್ನು ತಿದ್ದುಪಡಿ ಮಾಡಬಹುದು ಅಥವಾ ನಿರಸನಗೊಳಿಸಬಹುದು.

(2) ಪ್ರಶಿಕ್ಷಣ ಪರಿಷತ್ತು ಅಥವಾ ಕುಲಪತಿಯವರು ಯಾವುವೇ ಶಾಸನಗಳ ಅಥವಾ ಅವುಗಳಿಗೆ ಮಾಡಬೇಕಾದ ಯಾವುವೇ ತಿದ್ದುಪಡಿಗಳನ್ನು ಅಥವಾ ಶಾಸನದ ನಿರಸನದ ಪ್ರಸ್ತಾವದ ಕರಡನ್ನು ಪ್ರಶಾಸನ ಸಭೆಯ ಅಂಗೀಕಾರಕ್ಕಾಗಿ ಸಲ್ಲಿಸಬಹುದು ಮತ್ತು ಅಂಥ ಕರಡನ್ನು ಪ್ರಶಾಸನ ಸಭೆ ತನ್ನ ಮುಂದಿನ ಸಭೆಯಲ್ಲಿ ಪರಿಗಣಿಸತಕ್ಕದ್ದು:

ಪರಂತು, ಕುಲಪತಿಯವರು ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಅಧಿಕಾರಗಳಿಗೆ ಮತ್ತು ರಚನೆಗೆ ಬಾಧಕವಾಗುವಂತೆ ಯಾವುವೇ ಶಾಸನಗಳಿಗೆ ಯಾವುವೇ ತಿದ್ದುಪಡಿಗಳನ್ನು ಮಾಡುವ ಪ್ರಸ್ತಾವಗಳನ್ನು, ಅಂಥ ಪ್ರಾಧಿಕಾರಕ್ಕೆ ತನ್ನ ಅಭಿಪ್ರಾಯವನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡದೇ ಮಂಡಿಸತಕ್ಕದ್ದಲ್ಲ ಮತ್ತು ಹಾಗೆ ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಪ್ರಶಾಸನ ಸಭೆ ಪರಿಗಣಿಸತಕ್ಕದ್ದು.

(3) ಪ್ರಶಿಕ್ಷಣ ಪರಿಷತ್ತು ಅಥವಾ ಕುಲಪತಿಯವರು (2)ನೇ ಉಪಪ್ರಕರಣದ ಅಡಿಯಲ್ಲಿ ಪ್ರಸ್ತಾವಿಸಿದ ಕರಡನ್ನು ಪ್ರಶಾಸನ ಸಭೆಯು ಪರಿಗಣಿಸಬಹುದು ಮತ್ತು ಆ ಕರಡನ್ನು ಅಂಗೀಕರಿಸಬಹುದು ಅಥವಾ ತಿರಸ್ಕರಿಸಬಹುದು ಅಥವಾ ತಿದ್ದುಪಡಿಗಳೊಡನೆ ಅಥವಾ ತಿದ್ದುಪಡಿಗಳಿಲ್ಲದೆ ಅದನ್ನು ಪುನರ್ ಪರಿಗಣನೆ ಮಾಡಲು ಸಂದರ್ಭಾನುಸಾರ ಪ್ರಶಿಕ್ಷಣ ಪರಿಷತ್ತಿಗೆ ಅಥವಾ ಕುಲಪತಿಯವರಿಗೆ ಹಿಂದಿರುಗಿಸಬಹುದು.

(4) (ಎ) ಪ್ರಶಾಸನ ಸಭೆಯ ಯಾವೊಬ್ಬ ಸದಸ್ಯನು, ಪ್ರಶಾಸನ ಸಭೆಗೆ ಕರಡು ಶಾಸನಗಳನ್ನು ಅಥವಾ ಶಾಸನಗಳ ತಿದ್ದುಪಡಿ ಅಥವಾ ನಿರಸನಕ್ಕಾಗಿ ಪ್ರಸ್ತಾವವನ್ನು ಸಲ್ಲಿಸಬಹುದು ಮತ್ತು ಪ್ರಶಾಸನ ಸಭೆಯು, ಆ ವಿಷಯವು ಪ್ರಶಿಕ್ಷಣ ಸಭೆಯ ಪರಿಮಿತಿಯಲ್ಲಿ ಬರುವಂತಹದಲ್ಲದಿದ್ದರೆ ಕರಡನ್ನು ಒಪ್ಪಿಕೊಳ್ಳಬಹುದು ಅಥವಾ ತಿರಸ್ಕರಿಸಬಹುದು.

(ಬಿ) ವಿಷಯವು ಪ್ರಶಿಕ್ಷಣ ಪರಿಷತ್ತಿನ ಪರಿಮಿತಿಯಲ್ಲಿ ಬರುತ್ತಿದ್ದರೆ ಅಂಥ ಕರಡನ್ನು ಪ್ರಶಾಸನ ಸಭೆಯು ಪ್ರಶಿಕ್ಷಣ ಪರಿಷತ್ತಿಗೆ ಪರಿಗಣನೆಗಾಗಿ ಕಳುಹಿಸತಕ್ಕದ್ದು. ಪ್ರಶಿಕ್ಷಣ ಪರಿಷತ್ತು, ಪ್ರಶಾಸನ ಸಭೆಗೆ ತಾನು ಕರಡನ್ನು ಒಪ್ಪಿಲ್ಲವೆಂದು ವರದಿ ಮಾಡಬಹುದು ಅಥವಾ ಪ್ರಶಿಕ್ಷಣ ಪರಿಷತ್ತು ಅಂಗೀಕರಿಸಬಹುದಾದ ರೂಪದಲ್ಲಿ ಕರಡನ್ನು ಪ್ರಶಾಸನ ಸಭೆಗೆ ಸಲ್ಲಿಸಬಹುದು ಮತ್ತು ಪ್ರಶಾಸನ ಸಭೆಯು ತಿದ್ದುಪಡಿ ಇಲ್ಲದೆ ಅಥವಾ ತಿದ್ದುಪಡಿಗಳೊಡನೆ ಕರಡನ್ನು ಅಂಗೀಕರಿಸಬಹುದು ಅಥವಾ ತಿರಸ್ಕರಿಸಬಹುದು.

(5) ಪ್ರಶಾಸನಸಭೆಯು, ಹಣಕಾಸಿನ ವಿಷಯಗಳನ್ನು ಒಳಗೊಂಡ ಶಾಸನಗಳ ಸಂಬಂಧದಲ್ಲಿ ಹಣಕಾಸು ಸಮಿತಿಯ ಅಭಿಪ್ರಾಯವನ್ನು ಪಡೆಯತಕ್ಕದ್ದು.

(6) ಪ್ರಶಾಸನ ಸಭೆಯು ಕರಡು ಶಾಸನಗಳ ಸಂಬಂಧದಲ್ಲಿ ಅವುಗಳನ್ನು ಪರಿಗಣಿಸುವುದಕ್ಕೆ ಮುಂಚೆ ತಾನು ಅವಶ್ಯವೆಂದು ಭಾವಿಸಿದರೆ, ವಿಶ್ವವಿದ್ಯಾಲಯದ ಯಾವೊಬ್ಬ ಅಧಿಕಾರಿಯ, ಪ್ರಾಧಿಕಾರದ ಅಥವಾ ನಿಕಾಯದ ಅಭಿಪ್ರಾಯವನ್ನು ಸಹ ಪಡೆಯಬಹುದು.

(7) ಪ್ರಶಾಸನ ಸಭೆಯು ಅಂಗೀಕರಿಸಿದ ಪ್ರತಿಯೊಂದು ಶಾಸನವನ್ನು, ತನ್ನ ನಿರ್ದಿಷ್ಟ ಶಿಫಾರಸ್ಸುಗಳೊಡನೆ ಅನುಮೋದನೆಗಾಗಿ ಕುಲಾಧಿಪತಿಯವರಿಗೆ ಒಪ್ಪಿಸುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(8) ರಾಜ್ಯ ಸರ್ಕಾರವು, ಕರಡು ಶಾಸನಗಳನ್ನು ಸ್ವೀಕರಿಸಿದ ಮೇಲೆ, ಅವುಗಳನ್ನು ಸ್ವೀಕರಿಸಿದ ದಿನಾಂಕದಿಂದ ಎರಡು ತಿಂಗಳುಗಳೊಳಗೆ ತನ್ನ ಟೀಕೆ ಟಿಪ್ಪಣಿಗಳು ಮತ್ತು ನಿರ್ದಿಷ್ಟ ಶಿಫಾರಸ್ಸುಗಳೊಡನೆ, ಅಂಥ ಕರಡು ಶಾಸನಗಳನ್ನು ಕುಲಾಧಿಪತಿಯವರಿಗೆ ಕಳುಹಿಸತಕ್ಕದ್ದು ಮತ್ತು ಕುಲಾಧಿಪತಿಯವರು, ರಾಜ್ಯ ಸರ್ಕಾರದಿಂದ

ಕರಡು ಶಾಸನಗಳನ್ನು ಸ್ವೀಕರಿಸಿದ ದಿನಾಂಕದಿಂದ ಎರಡು ತಿಂಗಳೊಳಗೆ ತನ್ನ ಅನುಮೋದನೆಯನ್ನು ನೀಡಬಹುದು ಅಥವಾ ಅದಕ್ಕೆ ತನ್ನ ಅನುಮೋದನೆಯನ್ನು ತಡೆಹಿಡಿಯಬಹುದು ಅಥವಾ ಅದನ್ನು ಮತ್ತಷ್ಟು ಪರಿಗಣನೆಗಾಗಿ ಪ್ರಶಾಸನ ಸಭೆಗೆ ಕಳುಹಿಸಬಹುದು.

(9) ಪ್ರಶಾಸನ ಸಭೆಯು ಅಂಗೀಕರಿಸಿದ ಶಾಸನಗಳನ್ನು ಕುಲಾಧಿಪತಿಯವರು ಅಮಮೋದಿಸುವವರೆಗೆ ಜಾರಿಗೊಳಿಸತಕ್ಕದ್ದಲ್ಲ.

48. ಪರ್ಯಾದೇಶಗಳು.- (1) ಈ ಅಧಿನಿಯಮದ ಮತ್ತು ಶಾಸನಗಳ ಉಪಬಂಧಗಳಿಗೆ ಒಳಪಟ್ಟು ಪರ್ಯಾದೇಶಗಳು ಈ ಮುಂದಿನ ಎಲ್ಲಾ ವಿಷಯಗಳಿಗೆ ಅಥವಾ ಅವುಗಳಲ್ಲಿ ಯಾವುದಕ್ಕಾದರೂ ಉಪಬಂಧ ಕಲ್ಪಿಸಬಹುದು, ಎಂದರೆ:-

(ಎ) ವಿದ್ಯಾರ್ಥಿಗಳಿಗೆ, ವಿಶ್ವವಿದ್ಯಾಲಯಕ್ಕೆ ಮತ್ತು ಅದರ ಸಂಯೋಜಿತ ಕಾಲೇಜುಗಳಿಗೆ ಪ್ರವೇಶ ನೀಡುವುದು ಮತ್ತು ವಿಶ್ವವಿದ್ಯಾಲಯ ಮತ್ತು ಕಾಲೇಜುಗಳಿಗೆ ಪ್ರವೇಶಕ್ಕಾಗಿ ಶುಲ್ಕ ವಿಧಿಸುವುದು;

(ಬಿ) ವಿಶ್ವವಿದ್ಯಾಲಯದ ಪದವಿಗಳು, ಡಿಪ್ಲೊಮಾಗಳು ಮತ್ತು ಇತರ ವಿದ್ಯಾ ಪ್ರಶಸ್ತಿಗಳನ್ನು ಪಡೆಯುವುದಕ್ಕಾಗಿ ವ್ಯಾಸಂಗ ಕ್ರಮಗಳು;

(ಸಿ) ವಿಶ್ವವಿದ್ಯಾಲಯದ ಪದವಿಗಳು, ಡಿಪ್ಲೊಮಾಗಳು ಮತ್ತು ಇತರ ವಿದ್ಯಾ ಪ್ರಶಸ್ತಿಗಳನ್ನು ಪಡೆಯಲು ವಿದ್ಯಾರ್ಥಿಗಳಿಗೆ ವ್ಯಾಸಂಗ ಕ್ರಮಕ್ಕೆ ಪ್ರವೇಶ ನೀಡುವ ಬಗೆಗಿನ ಷರತ್ತುಗಳು;

(ಡಿ) ವಿಶ್ವವಿದ್ಯಾಲಯದ ಪರೀಕ್ಷೆಗಳನ್ನು ನಡೆಸುವುದು ಮತ್ತು ವಿದ್ಯಾರ್ಥಿಗಳಿಗೆ ಅಂಥ ಪರೀಕ್ಷೆಗಳಿಗೆ ಪ್ರವೇಶ ನೀಡುವ ಬಗೆಗಿನ ಷರತ್ತುಗಳು;

(ಇ) ಪರೀಕ್ಷೆಗಳಿಗೆ ವಿದ್ಯಾರ್ಥಿಗಳು ಹಾಜರಾಗುವುದಕ್ಕೆ ಸಂಬಂಧಿಸಿದಂತೆ ವಿನಾಯಿತಿಯನ್ನು ನೀಡಬಹುದಾದಂಥ ರೀತಿ;

(ಎಫ್) ಪರೀಕ್ಷೆ ನಡೆಸುವ ನಿಕಾಯಗಳು ಮತ್ತು ಪರೀಕ್ಷಕರಿಗಾಗಿ ನೇಮಕಾತಿ ಷರತ್ತುಗಳು ಮತ್ತು ನೇಮಕಾತಿ ರೀತಿ ಹಾಗೂ ಅವರ ಕರ್ತವ್ಯಗಳು;

(ಜಿ) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಲ್ಲಿ ಶಿಸ್ತು ನಿರ್ವಹಣೆ;

(ಎಚ್) ವ್ಯಾಸಂಗ ಕ್ರಮಗಳು, ಸಂಶೋಧನೆ, ಪ್ರಯೋಗ ಮತ್ತು ಪ್ರಾಯೋಗಿಕ ತರಬೇತಿಗಾಗಿ ಹಾಗೂ ವಿಶ್ವವಿದ್ಯಾಲಯದ ಪದವಿಗಳ, ಡಿಪ್ಲೋಮಾಗಳ ಮತ್ತು ಇತರ ವಿದ್ಯಾ ಪ್ರಶಸ್ತಿಗಳ ಪರೀಕ್ಷೆಗಳಿಗೆ ಪ್ರವೇಶಾವಕಾಶಕ್ಕಾಗಿ ವಿಧಿಸಬೇಕಾದ ಫೀಜುಗಳು;

(ಐ) ಈ ಅಧಿನಿಯಮ ಅಥವಾ ಶಾಸನಗಳ ಪ್ರಕಾರ ಪರ್ಯಾದೇಶಗಳ ಮೂಲಕ ಉಪಬಂಧ ಕಲ್ಪಿಸಬೇಕಾದ ಅಥವಾ ಕಲ್ಪಿಸಬಹುದಾದ ಯಾವುದೇ ಇತರ ವಿಷಯ;

(2) ಪ್ರಶಿಕ್ಷಣ ಪರಿಷತ್ತು ಪ್ರಸ್ತಾಪಿಸಿದ ಯಾವುವೇ ಪರ್ಯಾದೇಶಗಳ ಕರಡನ್ನು ತಿದ್ದುಪಡಿ ಮಾಡಲು ಪ್ರಶಾಸನ ಸಭೆಗೆ ಅಧಿಕಾರವಿರತಕ್ಕದ್ದಲ್ಲ, ಆದರೆ, ಅದು ಪ್ರಸ್ತಾವವನ್ನು ತಿರಸ್ಕರಿಸಬಹುದು ಅಥವಾ ಪ್ರಶಾಸನ ಸಭೆಯು ಸೂಚಿಸಬಹುದಾದಂಥ ತಿದ್ದುಪಡಿಗಳೊಂದಿಗೆ, ಸಂಪೂರ್ಣವಾಗಿ ಅಥವಾ ಭಾಗಶಃ ಮರುಪರಿಶೀಲನೆಗಾಗಿ ಕರಡನ್ನು ಪ್ರಶಿಕ್ಷಣ ಪರಿಷತ್ತಿಗೆ ಹಿಂದಿರುಗಿಸಬಹುದು.

(3) ಪ್ರಶಾಸನ ಸಭೆಯು ರಚಿಸಿದ ಎಲ್ಲ ಪರ್ಯಾದೇಶಗಳು, ಅದು ನಿರ್ದೇಶಿಸಬಹುದಾದಂಥ ದಿನಾಂಕದಿಂದ ಜಾರಿಯಲ್ಲಿ ಬರತಕ್ಕದ್ದು. ಪ್ರತಿಯೊಂದು ಪರ್ಯಾದೇಶವನ್ನು ಕುಲಾಧಿಪತಿಯವರ ಪೂರ್ವಾನುಮೋದನೆಯೊಡನೆ ರಚಿಸತಕ್ಕದ್ದು:

ಪರಂತು, ರಾಜ್ಯ ಸಂಚಿತನಿಧಿಯಿಂದ ವೆಚ್ಚವನ್ನು ಪ್ರಸ್ತಾವಿಸುವ ಪರ್ಯಾದೇಶಗಳ ಸಂಬಂಧದಲ್ಲಿ, ಕುಲಾಧಿಪತಿಯವರು ತಮ್ಮ ಅನುಮೋದನೆಯನ್ನು ನೀಡುವ ಮೊದಲು ರಾಜ್ಯಸರ್ಕಾರದೊಡನೆ ಸಮಾಲೋಚಿಸತಕ್ಕದ್ದು.

(4) ಪ್ರಶಿಕ್ಷಣ ಪರಿಷತ್ತು ಪ್ರಸ್ತಾವಿಸಿದ ಒಂದು ಪರ್ಯಾದೇಶದ ಕರಡನ್ನು ಪ್ರಶಾಸನ ಸಭೆಯು ತಿರಸ್ಕರಿಸಿದಲ್ಲಿ, ಪ್ರಶಿಕ್ಷಣ ಪರಿಷತ್ತು, ಕುಲಾಧಿಪತಿಯವರಿಗೆ ಮೇಲ್ಮನವಿ ಮಾಡಿಕೊಳ್ಳಬಹುದು.

(5) ಕುಲಾಧಿಪತಿಯವರು, ಪ್ರಶಾಸನ ಸಭೆಯ ಟೀಕೆಟಿಪ್ಪಣಿಗಳನ್ನು ಪಡೆದ ತರುವಾಯ ಮೇಲ್ಮನವಿಯನ್ನು ತಿರಸ್ಕರಿಸಬಹುದು ಇಲ್ಲವೇ ಪ್ರಶಿಕ್ಷಣ ಪರಿಷತ್ತು ಪ್ರಸ್ತಾವಿಸಿದಂತೆ ಪರ್ಯಾದೇಶವನ್ನು ಅನುಮೋದಿಸಬಹುದು. ಅನಂತರ ಪರ್ಯಾದೇಶವನ್ನು ಪ್ರಶಾಸನ ಸಭೆಯು ರಚಿಸಿದ್ದರೆ ಹೇಗೋ ಹಾಗೆ ಅದು ಪರಿಣಾಮಕಾರಿಯಾಗಿರತಕ್ಕದ್ದು.

49. ವಿನಿಯಮಗಳು.– (1) ಪ್ರಶಿಕ್ಷಣ ಪರಿಷತ್ತು 34ನೇ ಪ್ರಕರಣದಲ್ಲಿ ನಮೂದಿಸಲಾದ ಎಲ್ಲಾ ಅಥವಾ ಯಾವುವೇ ಅಧಿಕಾರಗಳನ್ನು ಚಲಾಯಿಸಲು ಉಪಬಂಧಿಸುವುದಕ್ಕಾಗಿ ಮತ್ತು ವಿಶೇಷವಾಗಿ ಈ ಮುಂದಿನ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸುವುದಕ್ಕಾಗಿ ಈ ಅಧಿನಿಯಮ, ಶಾಸನಗಳು ಮತ್ತು ಪರ್ಯಾದೇಶಗಳಿಗೆ ಸುಸಂಗತವಾಗಿರುವ ವಿನಿಯಮಗಳನ್ನು ರಚಿಸಬಹುದು, ಎಂದರೆ:–

(ಎ) ವಿಶ್ವವಿದ್ಯಾಲಯಕ್ಕೆ ವಿದ್ಯಾರ್ಥಿಗಳ ಪ್ರವೇಶ;

(ಬಿ) ಇತರ ವಿಶ್ವವಿದ್ಯಾಲಯಗಳ ಪರೀಕ್ಷೆಗಳು ಮತ್ತು ಪದವಿಗಳನ್ನು, ವಿಶ್ವವಿದ್ಯಾಲಯದ ಪರೀಕ್ಷೆ ಮತ್ತು ಪದವಿಗಳಿಗೆ ಸಮನಾದುವೆಂದು ಮನ್ನಣೆ ನೀಡುವುದು;

(ಸಿ) ವಿಶ್ವವಿದ್ಯಾಲಯದ ವ್ಯಾಸಂಗ ಕ್ರಮಗಳು ಮತ್ತು ಪರೀಕ್ಷೆಗಳು ಮತ್ತು ವಿಶ್ವವಿದ್ಯಾಲಯದ ಅಥವಾ ಸಂಯೋಜನೆಗೊಂಡ ಕಾಲೇಜುಗಳ ಅಥವಾ ವಿಶ್ವವಿದ್ಯಾಲಯದ ಇತರ ಸಂಸ್ಥೆಗಳ ವಿದ್ಯಾರ್ಥಿಗಳನ್ನು ಯಾವ ಷರತ್ತುಗಳ ಮೇಲೆ ವಿಶ್ವವಿದ್ಯಾಲಯದ ಪರೀಕ್ಷೆಗಳು ಅಥವಾ ಪದವಿಗಳು, ಡಿಪ್ಲೋಮೋಗಳು ಮತ್ತು ಇತರ ಪ್ರಮಾಣ ಪತ್ರಗಳಿಗೆ ಸೇರಿಸಿಕೊಳ್ಳತಕ್ಕದ್ದೋ ಆ ಷರತ್ತುಗಳು;

(ಡಿ) ವಿನಾಯಿತಿಗಳನ್ನು ನೀಡುವುದು.

(2) ಪ್ರಶಿಕ್ಷಣ ಪರಿಷತ್ತು ಅಂಗೀಕರಿಸಿದ ಎಲ್ಲ ವಿನಿಯಮಗಳನ್ನು ಕುಲಾಧಿಪತಿಯವರ ಅನುಮೋದನೆಗಾಗಿ ಸಲ್ಲಿಸಲು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು. ರಾಜ್ಯ ಸರ್ಕಾರವು, ವಿಶ್ವವಿದ್ಯಾಲಯದಿಂದ ಸ್ವೀಕರಿಸಿದ ವಿನಿಯಮಗಳನ್ನು ಅವುಗಳನ್ನು ಸ್ವೀಕರಿಸಿದ ದಿನದಿಂದ ಎರಡು ತಿಂಗಳೊಳಗೆ ತನ್ನ ಟೀಕೆ ಟಿಪ್ಪಣಿಗಳೊಡನೆ ಕುಲಾಧಿಪತಿಯವರಿಗೆ ಕಳುಹಿಸತಕ್ಕದ್ದು. ಕುಲಾಧಿಪತಿಯವರು, ರಾಜ್ಯ ಸರ್ಕಾರದಿಂದ ಈ ವಿನಿಯಮಗಳನ್ನು ಸ್ವೀಕರಿಸಿದ ದಿನದಿಂದ ಒಂದು ತಿಂಗಳೊಳಗೆ ಅವುಗಳನ್ನು ಅನುಮೋದಿಸಬಹುದು ಅಥವಾ ಮತ್ತಷ್ಟು ಪರಿಶೀಲನೆಗಾಗಿ ಅವುಗಳನ್ನು ಪ್ರಶಿಕ್ಷಣ ಪರಿಷತ್ತಿಗೆ ಹಿಂದಿರುಗಿಸಬಹುದು.

(3) ಎಲ್ಲ ವಿನಿಯಮಗಳು, ಕುಲಾಧಿಪತಿಯವರು ಅವುಗಳನ್ನು ಅನುಮೋದಿಸಿದ ದಿನಾಂಕದಿಂದ ಅಥವಾ ಕುಲಾಧಿಪತಿಯವರು ನಿರ್ದೇಶಿಸಬಹುದಾದಂಥ ಇತರ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

ಅಧ್ಯಾಯ VI
ಹಣಕಾಸು ಮತ್ತು ಲೆಕ್ಕಪತ್ರಗಳು

50. ಸಾಮಾನ್ಯ ನಿಧಿಗಳು.– ವಿಶ್ವವಿದ್ಯಾಲಯವು ಒಂದು ಸಾಮಾನ್ಯ ನಿಧಿಯನ್ನು ಹೊಂದಿರತಕ್ಕದ್ದು ಮತ್ತು ಇದಕ್ಕೆ:–

(ಎ) ಶುಲ್ಕಗಳಿಂದ ತನಗೆ ಬಂದ ವರಮಾನವನ್ನು, ದತ್ತಿಗಳು ಮತ್ತು ಅನುದಾನಗಳೇನಾದರೂ ಇದ್ದಲ್ಲಿ ಅವನ್ನು;

(ಬಿ) ವಿಧಿಸಬಹುದಾದಂಥ ಷರತ್ತುಗಳ ಮೇಲೆ ಸರ್ಕಾರವು ನೀಡಿದ ವಂತಿಗೆಗಳನ್ನು ಅಥವಾ ಅನುದಾನಗಳನ್ನು;

(ಸಿ) ಕೇಂದ್ರ ಸರ್ಕಾರ, ವಿಶ್ವವಿದ್ಯಾಲಯ ಅನುದಾನ ಆಯೋಗ, ವಿಶ್ವ ಆರೋಗ್ಯ ಸಂಸ್ಥೆ, ಯೂನಿಸೆಫ್, ಮುಂತಾದ ಅಂತಾರಾಷ್ಟ್ರೀಯ ದಾನಿ ಏಜೆನ್ಸಿಗಳಿಂದ ಪಡೆದುಕೊಂಡ ಅನುದಾನಗಳನ್ನು,

–ಜಮೆ ಮಾಡತಕ್ಕದ್ದು.

51. ಇತರ ನಿಧಿಗಳು.– ವಿಶ್ವವಿದ್ಯಾಲಯವು, ಶಾಸನಗಳ ಮೂಲಕ ನಿಯಮಿಸಬಹುದಾದಂಥ ಇತರ ನಿಧಿಗಳನ್ನು ಹೊಂದಿರಬಹುದು.

52. ಸಾಲ ಪಡೆದುಕೊಳ್ಳುವ ಅಧಿಕಾರ.– ವಿಶ್ವವಿದ್ಯಾಲಯವು, ಶಾಸನಗಳ ಮೂಲಕ ನಿಯಮಿಸಬಹುದಾದ ಯಾವುದೇ ಉದ್ದೇಶಗಳಿಗಾಗಿ, ಒಂದು ಬ್ಯಾಂಕು ಅಥವಾ ನಿಗಮದಿಂದ ಹಣವನ್ನು ಸಾಲ ಪಡೆದುಕೊಳ್ಳಬಹುದು. ಸಾಲ ಪಡೆದುಕೊಂಡ ಹೆಣದ ಒಟ್ಟು ಮೊಬಲಗು ಐದು ಲಕ್ಷ ರೂಪಾಯಿಗಳನ್ನು ಮೀರುವಲ್ಲಿ, ಅಂಥ ಸಾಲಕ್ಕೆ ಸರ್ಕಾರದ ಪೂರ್ವ ಮಂಜೂರಾತಿಯನ್ನು ಪಡೆದುಕೊಳ್ಳತಕ್ಕದ್ದು.

53. ನಿಧಿಗಳ ನಿರ್ವಹಣೆ.– ವಿಶ್ವವಿದ್ಯಾಲಯದ ಎಲ್ಲ ನಿಧಿಗಳನ್ನು ಶಾಸನಗಳ ಮೂಲಕ ನಿಯಮಿಸಬಹುದಾದಂಥ ವಿಧಾನದಲ್ಲಿ ನಿರ್ವಹಿಸತಕ್ಕದ್ದು.

54. ಲೆಕ್ಕ ಪರಿಶೋಧನೆಗೆ ನಿರ್ದೇಶಿಸಲು ಸರ್ಕಾರದ ಅಧಿಕಾರ.– ಸರ್ಕಾರವು ಅವಶ್ಯಕವೆಂದು ಭಾವಿಸಿದಾಗಲೆಲ್ಲಾ ತಾನು ನಿರ್ದೇಶಿಸಬಹುದಾದಂಥ ಲೆಕ್ಕ ಪರಿಶೋಧಕರಿಂದ ವಿಶ್ವವಿದ್ಯಾಲಯದ ಲೆಕ್ಕಪತ್ರಗಳ ಲೆಕ್ಕಪರಿಶೋಧನೆ ನಡೆಸುವಂತೆ ಆದೇಶಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

55. ಹಣಕಾಸಿನ ಅಂದಾಜುಗಳು.– (1) ಕುಲಪತಿಯವರು, ನಿಯಮಿಸಬಹುದಾದಂಥ ದಿನಾಂಕದಂದು ಅಥವಾ ಅದಕ್ಕಿಂತ ಮೊದಲು, ಮುಂಬರುವ ವರ್ಷಕ್ಕಾಗಿ ವಿಶ್ವವಿದ್ಯಾಲಯದ ಹಣಕಾಸು ಅಂದಾಜುಗಳನ್ನು ಸಿದ್ಧಪಡಿಸುವಂತೆ ಮತ್ತು ಅದನ್ನು ಅನುಮೋದನೆಗಾಗಿ ಪ್ರಶಾಸನ ಸಭೆಯ ಮುಂದೆ ಇಡುವಂತೆ ಮಾಡತಕ್ಕದ್ದು.

(2) ಪ್ರಶಾಸನ ಸಭೆಯು ತಾನು ಸೂಕ್ತವೆಂದು ಭಾವಿಸುವಂಥ ಮಾರ್ಪಾಟುಗಳನ್ನು ಮಾಡಿ ಹಣಕಾಸು ಅಂದಾಜುಗಳನ್ನು ಅನುಮೋದಿಸಬಹುದು ಮತ್ತು ಪ್ರಶಾಸನ ಸಭೆ ಅನುಮೋದಿಸಿದ ಹಣಕಾಸು ಅಂದಾಜುಗಳಿಗನುಸಾರವಾಗಿ ಹೊರತು ಯಾವ ವೆಚ್ಚವನ್ನೂ ಮಾಡತಕ್ಕದ್ದಲ್ಲ.

56. ವಾರ್ಷಿಕ ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ.– (1) ಹಣಕಾಸು ಅಧಿಕಾರಿಯು, ಕುಲಪತಿಯವರ ನಿರ್ದೇಶನದ ಅಡಿಯಲ್ಲಿ ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕ-ಪತ್ರಗಳನ್ನು ಸಿದ್ಧಪಡಿಸತಕ್ಕದ್ದು ಮತ್ತು ಸರ್ಕಾರಕ್ಕೆ ಅದರ ಒಂದು ಪ್ರತಿಯನ್ನು ಕಳುಹಿಸತಕ್ಕದ್ದು.

(2) ಹದಿನೈದು ತಿಂಗಳುಗಳಿಗೆ ಕಡಿಮೆ ಇಲ್ಲದಂತಹ ಅಂತರಗಳಲ್ಲಿ ಕಡೆಯ ಪಕ್ಷ ವರ್ಷಕ್ಕೊಮ್ಮೆಯಾದರೂ, ರಾಜ್ಯ ಲೆಕ್ಕಪತ್ರಗಳ ನಿಯಂತ್ರಣಾಧಿಕಾರಿಯವರಿಂದ ವಿಶ್ವವಿದ್ಯಾಲಯದ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ನಡೆಸತಕ್ಕದ್ದು.

(3) ವಿಶ್ವವಿದ್ಯಾಲಯದ ಲೆಕ್ಕಪರಿಶೋಧಿತ ಲೆಕ್ಕಪತ್ರಗಳನ್ನು ಹಾಗೂ ಲೆಕ್ಕಪರಿಶೋಧಕರ ವರದಿಯನ್ನು, ಪ್ರಶಾಸನ ಸಭೆಯು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕದ್ದು ಮತ್ತು ಅದರ ಪ್ರತಿಗಳನ್ನು ರಾಜ್ಯವಿಧಾನ ಮಂಡಲದ ಮುಂದೆ ಮಂಡಿಸತಕ್ಕದ್ದು.

(4) ಪ್ರಶಿಕ್ಷಣ ಪರಿಷತ್ತು ತನ್ನ ವಾರ್ಷಿಕ ಸಭೆಯಲ್ಲಿ ವಾರ್ಷಿಕ ಲೆಕ್ಕಪತ್ರಗಳನ್ನು ಪರಿಶೀಲಿಸತಕ್ಕದ್ದು. ಪ್ರಶಿಕ್ಷಣ ಪರಿಷತ್ತು ಇದಕ್ಕೆ ಸಂಬಂಧ ಪಟ್ಟಂತೆ ನಿರ್ಣಯಗಳನ್ನು ಹೊರಡಿಸಬಹುದು ಮತ್ತು ಅದನ್ನು ಪ್ರಶಾಸನ ಸಭೆಗೆ ತಿಳಿಸಬಹುದು. ಪ್ರಶಿಕ್ಷಣ ಪರಿಷತ್ತು ಮಾಡಿದ ಸಲಹೆಗಳನ್ನು ಪ್ರಶಾಸನ ಸಭೆಯು ಪರಿಶೀಲನೆಗೆ ತೆಗೆದುಕೊಳ್ಳತಕ್ಕದ್ದು ಮತ್ತು ತಾನು ಸೂಕ್ತವೆಂದು ಆಲೋಚಿಸಬಹುದಾದ ಕ್ರಮಗಳನ್ನು ಅದರ ಮೇಲೆ ತೆಗೆದುಕೊಳ್ಳತಕ್ಕದ್ದು. ಪ್ರಶಾಸನ ಸಭೆಯು ತಾನು ತೆಗೆದುಕೊಂಡ ಕ್ರಮಗಳ ಬಗ್ಗೆ ಅಥವಾ ಕ್ರಮಕೈಗೊಳ್ಳದಿರುವ ಬಗ್ಗೆ ಕಾರಣಗಳನ್ನು ತನ್ನ ಮುಂದಿನ ಸಭೆಯಲ್ಲಿ ಪ್ರಶಿಕ್ಷಣ ಪರಿಷತ್ತಿಗೆ ತಿಳಿಸತಕ್ಕದ್ದು.

57. ವಾರ್ಷಿಕ ವರದಿ.- (1) ಪ್ರಶಾಸನ ಸಭೆಯು ಪ್ರತಿಯೊಂದು ಹಣಕಾಸು ವರ್ಷಕ್ಕೆ, ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ವಿವರಗಳನ್ನು ಒಳಗೊಂಡ ವಾರ್ಷಿಕ ವರದಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಶಾಸನಗಳ ಮೂಲಕ ನಿಯಮಿಸಬಹುದಾದಂಥ ದಿನಾಂಕಗಳಂದು ಅಥವಾ ಅದಕ್ಕೆ ಮೊದಲು ಪ್ರಶಿಕ್ಷಣ ಪರಿಷತ್ತಿಗೆ ಸಲ್ಲಿಸತಕ್ಕದ್ದು. ಪ್ರಶಿಕ್ಷಣ ಪರಿಷತ್ತು ಅವುಗಳ ಮೇಲೆ ನಿರ್ಣಯಗಳನ್ನು ಹೊರಡಿಸಬಹುದು ಮತ್ತು ಪ್ರಶಾಸನ ಸಭೆಯು ಅದಕ್ಕನುಸಾರವಾಗಿ ಕ್ರಮಕೈಗೊಳ್ಳತಕ್ಕದ್ದು. ಕೈಗೊಳ್ಳಲಾದ ಕ್ರಮವನ್ನು ಪ್ರಶಿಕ್ಷಣ ಪರಿಷತ್ತಿಗೆ ತಿಳಿಸತಕ್ಕದ್ದು.

(2) ವಾರ್ಷಿಕ ವರದಿಯ ಪ್ರತಿಗಳನ್ನು ಹಾಗೂ ಅವುಗಳ ಮೇಲಿನ ಪ್ರಶಾಸನ ಸಭೆಯ ನಿರ್ಣಯಗಳನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಅವುಗಳನ್ನು ಮಂಡಿಸತಕ್ಕದ್ದು.

ಅಧ್ಯಾಯ VII

ಕಾಲೇಜುಗಳ ಸಂಯೋಜನೆ ಮತ್ತು ಸಂಸ್ಥೆಗಳಿಗೆ ಮಾನ್ಯತೆ ನೀಡುವುದು

58. ಕಾಲೇಜುಗಳ ಸಂಯೋಜನೆ.- (1) ವಿಶ್ವವಿದ್ಯಾಲಯದ ಪ್ರದೇಶದೊಳಗೆ ಬರುವ ಕಾಲೇಜುಗಳನ್ನು, ಈ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಷರತ್ತುಗಳನ್ನು ಪೂರೈಸಿದ ಮೇಲೆ, ರಾಜ್ಯ ಸರ್ಕಾರವು ಮಾಡಿದ ಶಿಫಾರಸುಗಳ ಮೇಲೆ ವಿಶ್ವವಿದ್ಯಾಲಯಕ್ಕೆ ಸಂಯೋಜಿತವಾದ ಕಾಲೇಜುಗಳೆಂಬುದಾಗಿ ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಳಿಸಬಹುದು.

(2) ವಿಶ್ವವಿದ್ಯಾಲಯಕ್ಕೆ ಸಂಯೋಜನೆಗಾಗಿ ಅರ್ಜಿಯನ್ನು ಸಲ್ಲಿಸುವ ಕಾಲೇಜು, ಪರ್ಯಾದೇಶಗಳ ಮೂಲಕ ನಿಗದಿಪಡಿಸಲಾದ ಕಾಲಮಿತಿಯೊಳಗೆ ಕುಲಸಚಿವರಿಗೆ ಅರ್ಜಿಯನ್ನು ಕಳಿಸತಕ್ಕದ್ದು ಮತ್ತು ಪ್ರಶಾಸನ ಸಭೆಗೆ ಮತ್ತು ಪ್ರಶಿಕ್ಷಣ ಪರಿಷತ್ತಿಗೆ,-

(ಎ) ಆ ಕಾಲೇಜು ನೀಡಲು ಉದ್ದೇಶಿಸಿದ ಶಿಕ್ಷಣದ ಮಾದರಿಯನ್ನು, ನೆರೆಹೊರೆಯಲ್ಲಿ ಈಗಿರುವ ಏರ್ಪಾಟು ಮತ್ತು ಕಾಲೇಜನ್ನು ಯಾವ ಸ್ಥಳದಲ್ಲಿ ಸ್ಥಾಪಿಸಬೇಕಾಗಿದೆಯೋ ಆ ಸ್ಥಳದ

ಸೂಕ್ತತೆಯನ್ನು ಗಮನದಲ್ಲಿಟ್ಟುಕೊಂಡು, ಆ ಕಾಲೇಜು ಸ್ಥಳೀಯ ಅವಶ್ಯಕತೆಯನ್ನು ಪೂರೈಸುತ್ತದೆಯೆಂದು;

(ಬಿ) ಅದು ಕ್ರಮಬದ್ಧವಾಗಿ ರಚಿಸಲಾದ ಆಡಳಿತ ಮಂಡಳಿಯ ನಿರ್ವಹಣೆಗೆ ಒಳಪಟ್ಟಿರುತ್ತದೆಂದು;

(ಸಿ) ಬೋಧನಾ ಸಿಬ್ಬಂದಿಯ ಸಂಖ್ಯೆ ಹಾಗೂ ವಿದ್ಯಾರ್ಹತೆಗಳು ಮತ್ತು ಅವರ ಪದಾವಧಿಯನ್ನು ನಿಯಂತ್ರಿಸುವ ಷರತ್ತುಗಳು, ಆ ಕಾಲೇಜಿನಲ್ಲಿ ಕೈಗೊಳ್ಳಬೇಕಾದ ಶಿಕ್ಷಣ ವ್ಯಾಸಂಗ ಕ್ರಮಗಳು, ಬೋಧನೆ ಅಥವಾ ತರಬೇತಿಗೆ ಸೂಕ್ತ ಅವಕಾಶವನ್ನು ಕಲ್ಪಿಸುವಂತಿವೆಯೆಂದು;

(ಡಿ) ಯಾವ ಕಟ್ಟಡದಲ್ಲಿ ಆ ಕಾಲೇಜು ಇರಬೇಕಾಗಿದೆಯೋ ಆ ಕಟ್ಟಡವು ಸೂಕ್ತವಾಗಿದೆಯೆಂದು ಮತ್ತು ತಂದೆ-ತಾಯಿಗಳೊಂದಿಗೆ ಅಥವಾ ಪಾಲಕರೊಡನೆ ವಾಸಿಸದ ವಿದ್ಯಾರ್ಥಿಗಳಿಗೆ ಆ ಕಾಲೇಜಿನಲ್ಲಿ ಅಥವಾ ಆ ಕಾಲೇಜು ಅನುಮೋದಿಸುವ ವಸತಿ ಗೃಹದಲ್ಲಿ ನಿವಾಸಕ್ಕಾಗಿ ಮತ್ತು ವಿದ್ಯಾರ್ಥಿಗಳ ಮೇಲ್ವಿಚಾರಣೆ ಹಾಗೂ ಕಲ್ಯಾಣಕ್ಕಾಗಿ ಪರ್ಯಾಪ್ತ ಏರ್ಪಾಟನ್ನು ಮಾಡಲಾಗುವುದೆಂದು;

(ಇ) ಗ್ರಂಥಾಲಯಕ್ಕಾಗಿ ಸೂಕ್ತ ವ್ಯವಸ್ಥೆ ಮಾಡಲಾಗಿದೆ ಅಥವಾ ಮಾಡಲಾಗುವುದೆಂದು,

(ಎಫ್) ಪ್ರಾಚಾರ್ಯರು ಮತ್ತು ಬೋಧಕ ಸಿಬ್ಬಂದಿ ಸದಸ್ಯರ ನಿವಾಸಕ್ಕಾಗಿ ಕಾಲೇಜಿನಲ್ಲಿ ಅಥವಾ ವಿದ್ಯಾರ್ಥಿಗಳ ನಿವಾಸಕ್ಕಾಗಿ ಒದಗಿಸಲಾದ ಸ್ಥಳದಲ್ಲಿ ಅಥವಾ ಅದರ ಹತ್ತಿರ, ಸನ್ನಿವೇಶಗಳು ಅನುಮತಿಸುವಷ್ಟರಮಟ್ಟಿಗೆ ಸೂಕ್ತ ಏರ್ಪಾಟನ್ನು ಮಾಡಲಾಗುವುದೆಂದು,

(ಜಿ) ಆ ಕಾಲೇಜಿನ ಹಣಕಾಸಿನ ಸಂಪನ್ಮೂಲಗಳು, ಅದರ ನಿರಂತರ ನಿರ್ವಹಣೆ ಮತ್ತು ದಕ್ಷ ಕಾರ್ಯನಿರ್ವಹಣೆಗೆ ಸೂಕ್ತ ಏರ್ಪಾಟನ್ನು ಮಾಡಲು ತಕ್ಕಷ್ಟಿವೆಯೆಂದು; ಮತ್ತು

(ಎಚ್) ವಿದ್ಯಾರ್ಥಿಗಳು ಸಂದಾಯ ಮಾಡಬೇಕಾದ ಶುಲ್ಕಗಳೇನಾದರೂ ಇದ್ದಲ್ಲಿ, ಅವುಗಳನ್ನು ನಿಗದಿಪಡಿಸುವ ಪರ್ಯಾಪ್ತ ದೇಶಗಳನ್ನು ರೂಪಿಸಲಾಗಿದೆಯೆಂದು ಅಥವಾ ರೂಪಿಸಲಾಗುವುದೆಂದು.

– ಮನದಟ್ಟುಮಾಡಿಕೊಡತಕ್ಕದ್ದು.

(3) ಕಾಲೇಜು ಸಂಯೋಜನೆಗೊಂಡ ತರುವಾಯ, ಆಡಳಿತದ ಯಾವುದೇ ವರ್ಗಾವಣೆಯನ್ನು ಮತ್ತು ಬೋಧಕ ಸಿಬ್ಬಂದಿಯಲ್ಲಿನ ಎಲ್ಲ ಬದಲಾವಣೆಗಳನ್ನು ಮತ್ತು ಈ ಹಿಂದೆ ಹೇಳಿದ ಯಾವುವೇ ಅಗತ್ಯತೆಗಳನ್ನು ಪೂರೈಸದಂತೆ ಮಾಡುವ ಅಥವಾ ಪೂರೈಸಬೇಕಾಗಿಯೇ ಮುಂದುವರಿಯುವಂತೆ ಮಾಡುವ ಎಲ್ಲ ಇತರ ಬದಲಾವಣೆಗಳನ್ನು ಪ್ರಶಾಸನ ಸಭೆಗೆ ಮತ್ತು ಸರ್ಕಾರಕ್ಕೆ ಅಥವಾ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಇತರ ಪ್ರಾಧಿಕಾರಕ್ಕೆ ಕೂಡಲೇ ವರದಿ ಮಾಡುವ ಭರವಸೆಯನ್ನೂ ಸಹ ಅರ್ಜಿಯು ಒಳಗೊಂಡಿರತಕ್ಕದ್ದು.

(4) (2)ನೇ ಉಪ-ಪ್ರಕರಣದಡಿ ಅರ್ಜಿಯನ್ನು ಸ್ವೀಕರಿಸಿದ ತರುವಾಯ, ಪ್ರಶಾಸನ ಸಭೆಯು,–

(ಎ) ಅವಶ್ಯಕ ಹಾಗೂ ಸುಸಂಗತವೆಂದು ಭಾವಿಸಬಹುದಾದಂಥ ವಿಷಯಗಳಿಗೆ ಸಂಬಂಧಿಸಿದಂತೆ ಈ ಬಗ್ಗೆ ಪ್ರಶಾಸನ ಸಭೆಯಿಂದ ಅಧಿಕೃತನಾದ ಸಕ್ಷಮ ವ್ಯಕ್ತಿ ಅಥವಾ ವ್ಯಕ್ತಿಗಳಿಂದ ಸ್ಥಳೀಯ ವಿಚಾರಣೆ ನಡೆಸಬೇಕೆಂದು ನಿರ್ದೇಶಿಸತಕ್ಕದ್ದು;

(ಬಿ) ತನಗೆ ಅವಶ್ಯಕವೆಂದು ಕಂಡುಬರಬಹುದಾದಂಥ ಹೆಚ್ಚಿನ ವಿಚಾರಣೆಯನ್ನು ಮಾಡತಕ್ಕದ್ದು; ಮತ್ತು

(ii) (ಎ) ಮತ್ತು (ಬಿ) ಎಂಡಗಳಡಿಯ ಯಾವುದೇ ವಿಚಾರಣೆಯ ಫಲಿತಾಂಶವನ್ನು ನಿರೂಪಿಸಿ, ಅರ್ಜಿಯನ್ನು ಸಂಪೂರ್ಣವಾಗಿ ಅಥವಾ ಭಾಗತಃ ಮಂಜೂರು ಮಾಡಬೇಕೆ ಅಥವಾ ತಿರಸ್ಕರಿಸಬೇಕೆ ಎಂಬ ಪ್ರಶ್ನೆಯ ಮೇಲೆ ಪ್ರಶಿಕ್ಷಣ ಪರಿಷತ್ತಿನೊಡನೆ ಸಮಾಲೋಚಿಸಿದ ತರುವಾಯ ತನ್ನ ಅಭಿಪ್ರಾಯಗಳನ್ನು ದಾಖಲುಮಾಡತಕ್ಕದ್ದು.

(5) ಕುಲಸಚಿವರು, ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂಥ ಸಮಯದೊಳಗೆ ಅರ್ಜಿಯನ್ನು ಮತ್ತು ಅದಕ್ಕೆ ಸಂಬಂಧಿಸಿದ ಪ್ರಶಿಕ್ಷಣ ಪರಿಷತ್ತಿನ ಮತ್ತು ಪ್ರಶಾಸನ ಸಭೆಯ ವ್ಯವಹರಣೆಗಳೇನಾದರೂ ಇದ್ದಲ್ಲಿ, ಅವುಗಳೆಲ್ಲವನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಸರ್ಕಾರವು ತನಗೆ ಅವಶ್ಯಕವೆಂದು ಕಂಡುಬರಬಹುದಾದಂಥ ವಿಚಾರಣೆಯನ್ನು ನಡೆಸಿದ ತರುವಾಯ, ಅರ್ಜಿಯನ್ನು ಅಥವಾ ಅದರ ಯಾವುದೇ ಭಾಗವನ್ನು ಮಂಜೂರು ಮಾಡುವುದಕ್ಕೆ ಶಿಫಾರಸು ಮಾಡತಕ್ಕದ್ದು ಅಥವಾ ಅರ್ಜಿಯನ್ನು ಅಥವಾ ಅದರ ಭಾಗವನ್ನು ತಿರಸ್ಕರಿಸತಕ್ಕದ್ದು ಮತ್ತು ವಿಶ್ವವಿದ್ಯಾಲಯವು ಅದಕ್ಕನುಸಾರವಾಗಿ ಆದೇಶಗಳನ್ನು ಹೊರಡಿಸತಕ್ಕದ್ದು.

(6) ಅರ್ಜಿಗೆ ಅಥವಾ ಅದರ ಯಾವುದೇ ಭಾಗಕ್ಕೆ ಮಂಜೂರಾತಿ ನೀಡಿರುವಲ್ಲಿ, ಯಾವ ಶಿಕ್ಷಣದ ವ್ಯಾಸಂಗ ಕ್ರಮಗಳ ಸಂಬಂಧದಲ್ಲಿ ಮತ್ತು ಯಾವ ಅವಧಿಗಾಗಿ ಕಾಲೇಜು ಸಂಯೋಜನೆಗೊಂಡಿದೆ ಎಂಬುದನ್ನು ವಿಶ್ವವಿದ್ಯಾಲಯದ ಆದೇಶವು ನಿರ್ದಿಷ್ಟಪಡಿಸತಕ್ಕದ್ದು ಮತ್ತು ಸರ್ಕಾರವು ಅಥವಾ ವಿಶ್ವವಿದ್ಯಾಲಯವು ಅರ್ಜಿಯನ್ನು ಅಥವಾ ಅದರ ಯಾವುದೇ ಭಾಗವನ್ನು ತಿರಸ್ಕರಿಸಿರುವಲ್ಲಿ, ವಿಶ್ವವಿದ್ಯಾಲಯದ ಆದೇಶವು ಆ ಬಗ್ಗೆ ಕಾರಣಗಳನ್ನು ತಿಳಿಸತಕ್ಕದ್ದು:

ಪರಂತು, ಐದು ವರ್ಷಗಳಿಗೆ ಕಡಿಮೆ ಇಲ್ಲದ ಅವಧಿಗೆ ನಿರಂತರವಾಗಿ ಸಂಯೋಜನೆಗೊಂಡಿರುವ ಮತ್ತು ಸಂಯೋಜನೆಯ ಎಲ್ಲ ಷರತ್ತುಗಳನ್ನು ಪೂರೈಸಿರುವ ಮತ್ತು ಕಾಲಕಾಲಕ್ಕೆ ವಿಶ್ವವಿದ್ಯಾಲಯವು ನಿಯಮಿಸಿದ ವಿದ್ಯಾವಿಷಯಕ ಮತ್ತು ಆಡಳಿತಾತ್ಮಕ ಗುಣಮಟ್ಟಗಳನ್ನು ಸಾಧಿಸಿರುವ ಕಾಲೇಜಿಗೆ ಸರ್ಕಾರದ ಶಿಫಾರಸಿನ ಮೇಲೆ ಖಾಯಂ ಸಂಯೋಜನೆಯನ್ನು ಮಂಜೂರು ಮಾಡಬಹುದು.

(7) ಸರ್ಕಾರವು ಅಥವಾ ವಿಶ್ವವಿದ್ಯಾಲಯವು ತನ್ನ ಆದೇಶವನ್ನು ಮಾಡಿದ ತರುವಾಯ ಸಾಧ್ಯವಾದಷ್ಟು ಬೇಗನೆ, ಕುಲಸಚಿವರು, ಅರ್ಜಿಯ ಬಗ್ಗೆ, (4) ಮತ್ತು (6) ನೇ ಉಪ-ಪ್ರಕರಣಗಳಡಿ ಅದರ ಮೇಲೆ ಕೈಗೊಂಡ ಕ್ರಮ ಮತ್ತು ಅದಕ್ಕೆ ಸಂಬಂಧಪಟ್ಟ ಎಲ್ಲ ವ್ಯವಹರಣೆಗಳ ಬಗ್ಗೆ ಸಂಪೂರ್ಣ ವರದಿಯನ್ನು ಪ್ರಶಿಕ್ಷಣ ಪರಿಷತ್ತಿಗೆ ಸಲ್ಲಿಸತಕ್ಕದ್ದು.

(8) (1)ನೇ ಉಪ-ಪ್ರಕರಣದಡಿಯ ಅರ್ಜಿಯನ್ನು (5)ನೇ ಉಪ-ಪ್ರಕರಣದಡಿ ಆದೇಶವನ್ನು ಮಾಡುವುದಕ್ಕೆ ಮೊದಲಿನ ಯಾವುದೇ ಸಮಯದಲ್ಲಿ ಹಿಂತೆಗೆದುಕೊಳ್ಳಬಹುದು.

(9) ಯಾವ ವ್ಯಾಸಂಗ ಕ್ರಮದ ಸಂಬಂಧದಲ್ಲಿ ಕಾಲೇಜು ಸಂಯೋಜನೆಗೊಂಡಿದೆಯೋ ಆ ವ್ಯಾಸಂಗ ಕ್ರಮಗಳಿಗೆ ಇನ್ನಷ್ಟು ವ್ಯಾಸಂಗ ಕ್ರಮಗಳನ್ನು ಸೇರಿಸಲು ಆ ಕಾಲೇಜು ಅಪೇಕ್ಷಿಸಿದಲ್ಲಿ, (2)ರಿಂದ (8)ನೇ ಉಪ-ಪ್ರಕರಣಗಳಲ್ಲಿ ನಿಯಮಿಸಲಾದ ಕಾರ್ಯ ವಿಧಾನಗಳನ್ನು ಸಾಧ್ಯವಾದಷ್ಟು ಮಟ್ಟಿಗೆ, ಅನುಸರಿಸತಕ್ಕದ್ದು.

(10)(ಎ) ವಿಶ್ವವಿದ್ಯಾಲಯಕ್ಕೆ ಸಂಯೋಜನೆಯನ್ನು ಕೋರುವ ಯಾವುದೇ ಹೊಸ ಕಾಲೇಜು ಅಥವಾ ಅಂಥ ವ್ಯಾಸಂಗ ಕ್ರಮಗಳಿಗೆ ಹೊಸ ವ್ಯಾಸಂಗ ಕ್ರಮಗಳನ್ನು ಸೇರಿಸಲು ಸಂಯೋಜನೆಯನ್ನು ಕೋರುವ ಈಗಾಗಲೇ ಅಸ್ತಿತ್ವದಲ್ಲಿರುವ ಕಾಲೇಜು, ಸಂದರ್ಭಾನುಸಾರವಾಗಿ ಅಂಥ ಹೊಸ ಕಾಲೇಜಿಗೆ ಅಥವಾ ಅಂಥ ವ್ಯಾಸಂಗ ಕ್ರಮಕ್ಕೆ ಸಂಬಂಧಪಟ್ಟಂತೆ ಅಸ್ತಿತ್ವದಲ್ಲಿರುವ ಕಾಲೇಜಿಗೆ

ಸಂಯೋಜನೆಯನ್ನು ಮಂಜೂರು ಮಾಡಿದ ಹೊರತು, ಆ ವ್ಯಾಸಂಗ ಕ್ರಮಕ್ಕೆ ವಿದ್ಯಾರ್ಥಿಗಳಿಗೆ ಪ್ರವೇಶ ನೀಡತಕ್ಕದ್ದಲ್ಲ;

(ಬಿ) ಒಂದು ವ್ಯಾಸಂಗ ಕ್ರಮಕ್ಕೆ ಸೇರಿಸಿಕೊಳ್ಳಬೇಕಾದ ವಿದ್ಯಾರ್ಥಿಗಳ ಗರಿಷ್ಠ ಸಂಖ್ಯೆಯು, ವಿಶ್ವವಿದ್ಯಾಲಯ ಅಥವಾ ಸರ್ಕಾರವು ಹಾಗೆ ಸೇರಿಸಿಕೊಳ್ಳಲು ನಿಗದಿಪಡಿಸಿದ ಸಂಖ್ಯೆಯನ್ನು ಮೀರತಕ್ಕದ್ದಲ್ಲ ಮತ್ತು ಸೇರಿಸಿಕೊಳ್ಳಬೇಕಾದ ಸಂಖ್ಯೆಗಿಂತ ಹೆಚ್ಚಿಗೆಯಾಗಿ ಮಾಡಿಕೊಂಡ ಯಾವುದೇ ಪ್ರವೇಶವು ಅನೂರ್ಜಿತವಾಗತಕ್ಕದ್ದು;

(ಸಿ) (ಬಿ) ಖಂಡದಡಿ ಯಾವ ವಿದ್ಯಾರ್ಥಿಯ ಪ್ರವೇಶವು ಅನೂರ್ಜಿತವಾಗಿದೆಯೋ ಆ ಯಾವೊಬ್ಬ ವಿದ್ಯಾರ್ಥಿಯು ವಿಶ್ವವಿದ್ಯಾಲಯವು ನಡೆಸುವ ಯಾವುದೇ ಪರೀಕ್ಷೆಗೆ ಹಾಜರಾಗಲು ಅರ್ಹನಾಗಿರತಕ್ಕದ್ದಲ್ಲ ಅಥವಾ ಆ ಕಾಲೇಜು ಅವನಿಗೆ ಪರೀಕ್ಷೆಗೆ ಹಾಜರಾಗಲು ಅನುಮತಿಸತಕ್ಕದ್ದಲ್ಲ.

59. ಕೆಲವು ಸಂಸ್ಥೆಗಳಿಗೆ ಮಾನ್ಯತೆ.- (1) ಸಂಶೋಧನೆ ಅಥವಾ ನಿರ್ದಿಷ್ಟಪಡಿಸಿದ ಅಧ್ಯಯನಗಳನ್ನು ನಡೆಸುವ ಕಾಲೇಜುಗಳನ್ನು ಹೊರತುಪಡಿಸಿ, ವಿಶ್ವವಿದ್ಯಾಲಯ ಪ್ರದೇಶದ ಒಳಗೆ ಅಥವಾ ಹೊರಗೆ ಇರುವ ಯಾವುದೇ ಸಂಸ್ಥೆಯನ್ನು, ಶಾಸನಗಳ ಮೂಲಕ ನಿಯಮಿಸಬಹುದಾದಂಥ ಉದ್ದೇಶಕ್ಕಾಗಿ ಮತ್ತು ಅಂಥ ವಿಧಾನದಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು, ಮಾನ್ಯತೆ ಪಡೆದ ಸಂಸ್ಥೆಯೆಂದು ಪ್ರಶಾಸನ ಸಭೆಯು ಮಾನ್ಯತೆ ನೀಡಬಹುದು.

(2) ಯಾವುದೇ ಅಂಥ ಮಾನ್ಯತೆಯನ್ನು ಶಾಸನಗಳ ಮೂಲಕ ನಿಯಮಿಸಬಹುದಾದಂಥ ವಿಧಾನದಲ್ಲಿ ಮತ್ತು ಅಂಥ ಕಾರಣಗಳಿಗಾಗಿ ಪೂರ್ಣವಾಗಿಯಾಗಲಿ ಅಥವಾ ಭಾಗಶಃವಾಗಿಯಾಗಲಿ ಹಿಂತೆಗೆದುಕೊಳ್ಳಬಹುದು ಅಥವಾ ಮಾರ್ಪಾಟು ಮಾಡಬಹುದು.

60. ಕಾಲೇಜುಗಳ ಪರಿವೀಕ್ಷಣೆ ಮತ್ತು ವರದಿಗಳು.- (1) ಸಂಯೋಜನೆಗೊಂಡ ಪ್ರತಿಯೊಂದು ಕಾಲೇಜು, ಪ್ರಶಾಸನ ಸಭೆಯು ಪ್ರಶಿಕ್ಷಣ ಪರಿಷತ್ತಿನೊಡನೆ ಸಮಾಲೋಚನೆ ನಡೆಸಿದ ತರುವಾಯ, ಆ ಕಾಲೇಜಿನ ಅಥವಾ ಸಂಸ್ಥೆಯ ದಕ್ಷತೆಯನ್ನು ನಿರ್ಣಯಿಸುವುದಕ್ಕೆ ಸಾಧ್ಯವಾಗುವಂತೆ ಅಗತ್ಯಪಡಿಸಬಹುದಾದಂಥ ವರದಿಗಳನ್ನು, ವಿವರಣ ಪಟ್ಟಿಕೆಗಳನ್ನು ಮತ್ತು ಇತರ ಮಾಹಿತಿಯನ್ನು ಕುಲಸಚಿವರಿಗೆ ಒದಗಿಸತಕ್ಕದ್ದು.

(2) ಪ್ರಶಾಸನ ಸಭೆಯು, ಅಂಥ ಪ್ರತಿಯೊಂದು ಕಾಲೇಜನ್ನು ಈ ಬಗ್ಗೆ ತನ್ನಿಂದ ಅಧಿಕೃತನಾದ ಒಬ್ಬ ಅಥವಾ ಹೆಚ್ಚು ಸಕ್ಷಮ ವ್ಯಕ್ತಿಗಳು ಕಾಲಕಾಲಕ್ಕೆ ಪರಿವೀಕ್ಷಣೆ ನಡೆಸುವಂತೆ ಮಾಡತಕ್ಕದ್ದು.

(3) ಪ್ರಶಾಸನ ಸಭೆಯು, ಹಾಗೆ ಪರಿವೀಕ್ಷಣೆ ನಡೆಸಿದ ಮೇಲೆ ಯಾವುದೇ ಕಾಲೇಜನ್ನು, ನಿರ್ದಿಷ್ಟಪಡಿಸಿದ ಅವಧಿಯೊಳಗೆ, 58ನೇ ಪ್ರಕರಣದ (2)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುವೇ ವಿಷಯಗಳ ಸಂಬಂಧದಲ್ಲಿ ತನಗೆ ಅವಶ್ಯಕವೆಂದು ಕಂಡುಬರಬಹುದಾದಂಥ ಕ್ರಮವನ್ನು ಕೈಗೊಳ್ಳಲು ಕೋರಬಹುದು.

(4) ಪ್ರತಿಯೊಂದು ಕಾಲೇಜು, ವಿಶ್ವವಿದ್ಯಾಲಯವು ವಿದ್ಯಾವಿಷಯಕ್ಕೆ ಮತ್ತು ಆಡಳಿತಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳ ಬಗ್ಗೆ ಮತ್ತು ಅದಕ್ಕೆ ಪೂರಕವಾದ ವಿಷಯಗಳ ಬಗ್ಗೆ ಕಾಲಕಾಲಕ್ಕೆ ಹೊರಡಿಸುವ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

61. ಸಂಯೋಜನೆಯನ್ನು ಹಿಂತೆಗೆದುಕೊಳ್ಳುವುದು.- (1) 58ನೇ ಪ್ರಕರಣದ (2)ನೇ ಉಪ-ಪ್ರಕರಣದ ಯಾವುವೇ ಉಪಬಂಧಗಳನ್ನು ಪಾಲಿಸಲು ಸಂಯೋಜಿತ ಕಾಲೇಜು ತಪ್ಪಿದರೆ ಅಥವಾ ಆ ಕಾಲೇಜು ತನ್ನ ಸಂಯೋಜನೆಯ ಯಾವುವೇ ಷರತ್ತುಗಳನ್ನು ಪಾಲಿಸಲು ತಪ್ಪಿದರೆ ಅಥವಾ ಶಿಕ್ಷಣದ ಹಿತಾಸಕ್ತಿಗೆ ಬಾಧಕವಾಗುವ ರೀತಿಯಲ್ಲಿ ಕಾಲೇಜನ್ನು ನಡೆಸಿಕೊಂಡು ಬರುತ್ತಿದ್ದರೆ ಸಂಯೋಜನೆಯ ಮೂಲಕ ಕಾಲೇಜಿಗೆ ಪ್ರದತ್ತವಾದ ಹಕ್ಕುಗಳನ್ನು ಪೂರ್ಣವಾಗಿಯಾಗಲಿ ಅಥವಾ ಭಾಗಶಃವಾಗಿಯಾಗಲಿ ಹಿಂತೆಗೆದುಕೊಳ್ಳಬಹುದು ಅಥವಾ ಮಾರ್ಪಾಟು ಮಾಡಬಹುದು.

(2) ಅಂಥ ಹಕ್ಕುಗಳನ್ನು ಹಿಂತೆಗೆದುಕೊಳ್ಳುವುದಕ್ಕೆ ಅಥವಾ ಮಾರ್ಪಾಡು ಮಾಡುವುದಕ್ಕೆ ಪ್ರಸ್ತಾವ ಮಂಡನೆ ಯನ್ನು ಮೊದಲು ಪ್ರಶಾಸನ ಸಭೆಯಲ್ಲಿ ಮಾತ್ರವೇ ಮಾಡತಕ್ಕದ್ದು. ಅಂಥ ಪ್ರಸ್ತಾವವನ್ನು ಮಂಡಿಸಲು ಉದ್ದೇಶಿಸಿರುವ ಪ್ರಶಾಸನ ಸಭೆಯ ಸದಸ್ಯನು ಆ ಬಗ್ಗೆ ನೋಟೀಸನ್ನು ನೀಡತಕ್ಕದ್ದು ಮತ್ತು ಯಾವ ಕಾರಣಗಳ ಮೇಲೆ ಅದನ್ನು ಮಾಡಲಾಗಿದೆಯೋ ಆ ಕಾರಣಗಳನ್ನು ಬರಹದಲ್ಲಿ ತಿಳಿಸತಕ್ಕದ್ದು.

(3) ಸದರಿ ಪ್ರಸ್ತಾವವನ್ನು ಪರಿಶೀಲನೆಗೆ ತೆಗೆದುಕೊಳ್ಳುವುದಕ್ಕೆ ಮೊದಲು ಪ್ರಶಾಸನ ಸಭೆಯು ನೋಟೀಸಿನ ಒಂದು ಪ್ರತಿಯನ್ನು ಮತ್ತು (2)ನೇ ಉಪಪ್ರಕರಣದಲ್ಲಿ ತಿಳಿಸಲಾದ ಲಿಖಿತ ಹೇಳಿಕೆಯನ್ನು, ತಿಳಿವಳಿಕೆ ಪತ್ರದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಕಾಲೇಜಿನ ಪರವಾಗಿ ಸಲ್ಲಿಸಲಾಗುವ ಯಾವುದೇ ಮನವಿಯನ್ನು ಪ್ರಶಾಸನ ಸಭೆಯು ಪರಿಶೀಲಿಸುತ್ತದೆಯೆಂಬ ತಿಳಿವಳಿಕೆ ಪತ್ರದೊಂದಿಗೆ ಸಂಬಂಧಪಟ್ಟ ಕಾಲೇಜಿನ ಪ್ರಾಚಾರ್ಯರಿಗೆ ಕಳುಹಿಸತಕ್ಕದ್ದು:

ಪರಂತು ಹಾಗೆ ನಿರ್ದಿಷ್ಟಪಡಿಸಲಾದ ಅವಧಿಯನ್ನು ಅವಶ್ಯವಿದ್ದರೆ ಪ್ರಶಾಸನ ಸಭೆಯು ವಿಸ್ತರಿಸಬಹುದು.

(4) ಮನವಿಯನ್ನು ಸ್ವೀಕರಿಸಿದ ಮೇಲೆ ಅಥವಾ (3)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಅವಧಿಯು ಮುಕ್ತಾಯವಾದ ಮೇಲೆ ಪ್ರಶಾಸನ ಸಭೆಯು ಪ್ರಸ್ತಾವದ ನೋಟೀಸು, ಹೇಳಿಕೆ ಮತ್ತು ಮನವಿಯನ್ನು ಪರಿಶೀಲಿಸಿದ ತರುವಾಯ ಮತ್ತು ಈ ಬಗ್ಗೆ ಅಧಿಕಾರ ನೀಡಲಾದ ಯಾವೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳಿಂದ ತನಗೆ ಅವಶ್ಯವೆಂದು ಕಂಡುಬರಬಹುದಾದಂಥ ಪರಿವೀಕ್ಷಣೆಯನ್ನು ಮತ್ತು ಅಂಥ ಹೆಚ್ಚಿನ ವಿಚಾರಣೆಯನ್ನು ನಡೆಸಿದ ತರುವಾಯ ಸಂಯೋಜನೆಯನ್ನು ಹಿಂತೆಗೆದುಕೊಳ್ಳುವುದನ್ನು ಕುರಿತ ಒಂದು ನಿರ್ಣಯವನ್ನು, ಅದಕ್ಕೆ ತನ್ನ ಕಾರಣವನ್ನು ತಿಳಿಸುತ್ತಾ ಹೊರಡಿಸತಕ್ಕದ್ದು ಮತ್ತು ಅದನ್ನು ಪ್ರಶಿಕ್ಷಣ ಪರಿಷತ್ತಿಗೆ ಕಳುಹಿಸತಕ್ಕದ್ದು.

(5) (4)ನೇ ಉಪಪ್ರಕರಣದ ಅಡಿಯಲ್ಲಿನ ನಿರ್ಣಯವನ್ನು ಸ್ವೀಕರಿಸಿದ ಮೇಲೆ ಪ್ರಶಿಕ್ಷಣ ಪರಿಷತ್ತು ತನಗೆ ಅವಶ್ಯವೆಂದು ಕಂಡುಬರಬಹುದಾದಂಥ ಹೆಚ್ಚಿನ ವಿಚಾರಣೆ ಏನಾದರೂ ಇದ್ದಲ್ಲಿ ಅದನ್ನು ನಡೆಸಿದ ತರುವಾಯ ವಿಷಯದ ಬಗ್ಗೆ ತನ್ನ ಅಭಿಪ್ರಾಯವನ್ನು ದಾಖಲು ಮಾಡತಕ್ಕದ್ದು ಮತ್ತು ಅದನ್ನು ಪ್ರಶಾಸನ ಸಭೆಗೆ ಹಿಂತಿರುಗಿಸತಕ್ಕದ್ದು.

(6) ಪ್ರಶಾಸನ ಸಭೆಯು, ಪ್ರಶಿಕ್ಷಣ ಪರಿಷತ್ತಿನ ಅಭಿಪ್ರಾಯವನ್ನು ಪರ್ಯಾಲೋಚಿಸಿದ ತರುವಾಯ ಸಂಯೋಜನೆಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಶಿಫಾರಸ್ಸು ಮಾಡುವ ಅಂತಿಮ ನಿರ್ಣಯವನ್ನು ಹೊರಡಿಸತಕ್ಕದ್ದು. ಅಂಥ ನಿರ್ಣಯವು ಪ್ರಶಾಸನ ಸಭೆಯಲ್ಲಿ ಹಾಜರಿದ್ದ ಸದಸ್ಯರ ಮೂರನೇ ಎರಡರಷ್ಟು ಸದಸ್ಯರ ಬೆಂಬಲವನ್ನು ಪಡೆದ ಹೊರತು ಸಭೆಯಿಂದ ಅಂಗೀಕೃತವಾಗಿರುವುದಾಗಿ ಭಾವಿಸತಕ್ಕದ್ದಲ್ಲ.

(7) ಕುಲಸಚಿವರು, ಪ್ರಸ್ತಾವವನ್ನು ಮತ್ತು ಅದಕ್ಕೆ ಸಂಬಂಧಿಸಿದ ಪ್ರಶಿಕ್ಷಣ ಪರಿಷತ್ತು, ಪ್ರಶಾಸನ ಸಭೆಯ ವ್ಯವಹರಣೆಗಳೇನಾದರೂ ಇದ್ದಲ್ಲಿ ಅವುಗಳೆಲ್ಲವನ್ನು ಸರ್ಕಾರಕ್ಕೆ ಒಪ್ಪಿಸತಕ್ಕದ್ದು ಮತ್ತು ಸರ್ಕಾರವು ತನಗೆ ಅವಶ್ಯವೆಂದು ಕಂಡುಬರಬಹುದಾದಂಥ ವಿಚಾರಣೆಯೇನಾದರೂ ಇದ್ದಲ್ಲಿ ಅದನ್ನು ನಡೆಸಿದ ತರುವಾಯ

ವಿಶ್ವವಿದ್ಯಾಲಯಕ್ಕೆ ತಮ್ಮ ಶಿಫಾರಸುಗಳನ್ನು ಮಾಡತಕ್ಕದ್ದು ಮತ್ತು ಆ ತರುವಾಯ ವಿಶ್ವವಿದ್ಯಾಲಯವು ಅದಕ್ಕನುಗುಣವಾಗಿ ಆದೇಶವನ್ನು ಮಾಡತಕ್ಕದ್ದು.

(8) (6)ನೇ ಉಪ-ಪ್ರಕರಣದಡಿಯ ಶಿಫಾರಸ್ಸಿನ ಮೇಲಿನ ಆದೇಶದಿಂದ ಸಂಯೋಜನೆಯ ಮೂಲಕ ಪ್ರದತ್ತವಾದ ಹಕ್ಕುಗಳನ್ನು ಸಂಪೂರ್ಣವಾಗಿ ಅಥವಾ ಭಾಗಶಃ ಹಿಂತೆಗೆದುಕೊಂಡಿರುವಲ್ಲಿ ಅಥವಾ ಮಾರ್ಪಾಟು ಮಾಡಿರುವಲ್ಲಿ, ಅಂಥ ಹಿಂತೆಗೆದುಕೊಳ್ಳುವಿಕೆ ಅಥವಾ ಮಾರ್ಪಾಟಿಗೆ ಕಾರಣಗಳನ್ನು ಆದೇಶದಲ್ಲಿ ತಿಳಿಸತಕ್ಕದ್ದು.

62. ಸ್ವಾಯತ್ತ ಕಾಲೇಜು.– (1) ಈ ಅಧಿನಿಯಮದಲ್ಲಿ ಅಥವಾ ಅದರ ಆಡಿಯಲ್ಲಿ ರಚಿತವಾದ ಶಾಸನಗಳು, ಪರ್ಯಾದೇಶಗಳು ಮತ್ತು ವಿನಿಯಮಗಳಲ್ಲಿ ಏನೇ ಇದ್ದಾಗ್ಯೂ, ವಿಶ್ವವಿದ್ಯಾಲಯವು, ರಾಜ್ಯ ಸರ್ಕಾರದ ಪೂರ್ವ ಸಹಮತಿ ಪಡೆದು ಈ ಸಂಬಂಧದಲ್ಲಿ ರಚಿಸಲಾದ ಶಾಸನಗಳಲ್ಲಿ ನಿಯಮಿಸಬಹುದಾದಂಥ ಪ್ರಕ್ರಿಯೆಯನ್ನು ಅನುಸರಿಸಿದ ತರುವಾಯ, ಅಂಥ ಷರತ್ತುಗಳಿಗೆ ಒಳಪಟ್ಟು ಮತ್ತು ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವ ಹಾಗೂ ಹೊಸ ಮತ್ತು ಸುಸಂಗತ ವ್ಯಾಸಂಗ ಕ್ರಮಗಳನ್ನು ಪ್ರಾರಂಭಿಸುವ ದೃಷ್ಟಿಯಿಂದ ಒಂದು ಸಂಯೋಜಿತ ಕಾಲೇಜು, ವಿಭಾಗ ಅಥವಾ ಘಟಕಗಳನ್ನು ಯಾವುದೇ ವ್ಯಾಸಂಗ ಕ್ರಮಕ್ಕಾಗಿ ನಿರ್ದಿಷ್ಟ ಪಡಿಸಬಹುದಾದಂಥ ಅವಧಿಗಾಗಿ ಸ್ವಾಯತ್ತ ಕಾಲೇಜೆಂದು ಹೆಸರಿಸಬಹುದು.

(2) ಈ ಸಂಬಂಧದಲ್ಲಿ ರಚಿಸಲಾದ ಶಾಸನಗಳಿಗೆ ಒಳಪಟ್ಟು, ಸ್ವಾಯತ್ತ ಕಾಲೇಜೆಂದು ಹೆಸರಿಸಲಾದ ಕಾಲೇಜು, ವಿಶ್ವವಿದ್ಯಾಲಯದ ಪದವಿ ಅಥವಾ ಡಿಪ್ಲೋಮಗಳನ್ನು ನೀಡುವುದಕ್ಕೆ ಸಂಬಂಧಿಸಿದಂತೆ ಸೂಕ್ತ ವ್ಯಾಸಂಗ ಕ್ರಮಗಳನ್ನು ವಿನ್ಯಾಸಗೊಳಿಸಲು ಸೂಕ್ತ ಬೋಧನಾ ಕ್ರಮಗಳನ್ನು ರೂಪಿಸಲು, ಮೌಲ್ಯಮಾಪನ ಪರೀಕ್ಷೆ ಮತ್ತು ಉಪಪರೀಕ್ಷೆಗಳನ್ನು ವ್ಯವಸ್ಥೆಗೊಳಿಸಲು ಮತ್ತು ವಿದ್ಯಾರ್ಥಿಗಳಿಗೆ ಪ್ರವೇಶ ಕೊಡುವ ಬಗ್ಗೆ ನಿಯಮಗಳನ್ನು ರಚಿಸಲು ಹಕ್ಕುಳ್ಳದ್ದಾಗಿರತಕ್ಕದ್ದು.

(3) ಶಾಸನಗಳಲ್ಲಿ ನಿಯಮಿಸಬಹುದಾದಂಥ ನಿಯತಕಾಲಿಕ ಪುನರವಲೋಕನಕ್ಕೆ ಒಳಪಟ್ಟು, ವಿಶ್ವವಿದ್ಯಾಲಯವು, ರಾಜ್ಯಸರ್ಕಾರದ ಪೂರ್ವ ಸಹಮತಿಯೊಡನೆ, ನಿರ್ದಿಷ್ಟಪಡಿಸಬಹುದಾಂಥ ಹೆಚ್ಚಿನ ಅವಧಿಯವರೆಗೆ ಸ್ವಾಯತ್ತ ಕಾಲೇಜೆಂಬ ನಾಮಾಂಕಿತವನ್ನು ಮುಂದುವರಿಸಬಹುದು ಅಥವಾ ಅಂಥ ನಾಮಾಂಕಿತವನ್ನು ರದ್ದುಗೊಳಿಸಬಹುದು.

(4) ವಿಶ್ವವಿದ್ಯಾಲಯವು ಪ್ರಶಿಕ್ಷಣ ಪರಿಷತ್ತಿನೊಂದಿಗೆ ಸಮಾಲೋಚಿಸಿ ಈ ಉದ್ದೇಶಕ್ಕಾಗಿ ಶಾಸನಗಳನ್ನು ರಚಿಸತಕ್ಕದ್ದು, ಮತ್ತು ಅವು,–

(ಎ) ಒಂದು ಸಂಯೋಜನೆಗೊಂಡ ಕಾಲೇಜು, ವಿಭಾಗ ಅಥವಾ ಘಟಕವನ್ನು ಯಾವ ವಿಧಾನ ಮತ್ತು ಯಾವ ಷರತ್ತುಗಳಿಗೆ ಒಳಪಟ್ಟು ಸ್ವಾಯತ್ತ ಕಾಲೇಜು ಎಂದು ನಾಮಾಂಕಿತಗೊಳಿಸಬಹುದೋ ಅಥವಾ ಅಂಥ ಕಾಲೇಜಿನ ನಾಮಾಂಕಿತವನ್ನು ರದ್ದುಗೊಳಿಸಬಹುದೋ ಆ ವಿಧಾನ ಮತ್ತು ಷರತ್ತುಗಳನ್ನು;

(ಬಿ) ಸ್ವಾಯತ್ತ ಕಾಲೇಜಿನ ಆಡಳಿತ ನಿಕಾಯ, ಪ್ರಶಿಕ್ಷಣ ಪರಿಷತ್ತು, ಅಧ್ಯಯನ ಮಂಡಳಿ ಮತ್ತು ಪರೀಕ್ಷಕರ ಮಂಡಳಿಯ ರಚನೆ ಅಥವಾ ಪುನಾರಚನೆ, ಪ್ರಕಾರ್ಯಗಳು, ಅಧಿಕಾರಗಳು ಮತ್ತು ಕರ್ತವ್ಯಗಳನ್ನು ಒಳಗೊಂಡಂತೆ ಸ್ವಾಯತ್ತ ಕಾಲೇಜಿನ ಆಡಳಿತಕ್ಕೆ ಪ್ರಾಸಂಗಿಕವಾದ ವಿಷಯಗಳನ್ನು;

(ಸಿ) ವಿದ್ಯಾರ್ಥಿಗಳ ಪ್ರವೇಶಕ್ಕೆ ಸಂಬಂಧಿಸಿದ ವಿಷಯಗಳನ್ನು;

(ಡಿ) ಸ್ವಾಯತ್ತ ಕಾಲೇಜೆಂಬ ನಾಮಾಂಕಿತದ ಮುಂದುವರಿಕೆ ಅಥವಾ ರದ್ದುಪಡಿಸುವಿಕೆ ಕುರಿತು ನಿಯತಕಾಲಿಕ ಪುನರವಲೋಕನ;

(ಇ) (2)ನೇ ಉಪಪ್ರಕರಣದಲ್ಲಿ ನಮೂದಿಸಿದ ವಿಷಯಗಳೂ ಸೇರಿದಂತೆ ಸ್ವಾಯತ್ತ ಕಾಲೇಜಿನ ಕಾರ್ಯನಿರ್ವಹಣೆಗೆ ಸುಸಂಗತವಾಗಬಹುದಾದಂಥ ಇತರ ವಿಷಯಗಳನ್ನು;

– ಕುರಿತು ಉಪಬಂಧ ಕಲ್ಪಿಸತಕ್ಕದ್ದು.

63. ಕಾಲೇಜುಗಳ ಅಥವಾ ವ್ಯಾಸಂಗ ಕ್ರಮದ ಸ್ವಯಂ ಮುಚ್ಚುವಿಕೆ.– (1) ತನ್ನ ಅಸಾಮರ್ಥ್ಯದ ಕಾರಣದಿಂದ ಅಥವಾ ಹಣಕಾಸು ದೃಷ್ಟಿಯಿಂದ ಊರ್ಜಿತವಾಗದ ಕಾರಣದಿಂದ ಅಥವಾ ಆಡಳಿತ ವ್ಯವಸ್ಥೆಯು ಕುಸಿದ ಕಾರಣದಿಂದ ಕಾಲೇಜನ್ನು ಅಥವಾ ವ್ಯಾಸಂಗಕ್ರಮವನ್ನು ಮುಚ್ಚಲು ಉದ್ದೇಶಿಸಿರುವಂತಹ ಯಾವುದೇ ಕಾಲೇಜಿನ ಆಡಳಿತ ಮಂಡಳಿಯು, ವಿಶ್ವವಿದ್ಯಾಲಯಕ್ಕೆ ಮತ್ತು ರಾಜ್ಯ ಸರ್ಕಾರಕ್ಕೆ, ಕಾಲೇಜನ್ನು ಮುಚ್ಚುವುದಕ್ಕೆ ಮೊದಲು ಮೂರು ತಿಂಗಳುಗಳಿಗಿಂತ ಕಡಿಮೆಯಿಲ್ಲದಂತೆ ಆ ಬಗ್ಗೆ ಕಾರಣಗಳನ್ನು ತಿಳಿಸಿ ಲಿಖಿತ ನೋಟೀಸನ್ನು ನೀಡತಕ್ಕದ್ದು.

(2) ಕಾಲೇಜಿನ ಅಥವಾ ವ್ಯಾಸಂಗ ಕ್ರಮದ ಮುಚ್ಚುವಿಕೆಯ ಅರ್ಜಿಯನ್ನು ಪ್ರಶಿಕ್ಷಣ ಪರಿಷತ್ತು ಮತ್ತು ಪ್ರಶಾಸನ ಸಭೆಗಳು ಪರಿಗಣಿಸತಕ್ಕದ್ದು ಮತ್ತು ಪ್ರಶಾಸನ ಸಭೆಯು ಅದರ ಮೇಲೆ ಸೂಕ್ತ ಶಿಫಾರಸುಗಳನ್ನು ಮಾಡತಕ್ಕದ್ದು.

(3) ಕುಲಸಚಿವರು, ಅರ್ಜಿಯನ್ನು ಮತ್ತು ಪ್ರಶಿಕ್ಷಣ ಪರಿಷತ್ತಿನ ಮತ್ತು ಪ್ರಶಾಸನ ಸಭೆಯ ಶಿಫಾರಸುಗಳನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು, ಅದು ಅವುಗಳನ್ನು ಪರಿಗಣಿಸಿದ ತರುವಾಯ ಮುಚ್ಚುವ ಬಗ್ಗೆ ಅನುಮತಿ ನೀಡುವ ಅಥವಾ ಮುಚ್ಚುವಿಕೆಗೆ ಅನುಮತಿ ನಿರಾಕರಿಸುವ ಬಗ್ಗೆ ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡತಕ್ಕದ್ದು ಮತ್ತು ವಿಶ್ವವಿದ್ಯಾಲಯವು ಅಂಥ ನಿರ್ದೇಶನಗಳನ್ನು ಸ್ವೀಕರಿಸಿದ ತರುವಾಯ ಅದಕ್ಕನುಸಾರ ಆದೇಶಗಳನ್ನು ಹೊರಡಿಸತಕ್ಕದ್ದು.

(4) ಆಡಳಿತ ಮಂಡಳಿಯು, ಶೈಕ್ಷಣಿಕ ವರ್ಷದ ಚಾಲ್ತಿ ಅವಧಿಯಲ್ಲಿ ಮತ್ತು ವಿಶ್ವವಿದ್ಯಾಲಯವು ಸಂಬಂಧಪಟ್ಟ ವ್ಯಾಸಂಗಕ್ರಮದ ವಾರ್ಷಿಕ ಪರೀಕ್ಷೆಗಳನ್ನು ನಡೆಸುವವರೆಗೆ ಮತ್ತು ವಿಶ್ವವಿದ್ಯಾಲಯವು ಹಾಗೆ ಮಾಡುವುದಕ್ಕಾಗಿ ಒಂದು ಔಪಚಾರಿಕ ಆದೇಶವನ್ನು ಹೊರಡಿಸುವವರೆಗೆ ಕಾಲೇಜನ್ನು ಅಥವಾ ವ್ಯಾಸಂಗ ಕ್ರಮವನ್ನು ಮುಚ್ಚತಕ್ಕದ್ದಲ್ಲ.

(5) ಹಾಗೆ ಮುಚ್ಚಲಾದ ಕಾಲೇಜುಗಳ ವಿದ್ಯಾರ್ಥಿಗಳಿಗೆ, ಅವರ ವರ್ಗಾವಣೆಯ ನಂತರ, ವಿಶ್ವವಿದ್ಯಾಲಯವು, ಹತ್ತಿರವಿರುವ ಕಾಲೇಜಿನಲ್ಲಿ ಸಂಬಂಧಪಟ್ಟ ವ್ಯಾಸಂಗಕ್ರಮದಲ್ಲಿ ಪ್ರವೇಶ ಸಂಖ್ಯೆಯನ್ನು ಅಂಥ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ನೀಡುವಷ್ಟರಮಟ್ಟಿಗೆ ಹೆಚ್ಚಿಸಿ ಪ್ರವೇಶವನ್ನು ನೀಡತಕ್ಕದ್ದು ಮತ್ತು ಅಂಥ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಎಲ್ಲ ದಾಖಲೆಗಳನ್ನು ಹಾಗೆ ಮುಚ್ಚಲ್ಪಟ್ಟ ಕಾಲೇಜಿನಿಂದ, ಯಾವ ಕಾಲೇಜಿನಲ್ಲಿ ಅಂಥ ವಿದ್ಯಾರ್ಥಿಗಳು ಪ್ರವೇಶವನ್ನು ಪಡೆದಿರುವರೋ ಅಲ್ಲಿಗೆ ವರ್ಗಾಯಿಸತಕ್ಕದ್ದು.

(6) (1)ನೇ ಉಪಪ್ರಕರಣದ ಅಡಿಯಲ್ಲಿ ನೋಟೀಸಿನ ಅವಧಿಯು ಮುಕ್ತಾಯವಾದ ತರುವಾಯ ತೊಂಬತ್ತು ದಿನಗಳೊಳಗೆ, ಹಾಗೆ ಮುಚ್ಚುವ ಬಗ್ಗೆ ಅನುಮತಿ ನೀಡುವ ಅಥವಾ ನಿರಾಕರಿಸುವ ಯಾವುದೇ ನಿರ್ದೇಶನವನ್ನು ರಾಜ್ಯ ಸರ್ಕಾರವು ನೀಡದಿದ್ದರೆ, (4)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಕಾಲೇಜನ್ನು ಅಥವಾ ಸಂದರ್ಭಾನುಸಾರ ವ್ಯಾಸಂಗಕ್ರಮವನ್ನು ಮುಚ್ಚಲು ಆಡಳಿತ ಮಂಡಳಿಗೆ ಅನುಮತಿ ನೀಡಲಾಗಿದೆ ಎಂದು ಭಾವಿಸತಕ್ಕದ್ದು.

ಅಧ್ಯಾಯ – VIII

ವಿಶ್ವವಿದ್ಯಾಲಯದ ಅಧ್ಯಾಪಕರು ಮತ್ತು ಇತರ ನೌಕರರ ನೇಮಕಾತಿ

64. **ಅಧ್ಯಾಪಕರು ಮೊದಲಾದವರ ನೇಮಕಾತಿ.**– (1) ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರು, ಗ್ರಂಥಪಾಲಕ, ಪ್ರವಾಚಕರು ಮತ್ತು ಉಪನ್ಯಾಸಕರಾಗಿ ನೇಮಕ ಮಾಡಿಕೊಳ್ಳಲು ವ್ಯಕ್ತಿಗಳನ್ನು ಆಯ್ಕೆಮಾಡುವುದಕ್ಕಾಗಿ ಒಂದು ನೇಮಕಾತಿ ಮಂಡಳಿ ಇರತಕ್ಕದ್ದು.

(2) ಅಂಥ ಪ್ರತಿಯೊಂದು ಮಂಡಳಿಯು,–

(ಎ) ಪ್ರಾಧ್ಯಾಪಕರ ಮತ್ತು ಪ್ರವಾಚಕರುಗಳ ಹುದ್ದೆಗಳಿಗೆ ಮತ್ತು ಗ್ರಂಥಪಾಲಕ ಹುದ್ದೆಗಳಿಗೆ ಆಯ್ಕೆಮಾಡಲು,–

(i) ಕುಲಪತಿಯವರು–ಪದನಿಮಿತ್ತ ಅಧ್ಯಕ್ಷರು;

(ii) ಸಂಬಂಧಪಟ್ಟ ವಿಭಾಗದ ಅಧ್ಯಕ್ಷರು ಪ್ರಾಧ್ಯಾಪಕರಾಗಿದ್ದರೆ ಅವರು, ಪ್ರಾಧ್ಯಾಪಕರಾಗಿರದಿದ್ದರೆ ಕುಲಾಧಿಪತಿಯವರು ಸರ್ಕಾರದೊಡನೆ ಸಮಾಲೋಚನೆ ನಡೆಸಿ ನಾಮನಿರ್ದೇಶಿಸಿದ ರಾಜ್ಯದ ಇತರ ಯಾವುದೇ ವಿಶ್ವವಿದ್ಯಾಲಯದ ಒಬ್ಬ ಪ್ರಾಧ್ಯಾಪಕರು ಮತ್ತು ರಾಜ್ಯದ ಯಾವುದೇ ವಿಶ್ವವಿದ್ಯಾಲಯದಲ್ಲಿ ಅಂಥ ಪ್ರಾಧ್ಯಾಪಕರು ಲಭ್ಯವಾಗದೇ ಇದ್ದರೆ, ರಾಜ್ಯದಲ್ಲಿರುವ ಕೇಂದ್ರದ ಸಂಸ್ಥೆಯಿಂದ ಅಥವಾ ಇತರ ಯಾವುದೇ ರಾಜ್ಯದ ವಿಶ್ವವಿದ್ಯಾಲಯದಿಂದ ಕುಲಾಧಿಪತಿಯವರು ನಾಮನಿರ್ದೇಶಿಸಿದ ಸಂಬಂಧಪಟ್ಟ ವಿಭಾಗದ ಪ್ರಾಧ್ಯಾಪಕರು;

(iii) ಕುಲಾಧಿಪತಿಯವರು ರಾಜ್ಯ ಸರ್ಕಾರದೊಡನೆ ಸಮಾಲೋಚನೆ ನಡೆಸಿ ರಾಜ್ಯದ ಯಾವುದೇ ವಿಶ್ವವಿದ್ಯಾಲಯದಲ್ಲಿ ಅಥವಾ ರಾಜ್ಯ ಸರ್ಕಾರವು ಮಾನ್ಯತೆ ನೀಡಿದ ಇತರ ಯಾವುದೇ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಗಳ ಪೈಕಿ ನಾಮನಿರ್ದೇಶಿಸಿದ ನಾಲ್ವರು ವಿಷಯ ತಜ್ಞರು;

– ಇವರುಗಳನ್ನು ಒಳಗೊಂಡಿರತಕ್ಕದ್ದು.

(ಬಿ) ಉಪನ್ಯಾಸಕರ ಹುದ್ದೆಗಳಿಗೆ ಆಯ್ಕೆ ಮಾಡಲು,–

(i) ಕುಲಪತಿಯವರು–ಪದನಿಮಿತ್ತ ಅಧ್ಯಕ್ಷರು;

(ii) ಕುಲಾಧಿಪತಿಯವರು ನಾಮನಿರ್ದೇಶಿಸಿದ ಇಬ್ಬರು ವಿಷಯ ತಜ್ಞರು;

(iii) ಸಂಬಂಧಪಟ್ಟ ವಿಭಾಗದ ಅಧ್ಯಕ್ಷರು ಪ್ರಾಧ್ಯಾಪಕರಾಗಿದ್ದರೆ ಅವರು, ಪ್ರಾಧ್ಯಾಪಕರಾಗಿರದಿದ್ದರೆ ಕುಲಾಧಿಪತಿಯವರು ಸರ್ಕಾರದೊಡನೆ ಸಮಾಲೋಚನೆ ನಡೆಸಿ ನಾಮನಿರ್ದೇಶಿಸಿದ ರಾಜ್ಯದ ಇತರ ಯಾವುದೇ ವಿಶ್ವವಿದ್ಯಾಲಯದ ಸಂಬಂಧಪಟ್ಟ ವಿಭಾಗದ ಒಬ್ಬ ಪ್ರಾಧ್ಯಾಪಕರು ಮತ್ತು ರಾಜ್ಯದೊಳಗಿನ ಯಾವುದೇ ವಿಶ್ವವಿದ್ಯಾಲಯದಲ್ಲಿ ಅಂಥ ಪ್ರಾಧ್ಯಾಪಕರು ಲಭ್ಯವಾಗದೆ ಇದ್ದರೆ ರಾಜ್ಯದೊಳಗಿನ ಕೇಂದ್ರದ ಸಂಸ್ಥೆಯಿಂದ ಅಥವಾ ಇತರ ಯಾವುದೇ ರಾಜ್ಯದ ವಿಶ್ವವಿದ್ಯಾಲಯದಿಂದ ಕುಲಾಧಿಪತಿಯವರು ನಾಮನಿರ್ದೇಶಿಸಿದಂಥ ಸಂಬಂಧಪಟ್ಟ ವಿಭಾಗದ ಪ್ರಾಧ್ಯಾಪಕರು;

(iv) ಕುಲಾಧಿಪತಿಯವರು ಸರ್ಕಾರದೊಡನೆ ಸಮಾಲೋಚನೆ ನಡೆಸಿ ನಾಮನಿರ್ದೇಶಿಸಿದ ರಾಜ್ಯದ ಇತರ ಯಾವುದೇ ವಿಶ್ವವಿದ್ಯಾಲಯದ ಒಬ್ಬ ಪ್ರಾಧ್ಯಾಪಕರು;

- ಇವರನ್ನು ಒಳಗೊಂಡಿರತಕ್ಕದ್ದು.

(3) ಕುಲಸಚಿವರು ನೇಮಕಾತಿ ಮಂಡಳಿಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸತಕ್ಕದ್ದು.

(4) ಆಯ್ಕೆಯ ಮೂಲಕ ಭರ್ತಿಮಾಡಿಕೊಳ್ಳಲಾಗುವ ಪ್ರಾಧ್ಯಾಪಕ, ಗ್ರಂಥಪಾಲಕ, ಪ್ರವಾಚಕ ಅಥವಾ ಉಪನ್ಯಾಸಕರ ಪ್ರತಿಯೊಂದು ಹುದ್ದೆಯನ್ನು ಅಗತ್ಯಪಡಿಸಲಾದ ಕನಿಷ್ಠ ಮತ್ತು ಇತರ ವಿದ್ಯಾರ್ಹತೆಯೇನಾದರೂ ಇದ್ದಲ್ಲಿ ಅದನ್ನು, ಉಪಲಬ್ಧಿಗಳು ಮತ್ತು ಭರ್ತಿಮಾಡಬೇಕಾದ ಹುದ್ದೆಗಳ ಸಂಖ್ಯೆ ಇವುಗಳೊಂದಿಗೆ ವಿಧ್ಯುಕ್ತವಾಗಿ ಮತ್ತು ವ್ಯಾಪಕವಾಗಿ ಜಾಹೀರಾತು ಕೊಡತಕ್ಕದ್ದು ಮತ್ತು, ಅರ್ಜಿದಾರರು ಯಾವ ಕಾಲಾವಕಾಶದೊಳಗೆ ಅರ್ಜಿಯನ್ನು ಸಲ್ಲಿಸಬಹುದೋ ಅಂಥ ಸೂಕ್ತ ಕಾಲಾವಕಾಶವನ್ನು ಕೊಡತಕ್ಕದ್ದು.

(5) ನೇಮಕಾತಿ ಮಂಡಳಿಯ ಸಭೆಗೆ ನಾಲ್ವರು ಸದಸ್ಯರ ಕೋರಂ ಇರತಕ್ಕದ್ದು. ಅವರ ಪೈಕಿ ಪ್ರಾಧ್ಯಾಪಕರುಗಳ, ಪ್ರವಾಚಕರುಗಳ ಮತ್ತು ಗ್ರಂಥಪಾಲಕರ ಹುದ್ದೆಗಳ ಆಯ್ಕೆಯ ಸಂದರ್ಭದಲ್ಲಿ ಕಡೆಯ ಪಕ್ಷ ಇಬ್ಬರು ತಜ್ಞರಿರತಕ್ಕದ್ದು ಮತ್ತು ಇತರ ಹುದ್ದೆಗಳ ಆಯ್ಕೆಯ ಸಂದರ್ಭದಲ್ಲಿ ಕಡೆಯಪಕ್ಷ ಒಬ್ಬರು ತಜ್ಞರಿರತಕ್ಕದ್ದು.

(6) ಮಂಡಳಿಯು, ಈ ಸಂಬಂಧದಲ್ಲಿ ರಚಿಸಲಾದ ಶಾಸನಗಳ ಉಪಬಂಧಗಳಿಗೆ ಒಳಪಟ್ಟು ಸಂದರ್ಶನವನ್ನು ನಡೆಸಿ, ಜಾಹೀರಾತು ಮಾಡಿದ ವಿದ್ಯಾರ್ಹತೆಗನುಸಾರವಾಗಿ ಪ್ರತಿಯೊಬ್ಬ ಅಭ್ಯರ್ಥಿಯ ಅರ್ಹತೆಯನ್ನು ನಿರ್ಣಯಿಸತಕ್ಕದ್ದು ಮತ್ತು ಆಯ್ಕೆಯಾದ ವ್ಯಕ್ತಿಗಳ ಪಟ್ಟಿಯನ್ನು ಅರ್ಹತೆಯ ಕ್ರಮಾನುಸಾರವಾಗಿ ಸಿದ್ಧಪಡಿಸತಕ್ಕದ್ದು, ಈ ಪಟ್ಟಿಯನ್ನು ಪ್ರಶಾಸನ ಸಭೆಗೆ ಕಳುಹಿಸತಕ್ಕದ್ದು ಮತ್ತು ಪ್ರಶಾಸನ ಸಭೆಯು ಅದಕ್ಕನುಸಾರವಾಗಿ ನೇಮಕಗಳನ್ನು ಮಾಡಿಕೊಳ್ಳತಕ್ಕದ್ದು. ಮಂಡಳಿ ಮತ್ತು ಪ್ರಶಾಸನ ಸಭೆಯ ನಡುವೆ ಭಿನ್ನಾಭಿಪ್ರಾಯ ಉಂಟಾದ ಸಂದರ್ಭದಲ್ಲಿ ವಿಷಯವನ್ನು ಕುಲಾಧಿಪತಿಯವರಿಗೆ ಉಲ್ಲೇಖಿಸತಕ್ಕದ್ದು ಮತ್ತು ಅವರ ನಿರ್ಣಯವೇ ಅಂತಿಮವಾಗಿರತಕ್ಕದ್ದು.

ವಿವರಣೆ:– ಪಟ್ಟಿಯು ಈ ಅಧಿನಿಯಮದ ಉಪಬಂಧಗಳು ಅಥವಾ ಅಂಥ ನೇಮಕಾತಿಗೆ ಸಂಬಂಧಿಸಿದ ಶಾಸನಗಳಿಗೆ ಅನುಗುಣವಾಗಿಲ್ಲವೆಂದು ಪ್ರಶಾಸನ ಸಭೆಯು ಅಭಿಪ್ರಾಯಪಟ್ಟಲ್ಲಿ ಈ ಪ್ರಕರಣದಲ್ಲಿರುವುದು ಯಾವುದೂ ಪ್ರಶಾಸನ ಸಭೆಯು ಸದರಿ ಪಟ್ಟಿಗನುಸಾರವಾಗಿಯೇ ನೇಮಕಗಳನ್ನು ಮಾಡಿಕೊಳ್ಳಲು ಅಗತ್ಯಪಡಿಸುವುದೆಂದು ಅರ್ಥಕಲ್ಪಿಸತಕ್ಕದ್ದಲ್ಲ.

(7) (6)ನೇ ಉಪ-ಪ್ರಕರಣದಡಿ ಪಟ್ಟಿಯನ್ನು ತಯಾರಿಸುವಾಗ ಮಂಡಳಿಯು ಅನುಸೂಚಿತ ಜಾತಿ, ಅನುಸೂಚಿತ ಪಂಗಡಗಳು ಮತ್ತು ನಾಗರಿಕರ ಇತರ ಹಿಂದುಳಿದ ವರ್ಗಗಳಿಗಾಗಿ ಹುದ್ದೆಗಳನ್ನು ಮೀಸಲಿಡುವ ವಿಷಯದಲ್ಲಿ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದ ಆದೇಶಗಳನ್ನು ಅನುಸರಿಸತಕ್ಕದ್ದು.

(8) ಹಿಂದಿನ ಉಪ-ಪ್ರಕರಣಗಳಲ್ಲಿ ಏನೇ ಇದ್ದರೂ, ವಿಶ್ವವಿದ್ಯಾಲಯವು ನಿರ್ವಹಿಸುತ್ತಿರುವ ಪದವಿ ಕಾಲೇಜುಗಳಲ್ಲಿನ ಪ್ರಾಧ್ಯಾಪಕರು ಮತ್ತು ಪ್ರವಾಚಕರ ಹುದ್ದೆಗಳಿಗೆ ನೇಮಕ ಮಾಡುವಾಗ ಶಾಸನಗಳಿಂದ ನಿಯಮಿಸಬಹುದಾದಂಥ ಪ್ರಾಧಿಕಾರವು ಅನುಕ್ರಮವಾಗಿ ಪ್ರವಾಚಕರು ಮತ್ತು ಉಪನ್ಯಾಸಕರುಗಳಿಗೆ ಜ್ಯೇಷ್ಠತೆ ಹಾಗೂ ಅರ್ಹತೆ ಆಧಾರದ ಮೇಲೆ ಬಡ್ತಿ ನೀಡಿ ನೇಮಕ ಮಾಡತಕ್ಕದ್ದು:

ಪರಂತು, ಯಾವುದೇ ಹೊಸ ವಿಷಯವನ್ನು ಪ್ರಾರಂಭಿಸಿದಾಗಲೆಲ್ಲಾ, ಅಂಥ ಹೊಸ ವಿಷಯದಲ್ಲಿ ಪ್ರಾಧ್ಯಾಪಕರುಗಳ, ಪ್ರವಾಚಕರ ಮತ್ತು ಉಪನ್ಯಾಸಕರುಗಳ ನೇಮಕಾತಿಯನ್ನು ಶಾಸನಗಳ ಮೂಲಕ ನಿಯಮಿಸಬಹುದಾದಂಥ ವಿಧಾನದಲ್ಲಿ ಮಾಡತಕ್ಕದ್ದು.

(9) ಹಿಂದಿನ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ಪರಸ್ಪರವಾಗಿ ಒಪ್ಪಿಕೊಳ್ಳಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕರ ಹುದ್ದೆಯನ್ನು ಒಪ್ಪಿಕೊಳ್ಳಲು ಅತ್ಯುನ್ನತ ವಿದ್ಯಾಪ್ರಶಸ್ತಿಯನ್ನು ಪಡೆದಿರುವ ಹಾಗೂ ವೃತ್ತಿಪರ ಸಾಧನೆಯನ್ನು ಮಾಡಿರುವ ಒಬ್ಬ ವ್ಯಕ್ತಿಯನ್ನು ಕುಲಪತಿಯವರ ಶಿಫಾರಸಿನ ಮೇಲೆ ಆಹ್ವಾನಿಸಲು ಪ್ರಶಾಸನ ಸಭೆಯು ಸಕ್ಷಮವಾಗಿರತಕ್ಕದ್ದು:

ಪರಂತು, ಯಾವುದೇ ನಿರ್ದಿಷ್ಟ ಸಮಯದಲ್ಲಿ ಒಂದು ವಿಶ್ವವಿದ್ಯಾಲಯದಲ್ಲಿ ಅಂಥ ಸಂದರ್ಶಕ-ಪ್ರಾಧ್ಯಾಪಕರು ನಾಲ್ಕರಿಗಿಂತ ಹೆಚ್ಚಿರತಕ್ಕದ್ದಲ್ಲ.

65. **ಬಡ್ತಿ ಯೋಜನೆಗಳಿಗನುಸಾರವಾಗಿ ನೇಮಕಾತಿ.**- 64ನೇ ಪ್ರಕರಣದಲ್ಲಿ ಏನೇ ಇದ್ದರೂ, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ನೇಮಕಾತಿಯ ಮತ್ತು ಹುದ್ದೆಗಳ ಮೀಸಲಾತಿ ಬಗ್ಗೆ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದ ನಿಯಮಗಳಿಗೆ ಮತ್ತು ಆದೇಶಗಳಿಗೆ ಒಳಪಟ್ಟು, ವಿಶ್ವವಿದ್ಯಾಲಯದ ಸಂಸ್ಥೆಗಳು ಮತ್ತು ವಿಭಾಗಗಳಲ್ಲಿನ ಪ್ರವಾಚಕರುಗಳ ಮತ್ತು ಪ್ರಾಧ್ಯಾಪಕರುಗಳ ಹುದ್ದೆಗಳಿಗೆ ನೇಮಕಗಳನ್ನು, ವಿಶ್ವವಿದ್ಯಾಲಯ ಸಂಸ್ಥೆ ಅಥವಾ ವಿಭಾಗವು ಪದವಿ ಮತ್ತು ಸ್ನಾತಕೋತ್ತರ ವ್ಯಾಸಂಗ ಕ್ರಮಗಳನ್ನು ಹೊಂದಿದ್ದರೆ, ಈ ಸಂಬಂಧದಲ್ಲಿ ಶಾಸನಗಳಿಂದ ನಿಯಮಿಸಲಾದ ಬಡ್ತಿ ಯೋಜನೆ ಏನಾದರೂ ಇದ್ದರೆ ಆ ಯೋಜನೆಯ ಅನುಸಾರವಾಗಿ ಪ್ರಶಾಸನ ಸಭೆಯು ಮಾಡತಕ್ಕದ್ದು.

66. **ಅರೆಕಾಲಿಕ ಹುದ್ದೆಗಳ ನೇಮಕಾತಿ.**- (1) ವಿಶ್ವವಿದ್ಯಾಲಯದಲ್ಲಿ ಅರೆಕಾಲಿಕ ಉಪನ್ಯಾಸಕರು, ಸಹಾಯಕ ಪ್ರಾಧ್ಯಾಪಕರು, ಪ್ರವಾಚಕರು ಮತ್ತು ಪ್ರಾಧ್ಯಾಪಕರ ನೇಮಕಾತಿಗೆ, ವ್ಯಕ್ತಿಗಳ ಆಯ್ಕೆಗಾಗಿ ಒಂದು ನೇಮಕಾತಿ ಮಂಡಳಿ ಇರತಕ್ಕದ್ದು. ಮಂಡಳಿಯು ಈ ಮುಂದಿನವರುಗಳನ್ನು ಒಳಗೊಂಡಿರತಕ್ಕದ್ದು.

(i) ಕುಲಪತಿಯವರು – ಪದನಿಮಿತ್ತ ಅಧ್ಯಕ್ಷರು;

(ii) ಕುಲಾಧಿಪತಿಯವರು ನಾಮನಿರ್ದೇಶಿಸಿದ ಇಬ್ಬರು ತಜ್ಞರು;

(iii) ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು;

(iv) ಕಾನೂನು ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ ಅಥವಾ ಉಪಕಾರ್ಯದರ್ಶಿಯ ದರ್ಜೆಗೆ ಕಡಿಮೆಯಿಲ್ಲದ ದರ್ಜೆಯ ಅವರ ನಾಮನಿರ್ದೇಶಿತರು;

(v) ಕುಲಸಚಿವರು – ಇವರು ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು;

(vi) ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶಕರು ಅಥವಾ ಉಪ ನಿರ್ದೇಶಕರ ದರ್ಜೆಗೆ ಕಡಿಮೆಯಿಲ್ಲದ ದರ್ಜೆಯ ಅವರ ನಾಮನಿರ್ದೇಶಿತರು;

(vii) ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ನಿರ್ದೇಶಕರು ಅಥವಾ ಉಪನಿರ್ದೇಶಕರ ದರ್ಜೆಗೆ ಕಡಿಮೆಯಿಲ್ಲದ ದರ್ಜೆಯ ಅವರ ನಾಮನಿರ್ದೇಶಿತರು;

(viii) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರು ಅಥವಾ ಉಪನಿರ್ದೇಶಕರ ದರ್ಜೆಗೆ ಕಡಿಮೆಯಿಲ್ಲದ ದರ್ಜೆಯ ಅವರ ನಾಮನಿರ್ದೇಶಿತರು:

ಪರಂತು, ಕಾನೂನು ಕಾಲೇಜುಗಳ ಯಾವುದೇ ಹುದ್ದೆಯ ನೇಮಕಾತಿಗೆ ಮಂಡಳಿಯ ಇಬ್ಬರು ತಜ್ಞರಾಗಿ, ಕರ್ನಾಟಕದ ಅಡ್ವೊಕೇಟ್ ಜನರಲ್ ಮತ್ತು ಸರ್ಕಾರದ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ, ಅಥವಾ ಜಂಟಿ ಕಾರ್ಯದರ್ಶಿಯವರ ದರ್ಜೆಗೆ ಕಡಿಮೆಯಿಲ್ಲದ ದರ್ಜೆಯ ಅವರ ನಾಮನಿರ್ದೇಶಿತರು ಇರತಕ್ಕದ್ದು.

(2) ಪ್ರತಿಯೊಂದು ಆರಕಾಲಿಕ ಹುದ್ದೆಗೆ ಎಲ್ಲಾ ಅಗತ್ಯ ವಿವರಗಳೊಂದಿಗೆ ವ್ಯಾಪಕ ಜಾಹೀರಾತನ್ನು ನೀಡತಕ್ಕದ್ದು ಮತ್ತು ಅಭ್ಯರ್ಥಿಗಳನ್ನು ಸಂದರ್ಶಿಸುವ ಮೂಲಕ ಆಯ್ಕೆ ಮಾಡತಕ್ಕದ್ದು.

(3) ಮಂಡಳಿ ಸಭೆಯ ಕೋರಂ ಮೂರು ಆಗಿರತಕ್ಕದ್ದು.

(4) ಮಂಡಳಿಯು ಆಯ್ಕೆಯಾದ ವ್ಯಕ್ತಿಗಳ ಪಟ್ಟಿಯನ್ನು ತಯಾರಿಸತಕ್ಕದ್ದು ಮತ್ತು ಪ್ರಶಾಸನ ಸಭೆಗೆ ಆ ಪಟ್ಟಿಯನ್ನು ಕಳುಹಿಸತಕ್ಕದ್ದು. ಪ್ರಶಾಸನ ಸಭೆಯು ಅವರನ್ನು ನೇಮಕಮಾಡತಕ್ಕದ್ದು.

(5) ಯಾವುದೇ ಆರೆಕಾಲಿಕ ನೇಮಕವನ್ನು ಒಂದು ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಮಾಡತಕ್ಕದ್ದಲ್ಲ.

67. **ತಾತ್ಕಾಲಿಕ ನೇಮಕ.**– 64, 65, 66 ಮತ್ತು 68ನೇ ಪ್ರಕರಣಗಳಲ್ಲಿ ಏನೇ ಇದ್ದರೂ, ಕೆಲವೊಂದು ಹುದ್ದೆಗಳು ತಾತ್ಕಾಲಿಕವಾದವು ಆಗಿರುವ ಸಂದರ್ಭದಲ್ಲಿ ಇಲ್ಲವೇ ಅಂಥ ಹುದ್ದೆಗಳಿಗೆ ವಿಳಂಬ ಮಾಡದೇ 64, 65, 66 ಮತ್ತು 68ನೇ ಪ್ರಕರಣಗಳನ್ವಯ ನೇಮಕಾತಿ ಮಾಡಲು ಸಾಧ್ಯವಿರದಿರುವಲ್ಲಿ ಉಪನ್ಯಾಸಕರ ಮತ್ತು ಶಾಸನಗಳಲ್ಲಿ ನಿರ್ದಿಷ್ಟವಾಗಿ ಹೇಳಿದಂಥ ಬೋಧಕೇತರ ಸಿಬ್ಬಂದಿಗೆ ಕುಲಪತಿಯು ಒಂದು ವರ್ಷಕ್ಕಿಂತ ಹೆಚ್ಚಿಲ್ಲದ ಅವಧಿಗೆ ತಾತ್ಕಾಲಿಕ ನೇಮಕಗಳನ್ನು ಮಾಡಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ನೇಮಕಾತಿಗಳನ್ನು ಮಂಜೂರಾದ ಹುದ್ದೆಗಳಿಗೆ ಮತ್ತು ಶಾಸನಗಳ ಮೂಲಕ ನಿಯಮಿಸಲಾದ ವಿಧಾನದಲ್ಲಿ ಮಾತ್ರ ಮಾಡತಕ್ಕದ್ದು.

68. **ಇತರ ಬೋಧಕೇತರ ಮತ್ತು ಲಿಪಿಕ ಸಿಬ್ಬಂದಿಯ ನೇಮಕಾತಿ.**– (1) ವಿಶ್ವವಿದ್ಯಾಲಯದಲ್ಲಿ ಬೋಧಕೇತರ ಹುದ್ದೆಗಳಿಗೆ ಮತ್ತು ಲಿಪಿಕ ಹುದ್ದೆಗಳಿಗೆ ನೇಮಕಾತಿಗಾಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಒಂದು ನೇಮಕಾತಿ ಮಂಡಳಿಯನ್ನು ರಚಿಸತಕ್ಕದ್ದು.

(2) ಮಂಡಳಿಯು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು:–

(i) ಕುಲಪತಿಯವರು-ಪದನಿಮಿತ್ತ ಅಧ್ಯಕ್ಷರು;

(ii) ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿಗಳು ಅಥವಾ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ಅಪರ ಕಾರ್ಯದರ್ಶಿಗಳ ದರ್ಜೆಗೆ ಕಡಿಮೆಯಿಲ್ಲದ ದರ್ಜೆಯ ಅವರ ನಾಮ ನಿರ್ದೇಶಿತರು;

(iii) ಕುಲಪತಿಯವರು ನಾಮನಿರ್ದೇಶಿಸಿದ ಒಬ್ಬ ತಜ್ಞರು;

(iv) ಕುಲಸಚಿವರು;

(v) ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶಕರು ಅಥವಾ ಜಂಟಿ/ಉಪ ನಿರ್ದೇಶಕರ ದರ್ಜೆಗೆ ಕಡಿಮೆಯಿಲ್ಲದ ದರ್ಜೆಯ ಅವರ ನಾಮ ನಿರ್ದೇಶಿತರು;

(vi) ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ನಿರ್ದೇಶಕರು ಅಥವಾ ಜಂಟಿ/ಉಪ ನಿರ್ದೇತಕರ ದರ್ಜೆಗೆ ಕಡಿಮೆಯಿಲ್ಲದ ದರ್ಜೆಯ ಅವರ ನಾಮ ನಿರ್ದೇಶಕರು;

(vii) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರು ಅಥವಾ ಜಂಟಿ/ಉಪ ನಿರ್ದೇತಕರ ದರ್ಜೆಗೆ ಕಡಿಮೆಯಿಲ್ಲದ ದರ್ಜೆಯ ಅವರ ನಾಮ ನಿರ್ದೇಶಿತರು.

(3) ಮಂಡಳಿಯ ಸಭೆಯ ಕೋರಂ ನಾಲ್ಕು ಆಗಿರತಕ್ಕದ್ದು.

(4) ಶಾಸನಗಳಿಗನುಸಾರವಾಗಿ ನೇರ ನೇಮಕಾತಿ ಮೂಲಕ ಭರ್ತಿ ಮಾಡಬೇಕಾದಂಥ ಹುದ್ದೆಗಳಿಗೆ ಮಂಡಳಿಯು ಆಯ್ಕೆ ಮಾಡಿದ ವ್ಯಕ್ತಿಗಳನ್ನು, ಮಂಡಳಿಯು ಸಿದ್ಧಪಡಿಸಿದ ಪಟ್ಟಿಯಲ್ಲಿ ಅವರ ಹೆಸರುಗಳಿರುವ ಕ್ರಮದಲ್ಲಿ ಭರ್ತಿ ಮಾಡಿಕೊಳ್ಳತಕ್ಕದ್ದು. ಹುದ್ದೆಗಳ ಯಾವುದೇ ಪ್ರವರ್ಗದ ಸಂಬಂಧದಲ್ಲಿ ಶಾಸನಗಳಲ್ಲಿ ನಿಯಮಿಸಬಹುದಾದಂತೆ ಹುದ್ದೆಗಳಿಗೆ ಬಡ್ತಿ, ಪ್ರತಿನಿಯೋಜನೆ ಅಥವಾ ವರ್ಗಾವಣೆ ಅಥವಾ ಕರಾರಿನ ಮೂಲಕ ನೇಮಕಾತಿಯನ್ನು ಮಂಡಳಿಯೊಂದಿಗೆ ಸಮಾಲೋಚಿಸಿದ ತರುವಾಯ, ಮಾಡತಕ್ಕದ್ದು.

(5) ನೇರ ನೇಮಕಾತಿ ಮೂಲಕ ಭರ್ತಿ ಮಾಡಬೇಕಾದ ಖಾಲಿ ಸ್ಥಾನಗಳಿಗೆ ನೇಮಕಾತಿಗಾಗಿ ಆಯ್ಕೆ ಮಾಡಿದ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸುವಾಗ, ಮಂಡಳಿಯು, ಸರ್ಕಾರವು ಕಾಲಕಾಲಕ್ಕೆ ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳಿಗೆ ಹುದ್ದೆಗಳನ್ನು ಮೀಸಲಿರಿಸುವುದಕ್ಕಾಗಿ ಹೊರಡಿಸಿದ ಆದೇಶಗಳನ್ನು ಪಾಲಿಸತಕ್ಕದ್ದು.

(6) ಎಲ್ಲ ನೇಮಕಾತಿಗಳನ್ನು ಪ್ರಶಾಸನ ಸಭೆಯು ಮಾಡತಕ್ಕದ್ದು ಮತ್ತು ಮಂಡಳಿ ಮತ್ತು ಪ್ರಶಾಸನ ಸಭೆಯ ನಡುವೆ ಭಿನ್ನಾಭಿಪ್ರಾಯ ಉಂಟಾದ ಸಂದರ್ಭದಲ್ಲಿ, ವಿಷಯವನ್ನು ಕುಲಾಧಿಪತಿಯವರಿಗೆ ಉಲ್ಲೇಖಿಸತಕ್ಕದ್ದು ಮತ್ತು ಅವರ ತೀರ್ಮಾನವು ಅಂತಿಮವಾಗಿರತಕ್ಕದ್ದು:

ಪರಂತು, ವೇತನ ಶ್ರೇಣಿಯ ಗರಿಷ್ಠ ಮಿತಿಯು ಎರಡು ಸಾವಿರದ ಇಪ್ಪತ್ತನಾಲ್ಕು ರೂಪಾಯಿಗಳನ್ನು ಮೀರದಂಥ ಹುದ್ದೆಗಳಿಗೆ ನೇಮಕಾತಿಯನ್ನು ಕುಲಪತಿಯವರು ಮಾಡತಕ್ಕದ್ದು.

(7) ಹಿಂದಿನ ಉಪ-ಪ್ರಕರಣಗಳಲ್ಲಿ ಏನೇ ಇದ್ದರೂ, ರಾಜ್ಯ ಸಿವಿಲ್ ಸೇವೆಗಳ 'ಸಿ' ಮತ್ತು 'ಡಿ' ಗುಂಪುಗಳ ಹುದ್ದೆಗಳಿಗೆ ಸಮನಾದ ವಿಶ್ವವಿದ್ಯಾಲಯದಲ್ಲಿನ ಹುದ್ದೆಗಳಿಗೆ ಈ ಉದ್ದೇಶಕ್ಕಾಗಿ ರಚಿಸಲಾಗುವ ಶಾಸನಗಳಿಗೆ ಅನುಸಾರವಾಗಿ ಮತ್ತು ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅನುಸೂಚಿತ ಜಾತಿಗಳು, ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳಿಗಾಗಿ ಹುದ್ದೆಗಳನ್ನು ಮೀಸಲಿರಿಸುವ ಬಗ್ಗೆ ಹೊರಡಿಸಿದ ಆದೇಶಕ್ಕನುಸಾರವಾಗಿ ಕುಲಪತಿಯವರು ನೇಮಕಾತಿಯನ್ನು ಮಾಡತಕ್ಕದ್ದು.

69. ಅನುಸೂಚಿತ ಜಾತಿ ಮೊದಲಾದವರಿಗಾಗಿ ಬಡ್ತಿ ಖಾಲಿ ಸ್ಥಾನಗಳ ಮೀಸಲಾತಿ.– ವಿಶ್ವವಿದ್ಯಾಲಯದಲ್ಲಿ ಯಾವುದೇ ಹುದ್ದೆಗೆ ಬಡ್ತಿಯ ಮೂಲಕ ನೇಮಕ ಮಾಡುವಲ್ಲಿ, ಅಂಥ ನೇಮಕವನ್ನು ಮಾಡಲು ಅಧಿಕಾರವನ್ನು ಹೊಂದಿರುವ ಪ್ರಾಧಿಕಾರವು, ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಬಡ್ತಿಯ ಖಾಲಿ ಸ್ಥಾನಗಳಲ್ಲಿ ಹುದ್ದೆಗಳ ಮೀಸಲಾತಿಗಾಗಿ ಕಾಲಕಾಲಕ್ಕೆ ಸರ್ಕಾರವು ಹೊರಡಿಸಿದ ಆದೇಶಗಳನ್ನು ಪಾಲಿಸತಕ್ಕದ್ದು.

70. ನೌಕರಿಭರ್ತಿಮಾಡುವ ವಿಧಾನ ಮತ್ತು ಸೇವಾ ಷರತ್ತುಗಳು.– ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ನೌಕರಿಭರ್ತಿಮಾಡುವ ವಿಧಾನ, ನೇಮಕಾತಿ, ಆಯ್ಕೆ ಕಾರ್ಯವಿಧಾನ ವೇತನ ಮತ್ತು ಭತ್ಯೆಗಳು ಮತ್ತು ವಿಶ್ವವಿದ್ಯಾಲಯದ ಸಿಬ್ಬಂದಿಗಳ ಇತರ ಸೇವಾ ಷರತ್ತುಗಳು ಶಾಸನಗಳ ಮೂಲಕ ನಿಯಮಿಸ ಬಹುದಾದಂಥವಾಗಿರತಕ್ಕದ್ದು.

71. ನಿವೃತ್ತಿವೇತನ, ಉಪದಾನ ಇತ್ಯಾದಿ.- (1) ವಿಶ್ವವಿದ್ಯಾಲಯವು, ಅದರ ಉದ್ಯೋಗಿಗಳ ಪ್ರಯೋಜನಕ್ಕಾಗಿ ತಾಸನಗಳ ಮೂಲಕ ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳಿಗೊಳಪಟ್ಟು ತಾನು ಸೂಕ್ತವೆಂದು ಭಾವಿಸಬಹುದಾದಂಥ ನಿವೃತ್ತಿ ವೇತನ, ಉಪದಾನ ಮತ್ತು ಭವಿಷ್ಯನಿಧಿ ಯೋಜನೆಗಳನ್ನು ರಚಿಸತಕ್ಕದ್ದು.

(2) ವಿಶ್ವವಿದ್ಯಾಲಯವು (1)ನೇ ಉಪಪ್ರಕರಣದ ಅಡಿಯಲ್ಲಿ ಭವಿಷ್ಯನಿಧಿಯನ್ನು ಸ್ಥಾಪಿಸಿದ್ದಲ್ಲಿ, ಸರ್ಕಾರವು, ಭವಿಷ್ಯನಿಧಿಗಳ ಅಧಿನಿಯಮ, 1925ರ (1925ರ ಕೇಂದ್ರ ಅಧಿನಿಯಮ III) ಉಪಬಂಧಗಳು, ಅಂಥ ನಿಧಿಗೆ ಅದು ಸರ್ಕಾರಿ ಭವಿಷ್ಯನಿಧಿ ಎಂಬಂತೆ ಅನ್ವಯಿಸತಕ್ಕದ್ದೆಂದು ಘೋಷಿಸಬಹುದು.

(3) ಸರ್ಕಾರಿ ಸೇವೆಯಲ್ಲಿರುವ ವ್ಯಕ್ತಿಗಳನ್ನು ಈ ಅಧಿನಿಯಮದ ಅಡಿಯಲ್ಲಿ, ವಿಶ್ವವಿದ್ಯಾಲಯಕ್ಕೆ ವರ್ಗಾಯಿಸಿದರೆ, ಅವರು, ಕರ್ನಾಟಕ ಸಿವಿಲ್ ಸೇವಾ ನಿಯಮಗಳಡಿ ಅಥವಾ ವಿಶ್ವವಿದ್ಯಾಲಯಕ್ಕೆ ಅವರ ವರ್ಗಾವಣೆಯಾಗುವುದಕ್ಕೆ ಮೊದಲು ಅವರಿಗೆ ಅನ್ವಯವಾಗುತ್ತಿದ್ದಂಥ ಇತರ ನಿಯಮಗಳಡಿ ನಿವೃತ್ತಿ ವೇತನ ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು.

(4) ವಿಶ್ವವಿದ್ಯಾಲಯವು, ಹಣಕಾಸು ಸಮಿತಿಯೊಂದಿಗೆ ಸಮಾಲೋಚಿಸಿ ತಾನು ಉಚಿತವೆಂದು ಭಾವಿಸಬಹುದಾದಂಥ ರೀತಿಯಲ್ಲಿ ಭವಿಷ್ಯನಿಧಿಯನ್ನು ತೊಡಗಿಸಬಹುದು.

ಅಧ್ಯಾಯ IX

ಬೋಧಕೇತರ ಸಿಬ್ಬಂದಿಗಳ ಅಂತರ ವಿಶ್ವವಿದ್ಯಾಲಯ ವರ್ಗಾವಣೆ

72. ಬೋಧಕೇತರ ಸಿಬ್ಬಂದಿಯ ವರ್ಗಾವಣೆ- (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕರಾರು, ಒಪ್ಪಂದ ಅಥವಾ ಯಾವುದೇ ಇತರ ಕಾನೂನಿನಲ್ಲಿ ಮತ್ತು ವಿಶ್ವವಿದ್ಯಾಲಯದ ನೌಕರರಿಗೆ ಅನ್ವಯವಾಗುವ ಸೇವಾ ಷರತ್ತುಗಳಲ್ಲಿ ಏನೇ ಇದ್ದರೂ, ಕುಲಾಧಿಪತಿಯವರು, ರಾಜ್ಯ ಸರ್ಕಾರದೊಡನೆ ಸಮಾಲೋಚಿಸಿ, ಆಡಳಿತಾತ್ಮಕ ಕಾರಣಗಳಿಗಾಗಿ, ವಿಶ್ವವಿದ್ಯಾಲಯದಲ್ಲಿ ಯಾವುದೇ ಹುದ್ದೆಯನ್ನು ಧಾರಣ ಮಾಡಿರುವ ಯಾವೊಬ್ಬ ಬೋಧಕೇತರ ನೌಕರನನ್ನು ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ದಡಿಯಲ್ಲಿ (2001ರ ಕರ್ನಾಟಕ ಅಧಿನಿಯಮ 29) ಅಥವಾ ರಾಜ್ಯ ವಿಧಾನಮಂಡಲದಿಂದ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಸ್ಥಾಪಿಸಲಾದ ಯಾವುದೇ ಇತರ ವಿಶ್ವವಿದ್ಯಾಲಯಕ್ಕೆ ಅಥವಾ ಅಂಥ ಇತರ ವಿಶ್ವವಿದ್ಯಾಲಯದ ಬೋಧಕೇತರ ನೌಕರನನ್ನು ಈ ಅಧ್ಯಾದೇಶದ ಅಡಿಯಲ್ಲಿ ರಚಿಸಲಾದ ವಿಶ್ವವಿದ್ಯಾಲಯಕ್ಕೆ ವರ್ಗಾವಣೆ ಮಾಡಬಹುದು ಮತ್ತು ಹಾಗೆ ವರ್ಗಾವಣೆಗೊಂಡ ಬೋಧಕೇತರ ನೌಕರನು ಯಾವ ವಿಶ್ವವಿದ್ಯಾಲಯಕ್ಕೆ ಅವನನ್ನು ವರ್ಗಾಯಿಸಲಾಗಿದೆಯೋ ಆ ವಿಶ್ವವಿದ್ಯಾಲಯಕ್ಕೆ, ವರ್ಗಾವಣೆಯ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸೇವಾ ಷರತ್ತುಗಳೊಂದಿಗೆ ಹೋಗತಕ್ಕದ್ದು. ವರ್ಗಾವಣೆಗೊಂಡ ತರುವಾಯ ಅಂಥ ಬೋಧಕೇತರ ನೌಕರನು ವರ್ಗಾವಣೆಗೊಂಡ ವಿಶ್ವವಿದ್ಯಾಲಯದ ಸಕ್ಷಮಪ್ರಾಧಿಕಾರದಿಂದ ನೇಮಕಗೊಂಡಿದ್ದಾನೆಂದು ಭಾವಿಸತಕ್ಕದ್ದು:

ಪರಂತು, ಹಾಗೆ ವರ್ಗಾವಣೆಗೊಂಡ ನೌಕರನು ತಾನು ಪ್ರಾರಂಭದಲ್ಲಿ ನೇಮಕಗೊಂಡ ವಿಶ್ವವಿದ್ಯಾಲಯದಲ್ಲಿನ ತನ್ನ ಹುದ್ದೆಯ ಧಾರಣಾಧಿಕಾರವನ್ನು ಉಳಿಸಿಕೊಳ್ಳುವ ಅಥವಾ ತಾನು ವರ್ಗಾವಣೆಗೊಂಡ ವಿಶ್ವವಿದ್ಯಾಲಯದಲ್ಲಿ ವಿಲೀನಗೊಳ್ಳುವ ಆಯ್ಕೆಯ ಅವಕಾಶವನ್ನು ಹೊಂದಿರತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ನೌಕರನ ಅಂಥ ವರ್ಗಾವಣೆಯ ಆದೇಶವನ್ನು ನೀಡುವ ಉದ್ದೇಶಕ್ಕಾಗಿ, ಹಾಗೆ ವರ್ಗಾವಣೆಗೊಂಡ ನೌಕರನು ಧಾರಣ ಮಾಡಿದ್ದ ಹುದ್ದೆಗಳ ಸಂಬಂಧದಲ್ಲಿ ಕುಲಾಧಿಪತಿಯವರನ್ನು ನೇಮಕ ಪ್ರಾಧಿಕಾರವೆಂದು ಭಾವಿಸತಕ್ಕದ್ದು.

(3) ಹಾಗೆ ವರ್ಗಾವಣೆಗೊಂಡ ನೌಕರನು, ರಾಜ್ಯ ಸಿವಿಲ್ ಸೇವೆಗಳ ಸಂವಾದಿ ಹುದ್ದೆಗಳಿಗೆ ಅನ್ವಯವಾಗುವ ಶ್ರೇಣಿಗಳಲ್ಲಿ ದೊರೆಯಬಹುದಾದ ಪ್ರಯಾಣಭತ್ಯೆ, ವರ್ಗಾವಣೆ ಅನುದಾನ ಮತ್ತು ವೈಯಕ್ತಿಕ ಸಾಮಗ್ರಿಗಳ ಸಾಗಣೆ ಪಟ್ಟಿ ಪಡೆಯಲು ಅರ್ಹನಾಗಿರತಕ್ಕದ್ದು.

(4) ಸಾರ್ವಜನಿಕ ಹಿತಾಸಕ್ತಿಯಲ್ಲಿ ಹಾಗೆ ವರ್ಗಾವಣೆಗೊಂಡ ಮತ್ತು ತಾನು ನೇಮಕಗೊಂಡ ವಿಶ್ವವಿದ್ಯಾಲಯದಲ್ಲಿ ತನ್ನ ಧಾರಣಾಧಿಕಾರವನ್ನು ಉಳಿಸಿಕೊಳ್ಳುವ ಆಯ್ಕೆ ಮಾಡಿಕೊಳ್ಳದ ಒಬ್ಬ ನೌಕರನ ಜ್ಯೇಷ್ಠತೆಯನ್ನು ಆಯಾ ಉದ್ಯೋಗಿ ವೃಂದ ಅಥವಾ ಹುದ್ದೆಯಲ್ಲಿ ಆತನು ಮೊದಲು ನೇಮಕಗೊಂಡ ದಿನಾಂಕಕ್ಕೆ ಅನುಗುಣವಾಗಿ ನಿರ್ಧರಿಸತಕ್ಕದ್ದು.

ಅಧ್ಯಾಯ X
ಪಟ್ಟಿಗೆ ಸೇರಿಸುವಿಕೆ ಮತ್ತು ಪದವಿಗಳು

73. ವಿದ್ಯಾರ್ಥಿಗಳ ಪ್ರವೇಶಕ್ಕಾಗಿ ಅರ್ಹತೆ.– ಯಾವ ವಿದ್ಯಾರ್ಥಿಯೂ ಕಾಲ ಕಾಲಕ್ಕೆ ಶಾಸನಗಳಿಂದ ನಿಯಮಿಸಬಹುದಾದಂಥ ಅರ್ಹತೆಗಳನ್ನು ಅವನು ಹೊಂದಿದ್ದ ಹೊರತು, ಪದವಿ ಅಥವಾ ಡಿಪ್ಲೋಮಾ ಅಧ್ಯಯನ ಕ್ರಮಗಳಿಗೆ ಪ್ರವೇಶಕ್ಕೆ ಅರ್ಹನಾಗಿರತಕ್ಕದ್ದಲ್ಲ.

74. ಗೌರವ ಪದವಿಗಳು.– (1) ಪ್ರಶಾಸನ ಸಭೆಯ ಮೂರನೇ ಎರಡರಷ್ಟಕ್ಕೆ ಕಡಿಮೆ ಇಲ್ಲದ ಸದಸ್ಯರು, ಯಾವೊಬ್ಬ ವ್ಯಕ್ತಿಗೆ, ಅವರ ಶ್ರೇಷ್ಠ ಸಾಧನೆ ಮತ್ತು ಸ್ಥಾನಮಾನದ ಕಾರಣದಿಂದಾಗಿ ತಮ್ಮ ಅಭಿಪ್ರಾಯದಲ್ಲಿ ಆಂಥ ಗೌರವ ಪದವಿ ಅಥವಾ ಇತರ ವಿದ್ಯಾವಿಷಯಕ ಪ್ರಶಸ್ತಿಯನ್ನು ಸ್ವೀಕರಿಸಲು ಯೋಗ್ಯ ಮತ್ತು ಸರಿಯಾದ ವ್ಯಕ್ತಿ ಎಂಬ ಆಧಾರದ ಮೇಲೆ ಗೌರವ ಪದವಿ ಅಥವಾ ವಿದ್ಯಾವಿಷಯಕ ಪ್ರಶಸ್ತಿಯನ್ನು ಪ್ರದಾನ ಮಾಡಬೇಕೆಂದು ಶಿಫಾರಸ್ಸು ಮಾಡಿದರೆ, ಪ್ರಶಾಸನ ಸಭೆಯು, ಸಂಬಂಧಪಟ್ಟ ವ್ಯಕ್ತಿಗೆ ಅದನ್ನು ಪ್ರದಾನ ಮಾಡಲು ಕುಲಾಧಿಪತಿಯವರ ಅನುಮೋದನೆಗಾಗಿ ಶಿಫಾರಸ್ಸು ಮಾಡಬಹುದು.

(2) ಗೌರವ ಪದವಿಯನ್ನು ಅಥವಾ ಪ್ರಶಸ್ತಿಯನ್ನು ವಿಶೇಷ ಸಂದರ್ಭಗಳಲ್ಲಿ ಮಾತ್ರ ಪ್ರದಾನ ಮಾಡತಕ್ಕದ್ದು. ಅದನ್ನು ಕೇವಲ ಒಂದು ವಾಡಿಕೆಯ ಕ್ರಮವಾಗಿ ಪ್ರದಾನ ಮಾಡತಕ್ಕದ್ದಲ್ಲ. ಕಾನೂನು ಸಾಹಿತ್ಯ, ಕಾನೂನು ತತ್ವಜ್ಞಾನ, ಕಾನೂನು ವೃತ್ತಿ, ಕಾನೂನು ಜ್ಞಾನ, ನ್ಯಾಯಾಡಳಿತ ಅಥವಾ ಕಾನೂನು ವ್ಯಾಸಂಗ ವಿಭಾಗಗಳಿಗೆ ವಹಿಸಿಕೊಡಲಾಗಿರುವ ಯಾವುದೇ ಇತರೆ ವಿಷಯದ ಮುನ್ನಡೆಗಾಗಿ ಗಣನೀಯ ಕೊಡುಗೆ ನೀಡಿದ ಅಥವಾ ಕಾನೂನು ಶಿಕ್ಷಣದ ಧ್ಯೇಯಗಳಿಗಾಗಿ ವಿಶಿಷ್ಟ ಸೇವೆ ಸಲ್ಲಿಸಿದ ವ್ಯಕ್ತಿಗಳನ್ನು ಅಂಥ ಗೌರವ ಪದವಿಗಳ ನೀಡಿಕೆಯ ಉದ್ದೇಶಕ್ಕಾಗಿ ಗುರುತಿಸತಕ್ಕದ್ದು.

(3) ಪ್ರತಿಷ್ಠಿತ ನ್ಯಾಯವಾದಿಗಳು, ನ್ಯಾಯಾಧೀಶರು, ಜ್ಯೂರಿಗಳು, ರಾಜಕೀಯ ಗಣ್ಯವ್ಯಕ್ತಿಗಳಿಗೆ ಅಥವಾ ಸಾರ್ವಜನಿಕ ಕ್ಷೇತ್ರದ ಧ್ಯೇಯಗಳಿಗಾಗಿ ಗಮನಾರ್ಹ ಕೊಡುಗೆ ನೀಡಿದ ವ್ಯಕ್ತಿಗಳಿಗೆ ಡಾಕ್ಟರ್ ಆಫ್ ಲಾಸ್ (ಎಲ್.ಎಲ್.ಡಿ.) ಪದವಿಯನ್ನು ಹಾನರೀಸ್‌ಕಾಸ (ಗೌರವ ಪದವಿ) ಆಗಿ ಪ್ರದಾನ ಮಾಡಬಹುದು.

75. ಪದವಿ ಅಥವಾ ಡಿಪ್ಲೊಮಾಗಳನ್ನು ಹಿಂತೆಗೆದುಕೊಳ್ಳುವುದು.– (1) ಯಾವೊಬ್ಬ ವ್ಯಕ್ತಿಯು, ಒಂದು ಪದವಿಯನ್ನು, ಡಿಪ್ಲೊಮಾವನ್ನು ಅಥವಾ ಸರ್ಟಿಫಿಕೇಟನ್ನು ಮೋಸದಿಂದ ಅಥವಾ ಪ್ರವೇಶವನ್ನು ಸುಳ್ಳು ಜಾತಿ ಪ್ರಮಾಣಪತ್ರದ ಮೂಲಕ ಪಡೆದುಕೊಂಡಿದ್ದಾನೆಂದು ಕಂಡುಬಂದರೆ, ಪ್ರಶಿಕ್ಷಣ ಪರಿಷತ್ತಿನ ಶಿಫಾರಸ್ಸಿನ ಮೇಲೆ ಪ್ರಶಾಸನ ಸಭೆಯು, ತನ್ನ ಒಟ್ಟು ಬಹುಮತದಿಂದ ಮತ್ತು ಆ ಸಭೆಯಲ್ಲಿ ಹಾಜರಿದ್ದು ಮತ ಚಲಾಯಿಸುವ ಸದಸ್ಯರ ಮೂರನೆ ಎರಡರಷ್ಟಕ್ಕೆ ಕಡಿಮೆಯಿಲ್ಲದ ಬಹುಮತದಿಂದ ಅಂಗೀಕೃತವಾದ ನಿರ್ಣಯದ ಮೂಲಕ

ಅಂಥ ಯಾವೊಬ್ಬ ವ್ಯಕ್ತಿಗೆ ಪ್ರದಾನ ಮಾಡಲಾಗಿದ್ದ ಅಥವಾ ಕೊಡಲಾಗಿದ್ದ ಅಂಥ ಯಾವುದೇ ಪ್ರಶಸ್ತಿ, ಪದವಿ, ಡಿಪ್ಲೊಮಾ ಅಥವಾ ವಿಶೇಷಾಧಿಕಾರವನ್ನು ಹಿಂತೆಗೆದುಕೊಳ್ಳಬಹುದು.

(2) ಈ ಪ್ರಕರಣದ ಅಡಿಯಲ್ಲಿ ಯಾವ ವ್ಯಕ್ತಿಗೂ ಆತನ ವಿರುದ್ಧ ಕೈಗೊಳ್ಳಬೇಕೆಂದು ಪ್ರಸ್ತಾವಿಸಿದ ಕ್ರಮದ ವಿರುದ್ಧ ಕಾರಣ ತೋರಿಸಲು ಅವನಿಗೆ ಅವಕಾಶವನ್ನು ಕೊಟ್ಟ ಹೊರತು, ಅಂಥ ಯಾವುದೇ ಕ್ರಮ ಕೈಗೊಳ್ಳತಕ್ಕದ್ದಲ್ಲ.

(3) ಪ್ರಶಾಸನ ಸಭೆಯು ಅಂಗೀಕರಿಸಿದ ನಿರ್ಣಯದ ಪ್ರತಿಯೊಂದನ್ನು ಸಂಬಂಧಪಟ್ಟ ವ್ಯಕ್ತಿಗೆ ಕೂಡಲೇ ಕಳುಹಿಸತಕ್ಕದ್ದು.

(4) ಪ್ರಶಾಸನ ಸಭೆಯು ತೆಗೆದುಕೊಂಡ ತೀರ್ಮಾನದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು, ಅಂಥ ನಿರ್ಣಯವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ, ಕುಲಾಧಿಪತಿಗೆ ಅಪೀಲು ಸಲ್ಲಿಸಬಹುದು.

(5) ಅಂಥ ಅಪೀಲಿನ ಮೇಲೆ ಕುಲಾಧಿಪತಿಯವರ ತೀರ್ಮಾನವು ಅಂತಿಮವಾಗಿರತಕ್ಕದ್ದು.

ಅಧ್ಯಾಯ XI

ವಿಶ್ವವಿದ್ಯಾಲಯ ಪುನರವಲೋಕನ ಆಯೋಗ

76. ವಿಶ್ವವಿದ್ಯಾಲಯ ಪುನರವಲೋಕನ ಆಯೋಗದ ನೇಮಕಾತಿ.- (1) ಕುಲಾಧಿಪತಿಯವರು, ವಿಶ್ವವಿದ್ಯಾಲಯದ ಕಾರ್ಯ ನಿರ್ವಹಣೆಯನ್ನು ಪುನರವಲೋಕಿಸಲು ಮತ್ತು ಶಿಫಾರಸ್ಸುಗಳನ್ನು ಮಾಡಲು ಪ್ರತಿ ಐದು ವರ್ಷಗಳಿಗೊಮ್ಮೆ ಒಂದು ಆಯೋಗವನ್ನು ರಚಿಸತಕ್ಕದ್ದು.

(2) ಆಯೋಗವು, ರಾಜ್ಯ ಸರ್ಕಾರದ ಶಿಫಾರಸ್ಸಿನ ಮೇಲೆ ಕುಲಾಧಿಪತಿಯವರಿಂದ ನೇಮಕಗೊಂಡ ಕನಿಷ್ಠ ಮೂವರು ಶ್ರೇಷ್ಠ ಶಿಕ್ಷಣ ತಜ್ಞರನ್ನು ಒಳಗೊಂಡಿರತಕ್ಕದ್ದು. ಅವರಲ್ಲಿ ಒಬ್ಬರು ಅಧ್ಯಕ್ಷರಾಗಿರತಕ್ಕದ್ದು.

(3) ಸದಸ್ಯರುಗಳ ನೇಮಕಾತಿಯ ನಿಬಂಧನೆಗಳು ಮತ್ತು ಷರತ್ತುಗಳು ಕುಲಾಧಿಪತಿಯವರು ನಿರ್ಧರಿಸಬಹುದಾದಂತೆ ಇರತಕ್ಕದ್ದು.

(4) ಆಯೋಗವು, ತಾನು ಸೂಕ್ತವೆನಿಸಬಹುದಾದಂಥ ವಿಚಾರಣೆಯನ್ನು ನಡೆಸಿದ ತರುವಾಯ, ಕುಲಾಧಿಪತಿಯವರಿಗೆ ಮತ್ತು ರಾಜ್ಯ ಸರ್ಕಾರಕ್ಕೆ ತನ್ನ ಶಿಫಾರಸ್ಸುಗಳನ್ನು ಕಳುಹಿಸತಕ್ಕದ್ದು.

(5) ಕುಲಾಧಿಪತಿಯವರು, ರಾಜ್ಯ ಸರ್ಕಾರದೊಡನೆ ಸಮಾಲೋಚಿಸಿದ ತರುವಾಯ ಆ ಶಿಫಾರಸ್ಸುಗಳ ಮೇಲೆ ತಾವು ಸೂಕ್ತವೆಂದು ಭಾವಿಸಬಹುದಾದಂಥ ಕ್ರಮ ಕೈಗೊಳ್ಳಬಹುದು.

(6) ರಾಜ್ಯ ಸರ್ಕಾರವು, ಶಿಫಾರಸುಗಳ ಪ್ರತಿಯನ್ನು ಅವರ ಮೇಲೆ ಕೈಗೊಂಡ ಕ್ರಮಗಳನ್ನೊಳಗೊಂಡ ವಿವರಣಾ ಪತ್ರದೊಡನೆ ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

ಅಧ್ಯಾಯ XII

ಪರೀಕ್ಷೆಯ ಕೆಲಸದಲ್ಲಿ ತೊಡಗಿರುವ ವ್ಯಕ್ತಿಗಳ ಪ್ರಕಾರ್ಯಗಳು ಮತ್ತು ಜವಾಬ್ದಾರಿಗಳು

77. ಅಧ್ಯಾಪಕನ ಕರ್ತವ್ಯಗಳು.- (1) ವಿಶ್ವವಿದ್ಯಾಲಯದ ಅಥವಾ ಸಂಯೋಜಿತ ಕಾಲೇಜಿನ ಪ್ರತಿಯೊಬ್ಬ ಅಧ್ಯಾಪಕನು, ಕಾಲಕಾಲಕ್ಕೆ ವಿಶ್ವವಿದ್ಯಾಲಯದಿಂದ ಅವನಿಗೆ ವಹಿಸಲಾದ ಬೋಧನೆ, ಸಂಶೋಧನೆ, ಪರೀಕ್ಷೆ ಅಥವಾ ಶೈಕ್ಷಣಿಕ ಕಾರ್ಯಗಳಿಗೆ ಸಂಬಂಧಪಟ್ಟ ಕೆಲಸಗಳನ್ನು ನಿರ್ವಹಿಸತಕ್ಕದ್ದು.

(2) (1)ನೇ ಉಪಪ್ರಕರಣದ ಉದ್ದೇಶಗಳಿಗಾಗಿ, ವಿಶ್ವವಿದ್ಯಾಲಯದ ಮತ್ತು ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡ ಕಾಲೇಜಿನ ಸೇವೆಯಲ್ಲಿರುವ ಬೋಧಕ ಮತ್ತು ಬೋಧಕೇತರ ನೌಕರರನ್ನು ವಿಶ್ವವಿದ್ಯಾಲಯವು ಆಡಳಿತಾತ್ಮಕವಾಗಿ ನಿಯಂತ್ರಿಸತಕ್ಕದ್ದು ಮತ್ತು ಅವರು ಕಾಲಕಾಲಕ್ಕೆ ವಿಶ್ವವಿದ್ಯಾಲಯವು ನೀಡಿದ ಸೂಚನೆಗಳು ಅಥವಾ ಆದೇಶಗಳನ್ನು ಪಾಲಿಸತಕ್ಕದ್ದು.

78. ಪರೀಕ್ಷಾ ಕಾರ್ಯವನ್ನು ನೆರವೇರಿಸುವ ಹೊಣೆ.– (1) ಯಾವ ವ್ಯಕ್ತಿಗೆ ಪ್ರಶ್ನೆ ಪತ್ರಿಕೆಯನ್ನು ಸಿದ್ಧಪಡಿಸುವುದು, ಪರಿವೀಕ್ಷಣೆ, ಮೇಲ್ವಿಚಾರಣೆ, ಮೌಲ್ಯಮಾಪನ, ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸುವುದು, ಪ್ರಶ್ನೆ ಪತ್ರಿಕೆಗಳ ಮತ್ತು ಉತ್ತರ ಪತ್ರಿಕೆಗಳ ಮುದ್ರಣ ಮತ್ತು ಅಂಕಪಟ್ಟಿಯನ್ನು ಸಿದ್ಧಪಡಿಸುವುದೇ ಮುಂತಾದ ಪರೀಕ್ಷೆಗೆ ಸಂಬಂಧಿಸಿದ ಕಾರ್ಯವನ್ನು ಮತ್ತು ಅದಕ್ಕೆ ಪ್ರಾಸಂಗಿಕವಾದ ಮತ್ತು ಅದಕ್ಕೆ ಸಂಬಂಧಿಸಿದಂಥ ಎಲ್ಲ ಚಟುವಟಿಕೆಗಳನ್ನು ವಹಿಸಲಾಗಿದೆಯೋ ಆ ವ್ಯಕ್ತಿಯು, ಅಂಥ ಕರ್ತವ್ಯಗಳನ್ನು ಶೈಕ್ಷಣಿಕ ಗುಣಮಟ್ಟಗಳನ್ನು ಸಾಧಿಸುವುದಕ್ಕಾಗಿ ವಿವೇಕದಿಂದ ಮತ್ತು ಅತ್ಯಂತ ಪ್ರಾಮಾಣಿಕತೆಯಿಂದ ನಿರ್ವಹಿಸತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಪರೀಕ್ಷಾ ಕಾರ್ಯವನ್ನು ಹಂಚಿಕೆ ಮಾಡಲಾಗಿರುವ ಯಾವೊಬ್ಬ ವ್ಯಕ್ತಿಯು, ಕರ್ತವ್ಯಗಳ ಉಲ್ಲಂಘನೆಯ ತಪ್ಪಿತಸ್ಥನೆಂದು ಕಂಡು ಬಂದರೆ ಆಥವಾ ದುರ್ನಡತೆಯಲ್ಲಿ ಪಾಲ್ಗೊಂಡಿದ್ದರೆ, ಅಪರಾಧ ನಿರ್ಣಯವಾದ ತರುವಾಯ, ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(3) ಕುಲಸಚಿವರು (ಮೌಲ್ಯಮಾಪನ) ನೀಡಿದ ದೂರಿನ ಮೇಲಲ್ಲದೆ ಈ ಪ್ರಕರಣದ ಅಡಿಯಲ್ಲಿ, ದಂಡನೀಯವಾದ ಒಂದು ಅಪರಾಧದ ಅಥವಾ ಅಂಥ ಅಪರಾಧದ ದುಷ್ಪ್ರೇರಣೆಯ ಸಂಜ್ಞಾನವನ್ನು ಯಾವುದೇ ನ್ಯಾಯಾಲಯವು ತೆಗೆದುಕೊಳ್ಳತಕ್ಕದ್ದಲ್ಲ.

79. ಅಪರಾಧದ ದುಷ್ಪ್ರೇರಣೆಗಾಗಿ ಶಿಕ್ಷೆ.– 68ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಒಂದು ಅಪರಾಧವನ್ನು ಪ್ರಚೋದಿಸುವ ಅಥವಾ ದುಷ್ಪ್ರೇರಿಸುವ ಯಾವೊಬ್ಬ ವ್ಯಕ್ತಿಯು, ಅಪರಾಧ ನಿರ್ಣಯವಾದ ತರುವಾಯ, ಆ ಪ್ರಕರಣದಲ್ಲಿ ಅದಕ್ಕಾಗಿ ಉಪಬಂಧಿಸಲಾದ ಶಿಕ್ಷೆಯಿಂದಲೇ ದಂಡಿತನಾಗತಕ್ಕದ್ದು.

80. ಖಾಸಗಿ ಟ್ಯೂಷನ್ ಮೇಲೆ ಪ್ರತಿಬಂಧ.– ವಿಶ್ವವಿದ್ಯಾಲಯದ ಅಥವಾ ಸಂಯೋಜಿತ ಕಾಲೇಜಿನ ಯಾವೊಬ್ಬ ಅಧ್ಯಾಪಕನು, ವಿಶ್ವವಿದ್ಯಾಲಯದ ಆಥವಾ ಅವನನ್ನು ನೇಮಕಮಾಡಿದ ಪ್ರಾಧಿಕಾರಿಯ ಅನುಮತಿ ಇಲ್ಲದೆ, ಖಾಸಗಿ ಟ್ಯೂಷನ್ ನೀಡುವುದರಲ್ಲಿ ಅಥವಾ ಯಾವುದೇ ಇತರ ನಿಯೋಜನೆ ಅಥವಾ ಉದ್ಯೋಗದಲ್ಲಿ ತೊಡಗತಕ್ಕದ್ದಲ್ಲ.

ಅಧ್ಯಾಯ XIII
ಸಾಮಾನ್ಯ

81. ಪದವನ್ನು ತೆರವು ಮಾಡುವುದು.– (1) ಪದನಿಮಿತ್ತ ಸದಸ್ಯನನ್ನು ಹೊರತುಪಡಿಸಿ, ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ನಿಕಾಯದ ಯಾವೊಬ್ಬ ಸದಸ್ಯನು, ತನ್ನ ಪದಕ್ಕೆ ರಾಜೀನಾಮೆ ನೀಡಬಹುದು. ಸದಸ್ಯನು ಕೈಯಿಂದ ಬರೆದ ರಾಜೀನಾಮೆ ಪತ್ರವನ್ನು ಕುಲಪತಿಯವರಿಗೆ ಕಳುಹಿಸಿಕೊಡತಕ್ಕದ್ದು. ಅಂಥ ರಾಜೀನಾಮೆ ಪತ್ರವು ಅದನ್ನು ಅಂಗೀಕರಿಸಿದ ಮತ್ತು ಸಂಬಂಧಪಟ್ಟವರಿಗೆ ತಿಳಿಸಿದ ಕೂಡಲೇ ಜಾರಿಗೆ ಬರತಕ್ಕದ್ದು.

(2) ಒಂದು ನಿರ್ದಿಷ್ಟ ನಿಕಾಯದ ಸದಸ್ಯನಾಗಿ ಅಥವಾ ಶಿಕ್ಷಕನಾಗಿ ಅಥವಾ ಹಾಗೆ ಸ್ಪಷ್ಟವಾಗಿ ಹೇಳಿರುವಾಗ ನಿರ್ದಿಷ್ಟ ಹುದ್ದೆಯನ್ನು ಹೊಂದಿರುವ ಸಾಮರ್ಥ್ಯದಿಂದಾಗಿ ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ನಿಕಾಯದ ಸದಸ್ಯನಾಗಿರುವ ವ್ಯಕ್ತಿಯು ಹಾಗೆ ನಿರ್ದಿಷ್ಟ ನಿಕಾಯದ ಒಬ್ಬ ಸದಸ್ಯನಾಗಿರುವುದು ಅಥವಾ ನಿರ್ದಿಷ್ಟ ಹುದ್ದೆಯನ್ನು ಹೊಂದಿರುವುದು ನಿಂತು ಹೋದ ತರುವಾಯ ವಿಶ್ವವಿದ್ಯಾಲಯದ ಪ್ರಾಧಿಕಾರದ ಅಥವಾ ನಿಕಾಯದ ಸದಸ್ಯನಾಗಿ ಮುಂದುವರಿಯತಕ್ಕದ್ದಲ್ಲ:

ಪರಂತು, ವಯೋನಿವೃತ್ತಿ ಹೊಂದಿದಂಥ ಶಿಕ್ಷಕರು ಶೈಕ್ಷಣಿಕ ವರ್ಷದ ಕೊನೆಯವರೆಗೆ ಮತ್ತು ನೇಮಕಾತಿಯ ಮೇಲೆ ಮುಂದುವರೆದಿದ್ದರೆ ಅಂಥ ಪ್ರಾಧಿಕಾರ ಅಥವಾ ನಿಕಾಯದ ಸದಸ್ಯತ್ವವು ಅವರ ವಯೋನಿವೃತ್ತಿಯ ದಿನಾಂಕದಿಂದ ನಿಂತುಹೋಗತಕ್ಕದ್ದು.

(3) ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ನಿಕಾಯದ ಸದಸ್ಯನು ನೈತಿಕ ಪತನವನ್ನು ಒಳಗೊಂಡ ಯಾವುದೇ ಅಪರಾಧಕ್ಕಾಗಿ ನ್ಯಾಯಾಲಯದಿಂದ ನಿರ್ಣೀತ ಅಪರಾಧಿಯಾದರೆ, ಅವನು ಸದಸ್ಯನಾಗಿರುವುದು ನಿಂತುಹೋಗತಕ್ಕದ್ದು.

82. **ಆಕಸ್ಮಿಕ ಖಾಲಿ ಸ್ಥಾನಗಳನ್ನು ಭರ್ತಿ ಮಾಡುವುದು.**- ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಅಥವಾ ಇತರ ನಿಕಾಯದ ಪದನಿಮಿತ್ತ ಸದಸ್ಯರಲ್ಲದ ಸದಸ್ಯರ ಪೈಕಿ ಮರಣ, ರಾಜೀನಾಮೆ, ತೆಗೆದುಹಾಕುವಿಕೆ ಅಥವಾ ಅನ್ಯಥಾ ಕಾರಣದಿಂದ ಉಂಟಾಗುವ ಎಲ್ಲ ಆಕಸ್ಮಿಕ ಖಾಲಿ ಸ್ಥಾನಗಳನ್ನು, ಯಾವ ಸದಸ್ಯನ ಸ್ಥಾನ ಖಾಲಿ ಆಗಿದೆಯೋ ಆ ಸದಸ್ಯನನ್ನು ನಾಮನಿರ್ದೇಶನ ಮಾಡಿದ ವ್ಯಕ್ತಿ ಅಥವಾ ನಿಕಾಯವು ಆದಷ್ಟು ಬೇಗನೇ ಭರ್ತಿ ಮಾಡತಕ್ಕದ್ದು ಮತ್ತು ಹಾಗೆ ನೇಮಕಗೊಂಡ ವ್ಯಕ್ತಿಯು ಯಾವ ವ್ಯಕ್ತಿಯ ಸ್ಥಾನದಲ್ಲಿ ಭರ್ತಿಗೊಂಡಿರುವನೋ ಆ ವ್ಯಕ್ತಿಯು ಸದಸ್ಯನಾಗಿರುತ್ತಿದ್ದ ಉಳಿದ ಅವಧಿಯವರೆಗೆ ಅಂಥ ಪ್ರಾಧಿಕಾರ ಅಥವಾ ನಿಕಾಯದ ಸದಸ್ಯನಾಗಿರತಕ್ಕದ್ದು:

ಪರಂತು, ಅಂಥ ಖಾಲಿ ಸ್ಥಾನವನ್ನು ಮೇಲೆ ಹೇಳಿದ ರೀತಿಯಲ್ಲಿ ಭರ್ತಿ ಮಾಡಲು ಯಾವುದೇ ವ್ಯಕ್ತಿಯ ನಾಮನಿರ್ದೇಶನ ಮಾಡುವುದನ್ನು ಕಾಯ್ದಿರಿಸಿ, ಆತನನ್ನು ನಾಮನಿರ್ದೇಶನ ಮಾಡಿದ ವ್ಯಕ್ತಿ ಅಥವಾ ನಿಕಾಯವು ಈ ಅಧ್ಯಾದೇಶದ ಉಪಬಂಧಗಳ ಅಡಿಯಲ್ಲಿ ಅಂಥ ಖಾಲಿ ಸ್ಥಾನವನ್ನು ಭರ್ತಿಮಾಡಲು ವಿದ್ಯಾರ್ಹತೆಯುಳ್ಳ ವ್ಯಕ್ತಿಯೊಬ್ಬರನ್ನು ನಾಮನಿರ್ದೇಶನ ಮಾಡುವ ಮೂಲಕ ಭರ್ತಿ ಮಾಡತಕ್ಕದ್ದು ಮತ್ತು ಹಾಗೆ ನಾಮನಿರ್ದೇಶಿತನಾದ ಯಾವೊಬ್ಬ ವ್ಯಕ್ತಿಯು ಅಂಥ ಪ್ರಾಧಿಕಾರ ಅಥವಾ ನಿಕಾಯದ ಸದಸ್ಯನ ಪದವನ್ನು ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಇನ್ನೊಬ್ಬ ವ್ಯಕ್ತಿಯನ್ನು ನಾಮನಿರ್ದೇಶನ ಮಾಡುವವರೆಗೆ ಧಾರಣಮಾಡತಕ್ಕದ್ದು.

83. **ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.**- ಈ ಅಧಿನಿಯಮದ, ಅಥವಾ ಅದರ ಅಡಿಯಲ್ಲಿ ಮಾಡಿದ ಶಾಸನಗಳ ಅಥವಾ ಪರ್ಯಾದೇಶಗಳ ಅಥವಾ ವಿನಿಯಮಗಳ ಯಾವುವೇ ಉಪಬಂಧಗಳ ಅನುಸರಣೆಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಯಾವುದೇ ಕೃತ್ಯಕ್ಕಾಗಿ ವಿಶ್ವವಿದ್ಯಾಲಯದ ಯಾವೊಬ್ಬ ಉದ್ಯೋಗಿಯ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

84. **ಖಾಲಿ ಸ್ಥಾನಗಳಿಂದಾಗಿ ವಿಶ್ವವಿದ್ಯಾಲಯ ಪ್ರಾಧಿಕಾರಗಳ ವ್ಯವಹರಣೆಗಳು ಅಸಿಂಧುವಾಗತಕ್ಕದ್ದಲ್ಲ.**- ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ಇತರ ನಿಕಾಯದ ಯಾವುದೇ ಕಾರ್ಯ ಅಥವಾ ವ್ಯವಹರಣೆಯು, ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಅಥವಾ ಇತರ ನಿಕಾಯದಲ್ಲಿ ಉಂಟಾಗಿರುವ ಯಾವುದೇ ಖಾಲಿ ಸ್ಥಾನ ಅಥವಾ ಯಾವೊಬ್ಬ ಸದಸ್ಯನ ಚುನಾವಣೆ ಅಥವಾ ನೇಮಕಾತಿಯಲ್ಲಿನ ಯಾವುದೇ

ದೋಷ ಅಥವಾ ಕ್ರಮ ಬಾಹಿರತೆಯ ಕಾರಣದಿಂದಾಗಿ ಮಾತ್ರವೇ ಅಥವಾ ಪ್ರಕರಣದ ಗುಣಾರ್ಹತೆಗೆ ಬಾಧಕವಾಗದಿರುವ ಅಂಥ ಕಾರ್ಯದಲ್ಲಿನ ಅಥವಾ ವ್ಯವಹರಣೆಗಳಲ್ಲಿನ ಯಾವುದೇ ದೋಷ ಅಥವಾ ಕ್ರಮಬಾಹಿರತೆಯ ಕಾರಣದಿಂದ ಮಾತ್ರವೇ ಅಸಿಂಧುವಾಗತಕ್ಕದ್ದಲ್ಲ.

85. **ವಿಶ್ವವಿದ್ಯಾಲಯದ ಮತ್ತು ನಿಕಾಯಗಳ ರಚನೆ** ಕುರಿತು ವಿವಾದಗಳು.- ಯಾವೊಬ್ಬ ವ್ಯಕ್ತಿಯು ವಿಶ್ವವಿದ್ಯಾಲಯದ ಯಾವುದೇ ನಿಕಾಯದ ಸದಸ್ಯನಾಗಿ ಕ್ರಮಬದ್ಧವಾಗಿ ಚುನಾಯಿತನಾಗಿದ್ದಾನೆಯೇ ಅಥವಾ ನಾಮನಿರ್ದೇಶಿತನಾಗಿದ್ದಾನೆಯೇ ಅಥವಾ ಸದಸ್ಯನಾಗಲು ಹಕ್ಕುಳ್ಳವನಾಗಿದ್ದಾನೆಯೇ ಎಂಬ ಯಾವುದೇ ಪ್ರಶ್ನೆಯು ಉದ್ಭವಿಸಿದರೆ ಆ ಪ್ರಶ್ನೆಯನ್ನು ಕುಲಾಧಿಪತಿಯವರಿಗೆ ಉಲ್ಲೇಖಿಸತಕ್ಕದ್ದು ಮತ್ತು ಅದರ ಮೇಲಿನ ಅವರ ತೀರ್ಮಾನವು ಅಂತಿಮವಾಗಿರತಕ್ಕದ್ದು.

86. **ಪ್ರಥಮ ಕುಲಪತಿಯವರ ತಾತ್ಕಾಲಿಕ ಅಧಿಕಾರಗಳು.**- (1) ಈ ಅಧಿನಿಯಮದ ಅಡಿಯಲ್ಲಿ ಏನೇ ಇದ್ದರೂ ಪ್ರಥಮ ಕುಲಪತಿಯವರು ಕುಲಾಧಿಪತಿಯವರ ಪೂರ್ವ ಅನುಮೋದನೆಯೊಂದಿಗೆ ಮತ್ತು ಅದಕ್ಕೆ ಒಳಪಟ್ಟು ಅಥವಾ ಅನ್ಯಥಾ ಈ ಅಧಿನಿಯಮದ, ಉಪಬಂಧಗಳನ್ನು ನೆರವೇರಿಸುವ ಉದ್ದೇಶಕ್ಕಾಗಿ ವಿಶ್ವವಿದ್ಯಾಲಯದ ಎಲ್ಲ ಅಥವಾ ಯಾವುವೇ ಪ್ರಕಾರ್ಯಗಳನ್ನು ನಿರ್ವಹಿಸಬಹುದು ಮತ್ತು ಆ ಉದ್ದೇಶಕ್ಕಾಗಿ ಈ ಅಧಿನಿಯಮದ ಅಡಿಯಲ್ಲಿ ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದಿಂದ ಚಲಾಯಿಸಬೇಕಾದ ಯಾವುದೇ ಅಧಿಕಾರವನ್ನು ಅಥವಾ ನೆರವೇರಿಸಬೇಕಾದ ಯಾವುವೇ ಪ್ರಕಾರ್ಯಗಳನ್ನು, ಈ ಅಧಿನಿಯಮದಲ್ಲಿ ಉಪಬಂಧಿಸಲಾದಂತೆ ಅಂಥ ಪ್ರಾಧಿಕಾರವು ಅಸ್ತಿತ್ವಕ್ಕೆ ಬರುವವರೆಗೆ ಚಲಾಯಿಸಬಹುದು ಅಥವಾ ನೆರವೇರಿಸಬಹುದು.

(2) ಪ್ರಶಾಸನ ಸಭೆ ಮತ್ತು ವಿಶ್ವವಿದ್ಯಾಲಯದ ಇತರ ಪ್ರಾಧಿಕಾರಗಳನ್ನು, ಈ ಅಧಿನಿಯಮವು ಪ್ರಾರಂಭಗೊಂಡ ದಿನಾಂಕದಿಂದ ಆರು ತಿಂಗಳೊಳಗೆ ಅಥವಾ ಅಧಿಸೂಚನೆಯ ಮೂಲಕ ಸರ್ಕಾರವು ನಿರ್ದೇಶಿಸಬಹುದಾದ ಒಂದು ವರ್ಷಕ್ಕೆ ಮೀರದಂಥ ಹೆಚ್ಚಿನ ಅವಧಿಯೊಳಗಾಗಿ ರಚಿಸಲು ವ್ಯವಸ್ಥೆ ಮಾಡುವುದು ಪ್ರಥಮ ಕುಲಪತಿಯವರ ಕರ್ತವ್ಯವಾಗಿರತಕ್ಕದ್ದು.

(3) ಪ್ರಥಮ ಕುಲಪತಿಯವರು, ಕುಲಾಧಿಪತಿಯವರೊಂದಿಗೆ ಸಮಾಲೋಚಿಸಿ, ವಿಶ್ವವಿದ್ಯಾಲಯದ ಕಾರ್ಯನಿರ್ವಹಣೆಗೆ ಅವಶ್ಯವಾಗಬಹುದಾದಂಥ ಶಾಸನಗಳನ್ನು ರಚಿಸತಕ್ಕದ್ದು.

(4) ತಕ್ಷಣ ಅವಶ್ಯಕವಾಗಬಹುದಾದಂಥ ಕರಡು ಶಾಸನಗಳನ್ನು ರಚಿಸುವುದು ಮತ್ತು ಅನುಮೋದನೆಗಾಗಿ ಅವುಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸುವುದು ಪ್ರಥಮ ಕುಲಪತಿಯವರ ಕರ್ತವ್ಯವಾಗಿರತಕ್ಕದ್ದು.

(5) ಈ ಅಧಿನಿಯಮದಲ್ಲಿ ಏನೇ ಇದ್ದರೂ ಮತ್ತು ಅಧಿನಿಯಮದ ಅಡಿಯಲ್ಲಿ ಒಂದು ಪ್ರಾಧಿಕಾರವನ್ನು ಕ್ರಮಬದ್ಧವಾಗಿ ರಚಿಸುವಂಥ ಕಾಲದವರೆಗೆ ಪ್ರಥಮ ಕುಲಪತಿಯವರು ಈ ಅಧಿನಿಯಮದ ಅಡಿಯಲ್ಲಿ ಅಂಥ ಪ್ರಾಧಿಕಾರದ ಯಾವುವೇ ಅಧಿಕಾರಗಳನ್ನು ಚಲಾಯಿಸಲು ಮತ್ತು ಕರ್ತವ್ಯಗಳನ್ನು ನೆರವೇರಿಸಲು ತಾತ್ಕಾಲಿಕವಾಗಿ ಯಾವೊಬ್ಬ ಅಧಿಕಾರಿಯನ್ನು ನೇಮಕ ಮಾಡಬಹುದು ಅಥವಾ ಯಾವುದೇ ಸಮಿತಿಯನ್ನು ರಚಿಸಬಹುದು.

87. **ಶಾಸನಗಳು, ಪರ್ಯಾದೇಶಗಳು, ಇತ್ಯಾದಿಗಳ ಮುಂದುವರಿಕೆ.**- ಈ ಅಧಿನಿಯಮದ ಸೂಕ್ತ ಉಪಬಂಧಗಳ ಅಡಿಯಲ್ಲಿ ಶಾಸನಗಳು, ಪರ್ಯಾದೇಶಗಳು, ವಿನಿಯಮಗಳು ಮತ್ತು ನಿಯಮಗಳನ್ನು ರಚಿಸುವವರೆಗೆ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ದ ಅಡಿಯಲ್ಲಿ ರಚಿಸಿದ ಮತ್ತು ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿರುವ ಶಾಸನಗಳು, ಪರ್ಯಾದೇಶಗಳು, ವಿನಿಯಮಗಳು ಮತ್ತು ನಿಯಮಗಳನ್ನು ಸರ್ಕಾರದ ಮೂಲಕ ಪಡೆದ ಕುಲಾಧಿಪತಿಯವರ ಅನುಮೋದನೆಯೊಂದಿಗೆ ಕುಲಪತಿಯವರು ಅದರಲ್ಲಿ ಮಾಡಬಹುದಾದ ಅಳವಡಿಕೆಗಳು ಅಥವಾ ಮಾರ್ಪಾಟುಗಳಿಗೆ ಒಳಪಟ್ಟು ಈ ಅಧಿನಿಯಮದ ಉಪಬಂಧಗಳೊಂದಿಗೆ ಅವುಗಳು ಅಸಂಗತವಾಗದಿರುವಷ್ಟರ

ಮಟ್ಟಿಗೆ ಅವು ಈ ಅಧಿನಿಯಮದ ಸೂಕ್ತ ಉಪಬಂಧಗಳ ಅಡಿಯಲ್ಲಿ ರಚಿಸಲಾದ ಶಾಸನಗಳು, ಪರ್ಯಾದೇಶಗಳು, ವಿನಿಯಮಗಳು ಮತ್ತು ನಿಯಮಗಳೆಂದು ಭಾವಿಸತಕ್ಕದ್ದು.

88. ಕೆಲವು ಪರೀಕ್ಷೆಗಳ ಬಗ್ಗೆ ಉಳಿಸುವಿಕೆ.- ಈ ಅಧಿನಿಯಮ, ಶಾಸನಗಳು, ಪರ್ಯಾದೇಶಗಳು ಅಥವಾ ವಿನಿಯಮಗಳಲ್ಲಿ ಏನೇ ಇದ್ದರೂ,-

(ಎ) ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ, ಯಾವುದೇ ರಾಜ್ಯ ಕಾನೂನಿನಿಂದ ಸ್ಥಾಪನೆಯಾದ ಅಥವಾ ಸ್ಥಾಪನೆಯಾಗಿದೆ ಎಂದು ಭಾವಿಸಲಾದ ಬೆಂಗಳೂರು ವಿಶ್ವವಿದ್ಯಾಲಯ, ತುಮಕೂರು ವಿಶ್ವವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾಲಯ, ಕುವೆಂಪು ವಿಶ್ವವಿದ್ಯಾಲಯ, ಗುಲ್ಬರ್ಗಾ ವಿಶ್ವವಿದ್ಯಾಲಯ, ಮಹಿಳಾ ವಿಶ್ವವಿದ್ಯಾಲಯ ಅಥವಾ ಮಂಗಳೂರು ವಿಶ್ವವಿದ್ಯಾಲಯದ ಕಾನೂನು ಪದವಿಗಾಗಿ ಅಧ್ಯಯನ ಮಾಡುತ್ತಿದ್ದ ಯಾವೊಬ್ಬ ವಿದ್ಯಾರ್ಥಿಗೆ, ಅಂಥ ಪರೀಕ್ಷೆಗಳ ಬಗ್ಗೆ ಈ ವಿಶ್ವವಿದ್ಯಾಲಯವು ವಿರ್ಪಾಟು ಮಾಡುವವರೆಗೆ, ಆ ಅಧಿನಿಯಮಗಳ ಅಡಿಯಲ್ಲಿ ಜಾರಿಯಲ್ಲಿರುವ ವಿನಿಯಮಗಳಿಗನುಸಾರವಾಗಿ ಬೆಂಗಳೂರು ವಿಶ್ವವಿದ್ಯಾಲಯ, ತುಮಕೂರು ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾಲಯ, ಕುವೆಂಪು ವಿಶ್ವವಿದ್ಯಾಲಯ, ಗುಲ್ಬರ್ಗಾ ವಿಶ್ವವಿದ್ಯಾಲಯ, ಮಹಿಳಾ ವಿಶ್ವವಿದ್ಯಾಲಯ, ಮಂಗಳೂರು ವಿಶ್ವವಿದ್ಯಾಲಯಗಳ ಪರೀಕ್ಷೆಗಳಿಗೆ ಪ್ರವೇಶ ನೀಡಬಹುದು ಮತ್ತು ಅಂಥ ಪರೀಕ್ಷೆಯ ಫಲಿತಾಂಶ ಬಂದ ಮೇಲೆ ಅಂಥ ವಿಶ್ವವಿದ್ಯಾಲಯಗಳ ಯಾವ ಕಾನೂನು ಪದವಿಗೆ ಆವನು ಅರ್ಹನಾಗಿರುವನೋ ಆ ಪದವಿಯನ್ನು ಆತನಿಗೆ ಪ್ರದಾನ ಮಾಡಬಹುದು.

(ಬಿ) ಯಾವುದೇ ರಾಜ್ಯ ಕಾನೂನಿಂದ ಸ್ಥಾಪನೆಯಾದ ಅಥವಾ ಸ್ಥಾಪನೆಯಾಗಿದೆ ಎಂದು ಭಾವಿಸಲಾದ ಬೆಂಗಳೂರು ವಿಶ್ವವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾಲಯ, ತುಮಕೂರು ವಿಶ್ವವಿದ್ಯಾಲಯ, ಗುಲ್ಬರ್ಗಾ ವಿಶ್ವವಿದ್ಯಾಲಯ, ಮಂಗಳೂರು ವಿಶ್ವವಿದ್ಯಾಲಯ, ಮಹಿಳಾ ವಿಶ್ವವಿದ್ಯಾಲಯ ಅಥವಾ ಕುವೆಂಪು ವಿಶ್ವವಿದ್ಯಾಲಯವು ಯಾವುದೇ ಪರೀಕ್ಷೆಯನ್ನು ನಡೆಸಿದ್ದು, ಅದರ ಫಲಿತಾಂಶವು ಪ್ರಕಟಿತವಾಗಿದ್ದು, ಆದರೆ ಅವುಗಳಿಗೆ ಸಂಬಂಧಪಟ್ಟ ಪದವಿಗಳನ್ನು ಪ್ರದಾನ ಮಾಡಿರದಿದ್ದರೆ ಅಥವಾ ನೀಡಿಲ್ಲದಿದ್ದರೆ ಅಥವಾ ಅಂಥ ಪರೀಕ್ಷೆಯ ಫಲಿತಾಂಶವನ್ನು, ಸದರಿ ವಿಶ್ವವಿದ್ಯಾಲಯವು ಪ್ರಕಟಿಸಿಲ್ಲದಿದ್ದರೆ, ಆಗ ಅಂಥ ಪರೀಕ್ಷೆಯನ್ನು ಬೆಂಗಳೂರು ವಿಶ್ವವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾಲಯ, ತುಮಕೂರು ವಿಶ್ವವಿದ್ಯಾಲಯ, ಕುವೆಂಪು ವಿಶ್ವವಿದ್ಯಾಲಯ, ಗುಲ್ಬರ್ಗಾ ವಿಶ್ವವಿದ್ಯಾಲಯ, ಮಹಿಳಾ ವಿಶ್ವವಿದ್ಯಾಲಯ ಅಥವಾ ಮಂಗಳೂರು ವಿಶ್ವವಿದ್ಯಾಲಯದಿಂದ ನಡೆಸಲಾಗಿದೆ ಎಂದು ಭಾವಿಸತಕ್ಕದ್ದು.

89. ಅಧಿನಿಯಮವು ಇತರ ಅಧಿನಿಯಮಿತಿಗಳಿಗಿಂತ ಹೆಚ್ಚಿನ ಪ್ರಭಾವವುಳ್ಳದ್ದಾಗಿದೆ.- (1) ಈ ಅಧಿನಿಯಮ ಮತ್ತು ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಯಾವುವೇ ಶಾಸನಗಳು ಅಥವಾ ನಿಯಮಗಳು ಅಥವಾ ಪರ್ಯಾದೇಶಗಳು, ವಿಶ್ವವಿದ್ಯಾಲಯ ಪ್ರದೇಶದಲ್ಲಿರುವ ಯಾವುದೇ ಕಾಲೇಜಿಗೆ ಸಂಬಂಧಿಸಿದಂತೆ ಭಾರತ ಸಂವಿಧಾನದ ಏಳನೇ ಅನುಸೂಚಿಯ IIನೇ ಪಟ್ಟಿಯಲ್ಲಿ ನಿರೂಪಿಸಲಾದ ವಿಷಯಗಳ ಸಂಬಂಧದಲ್ಲಿ ಇತರ ಯಾವುದೇ ಅಧಿನಿಯಮಿತಿಯಲ್ಲಿ ಅದಕ್ಕೆ ಅಸಂಗತವಾಗಿ ಏನೇ ಇದ್ದರೂ, ಅವು ಪರಿಣಾಮಕಾರಿಯಾಗಿರತಕ್ಕದ್ದು.

(2) ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಮತ್ತು ದಿನಾಂಕದಿಂದ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಮತ್ತು ಭಾರತದ ರಾಷ್ಟ್ರೀಯ ಕಾನೂನು ವಿದ್ಯಾಲಯ ವಿಶ್ವವಿದ್ಯಾಲಯವನ್ನು ಹೊರತು ಯಾವುದೇ ವಿಶ್ವವಿದ್ಯಾಲಯವು ಕಾನೂನಿನಲ್ಲಿ ಪದವಿ ಪೂರ್ವ ಮಟ್ಟದಲ್ಲಿ ಅಥವಾ ಸ್ನಾತಕೋತ್ತರ ಮಟ್ಟದಲ್ಲಿ ವ್ಯಾಸಂಗ ಕ್ರಮಗಳನ್ನು ಒದಗಿಸುವ ಅಥವಾ ಕಾನೂನಿನಲ್ಲಿ ಯಾವುದೇ ಇತರೆ ಡಿಪ್ಲೋಮಾ ಅಥವಾ ಪ್ರಮಾಣಪತ್ರವನ್ನು ನೀಡುವ ಯಾವುದೇ ಕಾಲೇಜನ್ನು ತೆರೆಯತಕ್ಕದ್ದಲ್ಲ ಮತ್ತು ಸಂಯೋಜಿಸತಕ್ಕದ್ದಲ್ಲ.

90. ವಿಶ್ವವಿದ್ಯಾಲಯದ ಕಾಲೇಜುಗಳ ಸ್ವತ್ತುಗಳು ಮತ್ತು ನೌಕರರು.- (1) ಸರ್ಕಾರವು, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದ ತರುವಾಯ ಯಾವುದೇ ಸಮಯದಲ್ಲಿ, ತಾನು ಅವಶ್ಯಕವೆಂದು ಭಾವಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ತನ್ನ ಯಾವುದೇ ಭೂಮಿಯನ್ನು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯಕ್ಕೆ ಅದರ ಬಳಕೆಗಾಗಿ ವರ್ಗಾಯಿಸಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಸರ್ಕಾರವು ಅಧಿಸೂಚಿಸುವ ದಿನಾಂಕದಂದು ಅಥವಾ ಆ ದಿನಾಂಕದಿಂದ ಜಾರಿಯಲ್ಲಿರುವ ರಾಜ್ಯದ ಯಾವುದೇ ಇತರೆ ಕಾನೂನಿನಲ್ಲಿ ಏನೇ ಇದ್ದರೂ, ಸರ್ಕಾರವು, ಕರ್ನಾಟಕ ವಿಶ್ವವಿದ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾಲಯ, ತುಮಕೂರು ವಿಶ್ವವಿದ್ಯಾಲಯ, ಮಂಗಳೂರು ವಿಶ್ವವಿದ್ಯಾಲಯ, ಕುವೆಂಪು ವಿಶ್ವವಿದ್ಯಾಲಯ, ಗುಲ್ಬರ್ಗಾ ವಿಶ್ವವಿದ್ಯಾಲಯ, ಮಹಿಳಾ ವಿಶ್ವವಿದ್ಯಾಲಯ ಮತ್ತು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕುಲಪತಿಗಳೊಂದಿಗೆ ಸಮಾಲೋಚನೆ ನಡೆಸಿದ ತರುವಾಯ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ,-

(ಎ) ಸ್ನಾತಕೋತ್ತರ ಮಟ್ಟದಲ್ಲಿ ಕಾನೂನು ವ್ಯಾಸಂಗ ಕ್ರಮಗಳನ್ನು ಒದಗಿಸುತ್ತಿರುವಂಥ ವಿಶ್ವವಿದ್ಯಾಲಯ ಕಾಲೇಜುಗಳು ಇದ್ದಲ್ಲಿ ಅವು ಅಥವಾ ಅಂಥ ಯಾವುದೇ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಯಾವುದೇ ವಿಭಾಗವನ್ನು;

(ಬಿ) ಅಂಥ ಆದೇಶದಲ್ಲಿ ನಿರ್ದಿಷ್ಟಪಡಿಸಲಾದಂಥ ಮತ್ತು ತಮ್ಮ ಒಪ್ಪಿಗೆ/ಆಯ್ಕೆ ನೀಡಿರುವಂಥ ಕರ್ನಾಟಕ ವಿಶ್ವವಿದ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾಲಯ, ತುಮಕೂರು ವಿಶ್ವವಿದ್ಯಾಲಯ, ಗುಲ್ಬರ್ಗಾ ವಿಶ್ವವಿದ್ಯಾಲಯ, ಮಂಗಳೂರು ವಿಶ್ವವಿದ್ಯಾಲಯ, ಕುವೆಂಪು ವಿಶ್ವವಿದ್ಯಾಲಯ, ಮಹಿಳಾ ವಿಶ್ವವಿದ್ಯಾಲಯಗಳ ಇಲಾಖೆಗಳ ಅಂಥ ನೌಕರರನ್ನು,

- ಅಂಥ ಆದೇಶದಲ್ಲಿ ನಿರ್ದಿಷ್ಟಪಡಿಸಿರಬಹುದಾದಂಥ ದಿನಾಂಕದಂದು ಅಥವಾ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ವ್ಯವಹಾರಗಳಲ್ಲಿ ಸೇವೆ ಸಲ್ಲಿಸಲು ಹಂಚಿಕೆ ಮಾಡಲಾಗಿದೆಯೆಂದು ನಿರ್ದೇಶಿಸಬಹುದು.

(3) (2)ನೇ ಉಪ ಪ್ರಕರಣದ ಅಡಿಯ ಆದೇಶದಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಂದು ಅಥವಾ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ,-

(i) ಅಂಥ ಆದೇಶದಲ್ಲಿ ನಿರ್ದಿಷ್ಟಪಡಿಸಲಾದ ವ್ಯಕ್ತಿಗಳು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ನೌಕರರಾಗಿರತಕ್ಕದ್ದು ಮತ್ತು ಅವರು ಆಯಾ ವಿಶ್ವವಿದ್ಯಾಲಯದ ನೌಕರರಾಗಿರುವುದು ನಿಂತು ಹೋಗತಕ್ಕದ್ದು,

(ii) ಸದರಿ ವಿಶ್ವವಿದ್ಯಾಲಯಗಳ ಅಂಥ ಸ್ವತ್ತುಗಳು ಆಯಾ ವಿಶ್ವವಿದ್ಯಾಲಯದ ಸ್ವತ್ತುಗಳಾಗಿರುವುದು ನಿಂತುಹೋಗತಕ್ಕದ್ದು ಮತ್ತು ಅವು ಕಾನೂನು ವಿಶ್ವವಿದ್ಯಾಲಯದಲ್ಲಿ ನಿಹಿತವಾಗತಕ್ಕದ್ದು,

(iii) ಹಾಗೆ ವರ್ಗಾವಣೆ ಮಾಡಲಾದ ವಿಶ್ವವಿದ್ಯಾಲಯದ ಕಾಲೇಜುಗಳು ಸಂಬಂಧಪಟ್ಟ ವಿಶ್ವವಿದ್ಯಾಲಯಕ್ಕೆ ಸಂಯೋಜನೆ ಆಗಿರುವುದು ನಿಂತುಹೋಗತಕ್ಕದ್ದು ಮತ್ತು ವಿಶ್ವವಿದ್ಯಾಲಯಕ್ಕೆ ಸಂಯೋಜನೆಯಾಗತಕ್ಕದ್ದು ಮತ್ತು ವಿಶೇಷ ಹಕ್ಕುಗಳಿಗೆ ಪ್ರವೇಶ ಪಡೆಯತಕ್ಕದ್ದು,

(iv) ಈ ಅಧಿನಿಯಮವು ಪ್ರಾರಂಭಗೊಂಡ ದಿನಾಂಕದ ನಿಕಟಪೂರ್ವದಲ್ಲಿ ವಿಶ್ವವಿದ್ಯಾಲಯ ಪ್ರದೇಶದೊಳಗಿನ ಸದರಿ ವಿಶ್ವವಿದ್ಯಾಲಯಗಳ ಮಾನ್ಯತೆಯು ಮುಂದುವರೆದಿರುವ ಎಲ್ಲಾ ಕಾನೂನು ಕಾಲೇಜು ವಿದ್ಯಾರ್ಥಿನಿಲಯಗಳನ್ನು ಈ ಅಧಿನಿಯಮದ ಅಡಿಯಲ್ಲಿ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ ವಿದ್ಯಾರ್ಥಿನಿಲಯಗಳೆಂಬುದಾಗಿ ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಉಪಬಂಧಗಳು ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಅದಕ್ಕನುಸಾರವಾಗಿ ಅನ್ವಯವಾಗಬಹುದು.

(4) (3)ನೇ ಉಪ ಖಂಡದಲ್ಲಿ ಉಲ್ಲೇಖಿಸಲಾದ ಪ್ರತಿಯೊಬ್ಬ ವ್ಯಕ್ತಿಯು, ಸಂದರ್ಭಾನುಸಾರ ಈ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ ಸರ್ಕಾರವು ಅಧಿಸೂಚಿಸಿದ ದಿನಾಂಕದಂದು ಅಥವಾ (3)ನೇ ಉಪಪ್ರಕರಣದ ಅಡಿಯಲ್ಲಿನ ಆದೇಶದಲ್ಲಿ ಆತನು ಹೊಂದಿರುತ್ತಿದ್ದಂತಹದೇ ಪದಾವಧಿಯಲ್ಲಿ, ಅದೇ ಸಂಭಾವನೆ ಹಾಗೂ ನಿವೃತ್ತಿವೇತನ ಅಥವಾ ಉಪದಾನ ಯಾವುದಾದರೂ ಇದ್ದಲ್ಲಿ ಅವು ಮತ್ತಿತರ ವಿಷಯಗಳ ಸಂಬಂಧದಲ್ಲಿ ಅವೇ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಮತ್ತು ಅದೇ ಹಕ್ಕುಗಳು ಹಾಗೂ ವಿಶೇಷಾಧಿಕಾರಗಳೊಂದಿಗೆ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದಲ್ಲಿ ತನ್ನ ಹುದ್ದೆಯನ್ನು ಈ ಅಧಿನಿಯಮವನ್ನು ಜಾರಿಗೆತಂದಿಲ್ಲ ಎಂಬಂತೆ ಧಾರಣ ಮಾಡತಕ್ಕದ್ದು.

(5) (3)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ವ್ಯಕ್ತಿಗಳಿಗೆ ನಿವೃತ್ತಿ ವೇತನ ಮತ್ತು ಉಪದಾನದ ಸಂದಾಯದ ಹೊಣೆಗಾರಿಕೆಯು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಹೊಣೆಯಾಗಿರತಕ್ಕದ್ದು.

91. **ಭವಿಷ್ಯನಿಧಿ ಮತ್ತು ಅಂಥಹನೇ ನಿಧಿಗಳಲ್ಲಿ ಶೇಖರವಾದ ಹಣಗಳ ವರ್ಗಾವಣೆ.**– ಆದೇಶದಲ್ಲಿ ನಿರ್ದಿಷ್ಟಪಡಿಸಲಾದ ದಿನಾಂಕದಂದು 90ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ವ್ಯಕ್ತಿಗಳ ಭವಿಷ್ಯನಿಧಿಯ ಖಾತೆಗಳಿಗೆ ಜಮೆಯಾಗಿರುವ ಮೊಬಲಗನ್ನು ಮತ್ತು ಸೇವಾ ನಿವೃತ್ತಿನಿಧಿ ಅಥವಾ ಅಂಥ ಇತರೆ ನಿಧಿಗಳು ಯಾವುದಾದರೂ ಇದ್ದರೆ ಅವುಗಳನ್ನು 90ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ವ್ಯಕ್ತಿಗಳ ಹೆಸರಿಗೆ ಕರ್ನಾಟಕ ವಿಶ್ವವಿದ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯ, ತುಮಕೂರು ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾಲಯ, ಗುಲ್ಬರ್ಗಾ ವಿಶ್ವವಿದ್ಯಾಲಯ, ಮಂಗಳೂರು ವಿಶ್ವವಿದ್ಯಾಲಯ, ಮಹಿಳಾ ವಿಶ್ವವಿದ್ಯಾಲಯ, ಕುವೆಂಪು ವಿಶ್ವವಿದ್ಯಾಲಯಗಳ ಸೇವಾ ನಿವೃತ್ತಿ ನಿಧಿ ಮತ್ತು ಅಂಥಹವೇ ಇತರ ನಿಧಿಗಳು ಯಾವುದಾದರೂ ಇದ್ದರೆ ಅವುಗಳಲ್ಲಿ ಶೇಖರವಾದ ಮೊಬಲಗಿನಿಂದ ಕಾನೂನು ವಿಶ್ವವಿದ್ಯಾಲಯಕ್ಕೆ ಸಂದಾಯ ಮಾಡತಕ್ಕದ್ದು. ಹಾಗೆ ಸಂದಾಯ ಮಾಡಲಾದ ಮೊಬಲಗು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯವು ತನ್ನ ನೌಕರರ ಪ್ರಯೋಜನಕ್ಕಾಗಿ ಸ್ಥಾಪನೆ ಮಾಡಿದ, ಸೇವಾ ನಿವೃತ್ತಿನಿಧಿ ಅಥವಾ ಅಂಥಹವೇ ನಿಧಿಗಳು ಯಾವುದಾದರೂ ಇದ್ದರೆ ಅವುಗಳ ಭಾಗವಾಗಿರತಕ್ಕದ್ದು.

92. **ತೊಂದರೆಗಳ ನಿವಾರಣೆ.**– (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ ಆ ತೊಂದರೆಯನ್ನು ನಿವಾರಿಸುವ ಉದ್ದೇಶಕ್ಕಾಗಿ ತನಗೆ ಅವಶ್ಯಕವೆಂದು ಕಂಡುಬರುವ ಯಾವುದೇ ಕ್ರಮ ತೆಗೆದುಕೊಳ್ಳಬಹುದು.

(2) (1)ನೇ ಉಪ ಪ್ರಕರಣದ ಅಡಿಯಲ್ಲಿ ಮಾಡಲಾದ ಯಾವ ಆದೇಶವನ್ನೂ ಸದರಿ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದಂಥ ಯಾವುದೇ ತೊಂದರೆಯೂ ಇರಲಿಲ್ಲ ಅಥವಾ ಅದನ್ನು ನಿವಾರಿಸುವ ಅಗತ್ಯವಿರಲಿಲ್ಲ ಎಂಬ ಕಾರಣದ ಮೇಲೆ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ.

(3) ಈ ಪ್ರಕರಣದ ಅಡಿಯಲ್ಲಿ ಪ್ರಕಟಿಸಲಾದ ಪ್ರತಿಯೊಂದು ಆದೇಶವನ್ನು, ಅದನ್ನು ಪ್ರಕಟಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

93. **ನಿರಸನ ಮತ್ತು ಉಳಿಸುವಿಕೆಗಳು.**– (1) ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಅಧ್ಯಾದೇಶ, 2008ನ್ನು (2008ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 5) ಈ ಮೂಲಕ ನಿರಸನಗೊಳಿಸಿದೆ.

(2) ಹಾಗೆ ನಿರಸನಗೊಳಿಸಿದ್ದಾಗ್ಯೂ ಸದರಿ ಅಧ್ಯಾದೇಶದ ಅಡಿಯಲ್ಲಿ ಮಾಡಲಾದ ಯಾವುದೇ ಶಾಸನ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವನ್ನು ಈ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕಾನೂನು ಶಿಕ್ಷಣವು ಸುಗಮವಾಗಿ ಕಾರ್ಯನಿರ್ವಹಿಸಲು ಅದರ ಕಾರ್ಯವಿಧಾನ ಸರಳವಾಗಿರಬೇಕು ಅದಕ್ಕೆ ಸ್ವಾಯತ್ತತೆ ನೀಡಬೇಕು ಹಾಗೂ ಸೂಕ್ತ ಮೂಲ ಸೌಕರ್ಯ ಒದಗಿಸಬೇಕು. ಕಾನೂನು ಶಿಕ್ಷಣ ಮತ್ತು ಕಾನೂನು ವೃತ್ತಿಯನ್ನು ಬಲಪಡಿಸುವುದು, ಕರ್ನಾಟಕದಲ್ಲಿರುವ ಎಲ್ಲಾ ಕಾನೂನು ಕಾಲೇಜುಗಳನ್ನು ಅದಕ್ಕೆ ಸಂಯೋಜಿಸಿ ಕರ್ನಾಟಕದಲ್ಲಿ ಒಂದು ಪ್ರತ್ಯೇಕ ಕಾನೂನು ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದು ಸರ್ಕಾರದ ಪ್ರಮುಖ ಧೇಯೋದ್ದೇಶಗಳಲ್ಲಿ ಒಂದು. ಕರ್ನಾಟಕ ರಾಜ್ಯದಲ್ಲಿ ಕಾನೂನಿನ ವ್ಯವಸ್ಥಿತ ಶಿಕ್ಷಣ, ಬೋಧನೆ, ತರಬೇತಿಗಳ ಮೂಲಕ ಕಾನೂನಿನ ಅಧ್ಯಯನ ಮತ್ತು ಸಂಶೋಧನೆ ನಡಸುವುದಕ್ಕೆ ಮತ್ತು ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳಲ್ಲಿ ಕಾನೂನಿನ ಬಗ್ಗೆ ಅರ್ಥಪೂರ್ಣ ಕಾಳಜಿಯನ್ನು ಮೈಗೂಡಿಸುವುದಕ್ಕೆ ಮುಡಿಪಾದ ಕಾನೂನು ವಿಶ್ವವಿದ್ಯಾಲಯವನ್ನು ಸ್ಥಾಪಿಸಿ ನಿಗಮಿತಗೊಳಿಸುವುದಕ್ಕೆ ಕರ್ನಾಟಕ ಸರ್ಕಾರವು ಉದ್ದೇಶಿಸಿದೆ.

ಉತ್ತರ ಕರ್ನಾಟಕದಲ್ಲಿ ಕಾನೂನು ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕೆಂಬ ನಿರ್ಧಾರವನ್ನು ಪಾದೇಶಿಕ ಅಸಮತೋಲನದ ಬಗ್ಗೆ ಡಾ: ಡಿ.ಎಂ. ನಂಜುಂಡಪ್ಪನವರ ಸಮಿತಿಯ ಶಿಫಾರಸ್ಸಿನ ಅನುಗುಣವಾಗಿ ತೆಗೆದುಕೊಳ್ಳಲಾಗಿದೆ.

ಆದ್ದರಿಂದ ಈ ವಿಧೇಯಕ

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಕ್ರಮದಿಂದ ಅಂದಾಜು 42-00 ಕೋಟಿ ರೂಪಾಯಿಗಳ ಅನಾವರ್ತಕ ವೆಚ್ಚ ಮತ್ತು 6-00 ಕೋಟಿ ರೂಪಾಯಿಗಳ ಆವರ್ತಕ ವೆಚ್ಚವು ಉಂಟಾಗುತ್ತದೆ.

ಕರ್ನಾಟಕ ವಿಧಾನ ಸಭೆಯ ನಡವಳಿಗಳು ಮತ್ತು ಕಾರ್ಯಕಲಾಪಗಳ ನಿಯಮಗಳ ನಿಯಮ 80 (1) ರಲ್ಲಿ ಅಗತ್ಯಪಡಿಸಲಾದಂತೆ ವಿವರಣಾತ್ಮಕ ಹೇಳಿಕೆ

ಕಾನೂನು ಶಿಕ್ಷಣವು ಸುಗಮವಾಗಿ ಕಾರ್ಯನಿರ್ವಹಿಸಲು ಅದರ ಕಾರ್ಯವಿಧಾನ ಸರಳವಾಗಿರಬೇಕು ಅದಕ್ಕೆ ಸ್ವಾಯತ್ತತೆ ನೀಡಬೇಕು ಹಾಗೂ ಸೂಕ್ತ ಮೂಲ ಸೌಕರ್ಯ ಒದಗಿಸಬೇಕು. ಕಾನೂನು ಶಿಕ್ಷಣ ಮತ್ತು ಕಾನೂನು ವೃತ್ತಿಯನ್ನು ಬಲಪಡಿಸುವುದು, ಕರ್ನಾಟಕದಲ್ಲಿರುವ ಎಲ್ಲಾ ಕಾನೂನು ಕಾಲೇಜುಗಳನ್ನು ಅದಕ್ಕೆ ಸಂಯೋಜಿಸಿ ಕರ್ನಾಟಕದಲ್ಲಿ ಒಂದು ಪ್ರತ್ಯೇಕ ಕಾನೂನು ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದು ಸರ್ಕಾರದ ಪ್ರಮುಖ ಧೇಯೋದ್ದೇಶಗಳಲ್ಲಿ ಒಂದು. ಕರ್ನಾಟಕ ರಾಜ್ಯದಲ್ಲಿ ಕಾನೂನಿನ ವ್ಯವಸ್ಥಿತ ಶಿಕ್ಷಣ, ಬೋಧನೆ, ತರಬೇತಿಗಳ ಮೂಲಕ ಕಾನೂನಿನ ಅಧ್ಯಯನ ಮತ್ತು ಸಂಶೋಧನೆ ನಡೆಸುವುದಕ್ಕೆ ಮತ್ತು ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳಲ್ಲಿ ಕಾನೂನಿನ ಬಗ್ಗೆ ಅರ್ಥಪೂರ್ಣ ಕಾಳಜಿಯನ್ನು ಮೈಗೂಡಿಸುವುದಕ್ಕೆ ಮುಡಿಪಾದ ಕಾನೂನು ವಿಶ್ವವಿದ್ಯಾಲಯವನ್ನು ಸ್ಥಾಪಿಸಿ ನಿಗಮಿತಗೊಳಿಸುವುದಕ್ಕೆ ಕರ್ನಾಟಕ ಸರ್ಕಾರವು ಉದ್ದೇಶಿಸಿದೆ.

ಉತ್ತರ ಕರ್ನಾಟಕದಲ್ಲಿ ಕಾನೂನು ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕೆಂಬ ನಿರ್ಧಾರವನ್ನು ಪಾದೇಶಿಕ ಅಸಮತೋಲನದ ಬಗ್ಗೆ ಡಾ: ಡಿ.ಎಂ. ನಂಜುಂಡಪ್ಪನವರ ಸಮೀತಿಯ ಶಿಫಾರಸ್ಸಿನ ಅನುಗುಣವಾಗಿ ತೆಗೆದುಕೊಳ್ಳಲಾಗಿದೆ.

ಕರ್ನಾಟಕ ವಿಧಾನ ಮಂಡಲವು ಅಧಿವೇಶನದಲ್ಲಿ ಇಲ್ಲದಿದ್ದುದರಿಂದ ಹಾಗೂ ವಿಷಯವು ತುರ್ತು ಸ್ವರೂಪವಾದ್ದರಿಂದ ಹಾಗೂ ಮೇಲಿನ ಉದ್ದೇಶಗಳನ್ನು ಸಾಧಿಸುವುದಕ್ಕಾಗಿ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಆಧ್ಯಾದೇಶ, 2008 ನ್ನು (2008 ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 5) ಪ್ರಖ್ಯಾಪಿಸಲಾಯಿತು.

ಈ ವಿಧೇಯಕವನ್ನು ಸದರೀ ಅಧ್ಯಾದೇಶಕ್ಕೆ ಬದಲಾಗಿ ತರಲಾಗಿದೆ.

ಎಸ್. ಸುರೇಶಕುಮಾರ್
ನಗರಾಭಿವೃದ್ಧಿ, ಕಾನೂನು, ನ್ಯಾಯ,
ಮಾನವಹಕ್ಕುಗಳು ಮತ್ತು ಸಂಸದೀಯ
ವ್ಯವಹಾರಗಳ ಸಚಿವರು.

ಎಸ್.ಬಿ. ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ.